
ಗುರುವಾರ, ಜೂನ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 154 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಯ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಮೊದಲ ಬಾರಿ ಅರ್ಜಿ ಸಲ್ಲಿಸಿದವರು ಪ್ರಶ್ನೆಪತ್ರಿಕೆಗೆ ಬಗ್ಗೆ ತಿಳಿದುಕೊಂಡಿರುವುದು ಅವಶ್ಯ.

ಆಳ-ಅಗಲ — ಸಾಮಾಜಿಕ ಮಾಧ್ಯಮಗಳಿಗೆ ಮೂಗುದಾರ
‘ಕೆಎಸ್‌ಆರ್‌ಟಿಸಿ’ ಕೇರಳಕ್ಕೆ ಮಾತ್ರ 10
ಕೋವಿಡ್ ತಡೆಗೆ ಪೋಲಿಯೊ ಲಸಿಕೆ! 4

ಸೆನ್ಸೆಕ್ಸ್	ನಿಫ್ಟಿ	₹/$
51,849 ▼	15,576 ▲	73.09 ▼

ಬಜೆಟ್‌ನಲ್ಲಿ ಮೀಸಲಿರಿಸಿದ ₹35,000 ಕೋಟಿ ಖರ್ಚಿನ ಲೆಕ್ಕ ಕೊಡಿ: ಕೇಂದ್ರಕ್ಕೆ ‘ಸುಪ್ರೀಂ’ ಆದೇಶ

ತರ್ಕರಹಿತ ಲಸಿಕೆ ನೀತಿಗೆ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಲಸಿಕೆ ನೀತಿಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಹಲವು ಕಠಿಣ ಪ್ರಶ್ನೆಗಳನ್ನು ಬುಧವಾರ ಕೇಳಿದೆ. ಆರೋಗ್ಯ ಕಾರ್ಯಕರ್ತರು ಮತ್ತು 45 ವರ್ಷಕ್ಕಿಂತ ಮೇಲಿನವರಿಗೆ ಉಚಿತವಾಗಿ ಲಸಿಕೆ ಹಾಕಲಾಗುತ್ತಿದೆ. 18–44ರ ವಯೋಮಾನದವರಿಗೆ ಉಚಿತ ಲಸಿಕೆ ನೀಡುತ್ತಿಲ್ಲ. ಈ ಲಸಿಕೆ ನೀತಿಯೇ ‘ಸ್ವೇಚ್ಛೆಯದ್ದು’ ಮತ್ತು ‘ಅತಾರ್ಕಿಕ’ವಾದುದು ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್.ಎನ್. ರಾವ್ ಮತ್ತು ಎಸ್. ರವೀಂದ್ರ ಭಟ್ ಅವರ ಪೀಠವು ಹೇಳಿದೆ.

ಕೇಂದ್ರ ಸರ್ಕಾರದ 2021–22ರ ಬಜೆಟ್‌ನಲ್ಲಿ ₹35 ಸಾವಿರ ಕೋಟಿಯನ್ನು ಲಸಿಕೆ ಖರೀದಿಗಾಗಿಯೇ ಮೀಸಲು ಇರಿಸಲಾಗಿದೆ ಎಂಬುದನ್ನು ಪೀಠವು ಉಲ್ಲೇಖಿಸಿದೆ. ಇದರಲ್ಲಿ ಈವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಮತ್ತು 18–44ರ ವಯಸ್ಸಿನವರಿಗೆ ಹಾಕಿಸಲು ಲಸಿಕೆ ಖರೀದಿಗೆ ಈ ಹಣವನ್ನು ಏಕೆ ಬಳಸಬಾರದು ಎಂದು ಕೇಳಿದೆ.


ಲಸಿಕೆ ಅಭಿಯಾನದ ಈವರೆಗಿನ ಮೂರೂ ಹಂತಗಳಲ್ಲಿ ಲಸಿಕೆ ಪಡೆಯಲು ಅರ್ಹತೆ ಇದ್ದವರು ಎಷ್ಟು ಜನರಿದ್ದರು, ಅವರಲ್ಲಿ ಎಷ್ಟು ಜನರಿಗೆ ಒಂದು ಡೋಸ್ ಮತ್ತು ಎಷ್ಟು ಜನರಿಗೆ ಎರಡು ಡೋಸ್ ಲಸಿಕೆ ಹಾಕಿಸಲಾಗಿದೆ, ಗ್ರಾಮೀಣ ಪ್ರದೇಶದ ಜನರೆಷ್ಟು, ನಗರ ಪ್ರದೇಶದ ಜನರೆಷ್ಟು ಎಂಬ ಮಾಹಿತಿಯನ್ನೂ ಸಲ್ಲಿಸಬೇಕು ಎಂದು ಪೀಠವು ಆದೇಶಿಸಿದೆ.

ಲಸಿಕೆ ಹಾಕಿಸಿಕೊಳ್ಳಲು ಅರ್ಹತೆ ಇರುವ ಎಲ್ಲ ವ್ಯಕ್ತಿಗಳಿಗೂ ಈ ವರ್ಷದ ಕೊನೆಯ ಹೊತ್ತಿಗೆ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿತ್ತು. ಹಾಗಾಗಿ, ಲಸಿಕೆ ಹಾಕಿಸಿಕೊಳ್ಳಲು ಬಾಕಿ ಇರುವ ಜನರಿಗೆ ಯಾವಾಗ ಮತ್ತು ಹೇಗೆ ಲಸಿಕೆ ನೀಡಲಾಗುವುದು ಎಂಬ ನೀಲನಕ್ಷೆಯನ್ನು ಸಲ್ಲಿಸಬೇಕು ಎಂದು ಕೇಂದ್ರಕ್ಕೆ ಕೋರ್ಟ್ ಸೂಚಿಸಿದೆ.

ಲಸಿಕೆ ನೀತಿ ರೂಪುಗೊಳ್ಳಲು ಕಾರಣವಾದ ಎಲ್ಲ ದಾಖಲೆಗಳು, ಕಡತ ಟಿಪ್ಪಣಿಗಳು, ಕೋವ್ಯಾಕ್ಸಿನ್, ಕೋವಿಶೀಲ್ಡ್ ಮತ್ತು ಸ್ಪುಟ್ನಿಕ್–ವಿ ಲಸಿಕೆಯ ಈವರೆಗಿನ ಖರೀದಿಯ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ.

ಅಸಾಧಾರಣವಾದ ಬಿಕ್ಕಟ್ಟಿನ ಸಂದರ್ಭದಲ್ಲಿ ಕಾರ್ಯಾಂಗದ ವಿವೇಕ ಮತ್ತು ವಿವೇಚನಾಧಿಕಾರದ ಮೇಲೆ ನಂಬಿಕೆ ಇರಿಸಬೇಕು ಎಂಬ ಕೇಂದ್ರದ ವಾದವನ್ನು ನ್ಯಾಯಾಲಯವು ತಿರಸ್ಕರಿಸಿದೆ.

ಎರಡು ವಾರದಲ್ಲಿ ಪ್ರತಿಕ್ರಿಯೆ ಸಲ್ಲಿಸಿ



- ಉಚಿತವಾಗಿ ಲಸಿಕೆ ಹಾಕಿಸುವಿಕೆಗೆ ಸಂಬಂಧಿಸಿ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಎರಡು ವಾರದಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು
- ಲಸಿಕೆಗಳಿಗೆ ಬೇಡಿಕೆ ಸಲ್ಲಿಸಿದ್ದು ಯಾವಾಗ, ಡೋಸ್‌ಗಳ ಸಂಖ್ಯೆ ಎಷ್ಟು ಮತ್ತು ಅವು ಯಾವಾಗ ಪೂರೈಕೆ ಆಗಲಿವೆ ಎಂಬ ಮಾಹಿತಿಯನ್ನು ಕೇಂದ್ರ ನೀಡಬೇಕು
- ಕೇಳಲಾದ ಪ್ರತಿ ಪ್ರಶ್ನೆಗೂ ಪ್ರತ್ಯೇಕವಾಗಿಯೇ ಮಾಹಿತಿ ಸಲ್ಲಿಸಬೇಕು
- ಇದೇ 30ರಂದು ಮುಂದಿನ ವಿಚಾರಣೆ ನಡೆಯಲಿದೆ

ರಾಜ್ಯಗಳ ನಿಲುವೇನು?

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಜನರಿಗೆ ಉಚಿತವಾಗಿ ಲಸಿಕೆ ಹಾಕಿಸಲಿವೆ ಎಂದು ಕೇಂದ್ರವು ಮೇ 9ರಂದು ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದೆ. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಈ ವಿಚಾರದಲ್ಲಿ ತಮ್ಮ ನಿಲುವೇನು ಎಂಬುದನ್ನು ದೃಢಪಡಿಸಬೇಕು. ಉಚಿತವಾಗಿ ಲಸಿಕೆ ಹಾಕಿಸಲು ಸಿದ್ಧ ಎಂದಾದರೆ ಅದನ್ನು ಪ್ರಮಾಣಪತ್ರದ ಮೂಲಕ ತಿಳಿಸಬೇಕು. ಇದರಿಂದಾಗಿ ಎಲ್ಲರಿಗೂ ಉಚಿತ ಲಸಿಕೆ ದೊರೆಯಲಿದೆ ಎಂಬ ಭರವಸೆಯು ಜನರಲ್ಲಿ ಮೂಡುತ್ತದೆ ಎಂದು ಕೋರ್ಟ್ ಹೇಳಿದೆ.

ದರ ನೀತಿ ಸಂದೇಹಾಸ್ಪದ

ಸೀರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೊಟೆಕ್ ತಯಾರಿಸುವ ಲಸಿಕೆಗಳನ್ನು ಕೇಂದ್ರ ಸರ್ಕಾರ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ 50:25:25 ಅನುಪಾತದಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಈ ನೀತಿಯು ಸ್ಪರ್ಧಾತ್ಮಕ ದರ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಲಭ್ಯತೆಗೆ ಅವಕಾಶ ಕೊಡುವುದಿಲ್ಲ. ಲಸಿಕೆ ತಯಾರಿಕಾ ಕಂಪನಿಗಳ ಜತೆಗೆ ದರ ಮತ್ತು ಪ್ರಮಾಣದಲ್ಲಿ ಮಾತ್ರ ಚೌಕಾಸಿಗೆ ಅವಕಾಶ ಇದೆ. ಕೇಂದ್ರ ಸರ್ಕಾರವು ಈ ಎರಡನ್ನೂ ಮೊದಲೇ ನಿಗದಿ ಮಾಡಿದೆ. ಹಾಗಾಗಿ ಈ ಅವಕಾಶ ಕೈತಪ್ಪಿದೆ. ಸ್ಪರ್ಧಾತ್ಮಕತೆಗಾಗಿಯೇ ಹೆಚ್ಚು ದರ ನಿಗದಿ ಮಾಡಲಾಗಿದೆ ಎಂಬ ಕೇಂದ್ರ ಸರ್ಕಾರದ ಸಮರ್ಥನೆಯ ಬಗ್ಗೆ ಅನುಮಾನ ಮೂಡುತ್ತದೆ ಎಂದು ಪೀಠ ಹೇಳಿದೆ.

ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸಲ್ಲಿಸಿದ ಕಾರಣ ತನಗೆ ಕಡಿಮೆ ದರದಲ್ಲಿ ಲಸಿಕೆ ಸಿಕ್ಕಿದೆ ಎಂದು ಕೇಂದ್ರ ವಾದಿಸುತ್ತಿದೆ. ಹಾಗಿದ್ದರೆ ತಯಾರಾಗುವ ಎಲ್ಲ ಲಸಿಕೆಗಳನ್ನೂ ಕೇಂದ್ರವೇ ಖರೀದಿ ಮಾಡಬಹುದಿತ್ತಲ್ಲವೇ ಎಂದು ಕೋರ್ಟ್ ಪ್ರಶ್ನಿಸಿದೆ. ಲಸಿಕೆ ಖರೀದಿಯಲ್ಲಿ ಕೇಂದ್ರವು ಹೊಂದಿರುವ ಏಕಸ್ವಾಮ್ಯದ ಸ್ಥಿತಿಯೇ ಅತ್ಯಂತ ಕಡಿಮೆ ದರದಲ್ಲಿ ಲಸಿಕೆ ಪಡೆದುಕೊಳ್ಳಲು ಕಾರಣ ಎಂದಾದರೆ, ಲಸಿಕೆ ನೀತಿಯ ಹಿಂದಿನ ತರ್ಕವನ್ನೇ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಏಕೆಂದರೆ, ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ರಾಜ್ಯಗಳು ಈ ನೀತಿಯಿಂದಾಗಿ ಇನ್ನಷ್ಟು ಸಂಕಷ್ಟಕ್ಕೆ ಒಳಗಾಗುತ್ತವೆ ಎಂದು ಪೀಠವು ಹೇಳಿದೆ.

ಇನ್ನೊಂದು ಸುದ್ದಿ 10

ಇದೇ 7ರ ಬಳಿಕವೂ ಲಾಕ್‌ಡೌನ್?

ಒಂದು ವಾರ ವಿಸ್ತರಣೆ: ಹಂತ ಹಂತವಾಗಿ ನಿರ್ಬಂಧ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇರುವುದರಿಂದ ಜೂನ್ 7ರ ನಂತರವೂ ಲಾಕ್‌ಡೌನ್ ವಿಸ್ತರಣೆ ಮಾಡುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗುರುವಾರ ಅಥವಾ ಶುಕ್ರವಾರ ಈ ಕುರಿತು ಅಂತಿಮ ನಿರ್ಧಾರ ಪ್ರಕಟಿಸಲಿದ್ದಾರೆ.

ರಾಜ್ಯದಲ್ಲಿ ಹಂತ ಹಂತವಾಗಿ ಲಾಕ್‌ಡೌನ್ ಸಡಿಲಿಸುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ. ರಾಜ್ಯ ಮಟ್ಟದ ಕೋವಿಡ್ ಕಾರ್ಯಪಡೆ ಹಾಗೂ ಸಚಿವರ ಜತೆ ಬುಧವಾರ ಪ್ರತ್ಯೇಕ ಸಭೆಗಳನ್ನು ನಡೆಸಿದ ಮುಖ್ಯಮಂತ್ರಿ, ಲಾಕ್‌ಡೌನ್ ವಿಸ್ತರಣೆ ಕುರಿತು ಚರ್ಚೆ ನಡೆಸಿದರು.

ಕೆಲವು ಸಡಿಲಿಕೆಗಳೊಂದಿಗೆ ಒಂದು ವಾರದ ಅವಧಿಗೆ ಲಾಕ್‌ಡೌನ್ ವಿಸ್ತರಿಸುವ ತೀರ್ಮಾನಕ್ಕೆ ಬರಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ತಜ್ಞರ ಸಮಿತಿಯ ವರದಿಯ ಆಧಾರದಲ್ಲಿ 15 ದಿನಗಳ ಕಾಲ ನಿರ್ಬಂಧ ಮುಂದುವರಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಜೂನ್ 7ರಿಂದ 14ರವರೆಗೂ ನಿರ್ಬಂಧ ವಿಸ್ತರಿಸಿ, ನಂತರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಆಧರಿಸಿ ಮತ್ತೆ ತೀರ್ಮಾನಕ್ಕೆ ಬರುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಗೊತ್ತಾಗಿದೆ.

ಎರಡೂ ಸಭೆಗಳಿಗೂ ಮೊದಲು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಯಡಿಯೂರಪ್ಪ, ‘ಜೂನ್ 7ರವರೆಗೂ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಕೋವಿಡ್ ನಿಯಂತ್ರಣಕ್ಕೆ ಬಂದಿಲ್ಲ. ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಲೇ ಇವೆ. ಇದರಿಂದಾಗಿ ಕೆಲವು ಬಿಗಿ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ’ ಎಂದು ಲಾಕ್‌ಡೌನ್ ವಿಸ್ತರಣೆಯ ಸುಳಿವು ನೀಡಿದ್ದರು.

‘ಮುಂದೆ ಯಾವುದಕ್ಕೆಲ್ಲ ವಿನಾಯಿತಿ ನೀಡಬೇಕು ಎಂಬುದನ್ನು ಸಚಿವರು ಮತ್ತು ಅಧಿಕಾರಿಗಳ ಜತೆ ಚರ್ಚಿಸಿ ತೀರ್ಮಾನಿಸಲಾಗುವುದು. ಒಂದೆರಡು ದಿನಗಳಲ್ಲಿ ಅಂತಿಮ ನಿರ್ಧಾರವನ್ನು ಪ್ರಕಟಿಸಲಾಗುವುದು’ ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

10ನೇ ಪುಟ ನೋಡಿ

ರಫ್ತು ಆಧಾರಿತ ಕೈಗಾರಿಕೆಗಳಿಗೆ ಅವಕಾಶ

ಸಂಪೂರ್ಣವಾಗಿ ರಫ್ತು ಮಾಡಲಾಗುವ ಉತ್ಪನ್ನಗಳನ್ನೇ ತಯಾರಿಸುವ ಕೈಗಾರಿಕೆಗಳು ಒಟ್ಟು ಸಿಬ್ಬಂದಿಯ ಶೇಕಡ 50ರಷ್ಟು ಮಂದಿಯನ್ನು ಬಳಸಿಕೊಂಡು ಗುರುವಾರದಿಂದ ಕಾರ್ಯಾಚರಣೆ ನಡೆಸಲು ಅವಕಾಶ ಕಲ್ಪಿಸಿ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಬುಧವಾರ ಆದೇಶ ಹೊರಡಿಸಿದ್ದಾರೆ.

ವಿವಿಧ ಹಂತಗಳಲ್ಲಿ ಲಾಕ್‌ಡೌನ್ ಸಡಿಲಿಸುವ ಕಾರ್ಯತಂತ್ರದ ಮೊದಲ ಭಾಗವಾಗಿ ಈ ಆದೇಶ ಹೊರಡಿಸಿದ್ದು, ‘1,000ಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವ ಎಲ್ಲ ಉದ್ದಿಮೆಗಳೂ ಶೇ 10ರಷ್ಟು ಮಂದಿಗೆ ವಾರಕ್ಕೆ ಎರಡು ಬಾರಿ ಕೋವಿಡ್ ಪರೀಕ್ಷೆ ನಡೆಸಬೇಕು’ ಎಂದು ಆದೇಶದಲ್ಲಿ ತಿಳಿಸಿದ್ದಾರೆ.



ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾಗಿರುವ ಕೆಲವು ವರ್ಗದ ಜನರಿಗೆ ಆರ್ಥಿಕ ನೆರವು ಒದಗಿಸುವ ಎರಡನೇ ಪರಿಹಾರ ಪ್ಯಾಕೇಜ್ ಅನ್ನು ಒಂದೆರಡು ದಿನಗಳಲ್ಲಿ ಪ್ರಕಟಿಸಲಾಗುವುದು
ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಮಿಸಳ್ ಹಾಪ್ಚಾ

ಬದುಕಿನ ಸೂತ್ರ ಜೀವನದಾರ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ರಾಜ್ಯ ಕೋವಿಡ್ ಅಂಕಿ–ಅಂಶ

26,35,122 ▲	ಒಟ್ಟು ಸೋಂಕಿತರು (25,67,449 ನಿನ್ನೆಯ ವಿವರ)
2,93,024 ▼	ಸಕ್ರಿಯ ಪ್ರಕರಣಗಳು
23,12,060 ▲	ಗುಣಮುಖರಾದವರು
30,017 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	16,387	▲
ಗುಣಮುಖ	21,199	▼
ಸಾವು	463	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-7

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿಷ್ಕ್ರಿಯ ಸಚಿವರಿಗೆ ಕೊಕ್: ಉತ್ಸಾಹಿ ಯುವಕರಿಗೆ ಸಂಪುಟದಲ್ಲಿ ಮಣೆ? • ಕೆಲವರನ್ನು ಪಕ್ಷ ಸಂಘಟನೆಗೆ ಬಳಕೆ

ಭಿನ್ನಮತೀಯರಿಗೆ ಶಾಸ್ತಿ: ಬಿಜೆಪಿ ವರಿಷ್ಠರ ಆಲೋಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಡಳಿತದ ವೈಖರಿಯ ವಿರುದ್ಧ ಹೇಳಿಕೆ ನೀಡುತ್ತ, ಭಿನ್ನಮತೀಯ ಚಟುವಟಿಕೆಯಲ್ಲಿ ತೊಡಗಿರುವವರಿಗೆ ತಕ್ಕ ಶಾಸ್ತಿ ಮಾಡಲು ಬಿಜೆಪಿ ವರಿಷ್ಠರು ಗಂಭೀರ ಆಲೋಚನೆ ನಡೆಸಿದ್ದಾರೆ.

ಎರಡು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿ ಬೀಡು ಬಿಟ್ಟಿರುವ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಜೊತೆ ಬುಧವಾರ ಚರ್ಚಿಸಿರುವ ವರಿಷ್ಠರು, ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್ಸ್ ಕಂಪನಿಗೆ ಭೂಮಿ ಪರಭಾರೆ ಮಾಡದಿರುವ ತೀರ್ಮಾನ ಕೈಗೊಂಡಿರುವುದೂ ಒಳಗೊಂಡಂತೆ, ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತೂ ವಿಜಯೇಂದ್ರ ಅವರಿಂದ ಮುಖಂಡರು ಮಾಹಿತಿ ಪಡೆದಿದ್ದಾರೆ.

ಬಣ ರಾಜಕೀಯದ ಮೂಲಕ ಯಡಿಯೂರಪ್ಪ ಆಡಳಿತದ ಬಗ್ಗೆ ಗೊಂದಲ ಉಂಟು ಮಾಡುತ್ತಿರುವ ಶಾಸಕರು, ಸಚಿವರ ವಿರುದ್ಧ ವರಿಷ್ಠರು ಕೆಲವೇ ದಿನಗಳಲ್ಲಿ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕೆಲವರು, ‘ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗಲಿದೆ’ ಎಂಬ ವದಂತಿ ಹಬ್ಬಿಸುತ್ತಿರುವುದರಿಂದ ಜನರಿಗೆ ಆಡಳಿತದ ಬಗ್ಗೆ ವಿಶ್ವಾಸ ಮೂಡದ ಸ್ಥಿತಿ ಉಂಟಾಗಿದೆ. ಅಂಥವರು ಸದ್ಯವೇ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಲಿದ್ದಾರೆ ಎಂದು ಪಕ್ಷದ ಮುಖಂಡರೊಬ್ಬರು ಖಚಿತ ಪಡಿಸಿದ್ದಾರೆ.


ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಅವರನ್ನು ಬದಲಿಸಿ, ಬೇರೆಯವರಿಗೆ ಜವಾಬ್ದಾರಿ ವಹಿಸುವ ಪ್ರಸ್ತಾವವೇ ಇಲ್ಲ. ಬದಲಿಗೆ, ಕೊರೊನಾ ಸ್ಥಿತಿಯ ನಿರ್ವಹಣೆ ವಿಷಯದಲ್ಲಿ ಪಕ್ಷಕ್ಕೆ ಹಿನ್ನಡೆ ಉಂಟಾಗಲು ಕಾರಣವಾಗಿರುವ ಪ್ರಮುಖ ಪದಾಧಿಕಾರಿಗಳನ್ನು ಬದಲಿಸಿ, ಪಕ್ಷಕ್ಕೆ ಪುನಶ್ಚೇತನ ನೀಡಲು ನಿರ್ಧರಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಸಚಿವ ಸಂಪುಟ ಪುನರ್ ರಚಿಸುವಂತೆಯೂ ಯಡಿಯೂರಪ್ಪ ಅವರಿಗೆ ಸೂಚಿಸಿರುವ ವರಿಷ್ಠರು, ನಿಷ್ಕ್ರಿಯ ಸಚಿವರನ್ನು ಕೈಬಿಡುವ ಮೂಲಕ ಉತ್ಸಾಹಿ ಯುವಕರಿಗೆ ಅವಕಾಶ ನೀಡುವಂತೆ ತಿಳಿಸಲಿದ್ದಾರೆ. ಇನ್ನೂ ಕೆಲವು ಹಿರಿಯರನ್ನು ಸಂಪುಟದಿಂದ ಕೈಬಿಟ್ಟು, ಪಕ್ಷ ಸಂಘಟನೆಯ ಹೊಣೆ ವಹಿಸಿಕೊಳ್ಳುವಂತೆ ಸೂಚಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ವರಿಷ್ಠರನ್ನು ಭೇಟಿ ಮಾಡಿದ ವಿಜಯೇಂದ್ರ
- ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಮಾಹಿತಿ

‘ಸಮ್ಮಿಶ್ರ ಸರ್ಕಾರ ಪತನಕ್ಕೆ ಪ್ರಸಾದ್ ಮನೆಯಲ್ಲೇ ಮುಹೂರ್ತ’



ಮೈಸೂರು: ‘ಚಾಮುಂಡೇಶ್ವರಿಯಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸುವುದಕ್ಕೆ, ಸಮ್ಮಿಶ್ರ ಸರ್ಕಾರ ಪತನಕ್ಕೆ ಹಾಗೂ ಯಡಿಯೂರಪ್ಪ ಅವರ ಪಟ್ಟಾಭಿಷೇಕಕ್ಕೆ ಸಂಸದ ವಿ. ಶ್ರೀನಿವಾಸಪ್ರಸಾದ್ ಮನೆಯಲ್ಲೇ ಮುಹೂರ್ತ ಇಟ್ಟಿದ್ದು’ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಬಹಿರಂಗಪಡಿಸಿದರು.

ಶ್ರೀನಿವಾಸಪ್ರಸಾದ್ ಮನೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘2018ರಿಂದ ಇದುವರೆಗೆ ಪ್ರಸಾದ್ ಮನೆಯಲ್ಲಿ ಹಲವು ರಾಜಕೀಯ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಪ್ರಸಾದ್ ಹಿರಿಯ ಮುತ್ಸದ್ದಿ. ನಾವೆಲ್ಲಾ ಒಟ್ಟಿಗೆ ಬೆಳೆದವರು’ ಎಂದರು.

ಮತ್ತೆ ಏನಾದರೂ ಮುಹೂರ್ತ ಇಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ, ‘ಸ್ವಲ್ಪ ದಿನ ಕಾಯಿರಿ. ಪರಿಸ್ಥಿತಿ ಈಗ ಅಷ್ಟೊಂದು ಚೆನ್ನಾಗಿಲ್ಲ. ಯಡಿಯೂರಪ್ಪ ಬಗ್ಗೆ ನಮಗೆ ಗೌರವವಿದೆ. ಪಕ್ಷ ಕಟ್ಟಿದ ವ್ಯಕ್ತಿ. ಆದರೆ, ಈಗ ಅವರ ಆರೋಗ್ಯ ಸರಿ ಇಲ್ಲ. ನಮಗೆ ಅವರ ಆರೋಗ್ಯಕ್ಕಿಂತ ಹೆಚ್ಚಾಗಿ ರಾಜ್ಯದ ಆಡಳಿತದ ಆರೋಗ್ಯ ಬಹಳ ಮುಖ್ಯ’ ಎಂದು ಪ್ರತಿಕ್ರಿಯಿಸಿದರು.

‘ಬಿಜೆಪಿಯಲ್ಲಿ ಗೊಂದಲವಿದೆ’



‘ಬಿಜೆಪಿಯಲ್ಲಿ ಗೊಂದಲ ಸೃಷ್ಟಿಯಾಗಿರುವುದು ನಿಜ. ವಿಜಯೇಂದ್ರ, ಯೋಗೇಶ್ವರ್ ಅವರೆಲ್ಲಾ ಹೈಕಮಾಂಡ್ ಭೇಟಿಯಾಗಿ ಪರಸ್ಪರ ದೂರು ನೀಡುತ್ತಿದ್ದಾರೆ. ಆದರೆ, ಈ ಸಂದರ್ಭದಲ್ಲಿ ನಾಯಕತ್ವ ಬದಲಾವಣೆ ಸಾಧ್ಯತೆ ಕಾಣುತ್ತಿಲ್ಲ. ಮೊದಲು ಕೋವಿಡ್ ವಿರುದ್ಧ ಹೋರಾಟ ನಡೆಸಬೇಕಿದೆ’ ಎಂದು ಶ್ರೀನಿವಾಸಪ್ರಸಾದ್ ಹೇಳಿದರು.



ನನ್ನನ್ನು ಸಂಪುಟದಿಂದ ಕೈ ಬಿಡುವಂತೆ ಕೆಲ ಶಾಸಕರು, ಸಚಿವರು ಸಹಿ ಸಂಗ್ರಹ ಮಾಡುತ್ತಿರುವ ಬಗ್ಗೆ ಗೊತ್ತಿಲ್ಲ. ನಮ್ಮದು ರಾಷ್ಟ್ರೀಯ ಪಕ್ಷ. ಎಲ್ಲವನ್ನೂ ಹೈಕಮಾಂಡ್ ತೀರ್ಮಾನಿಸುತ್ತದೆ
ಸಿ.ಪಿ. ಯೋಗೇಶ್ವರ್
ಪ್ರವಾಸೋದ್ಯಮ ಸಚಿವ

‘ವಿಜಯ’ನಗರ ಪತನ; ಸಿ.ಟಿ. ರವಿ ಗೂಢಾರ್ಥ ಕಥನ?



ಬೆಂಗಳೂರು: ವಿಜಯನಗರ ಸಾಮ್ರಾಜ್ಯದ ಕೊನೆಯ ಅರಸ ಅಳಿಯ ರಾಮರಾಯನ ವೈಭೋಗದ ಜೀವನ, ಸ್ವಾರ್ಥ ಕೇಂದ್ರಿತ ಅಧಿಕಾರ ಮತ್ತು ಅಂತ್ಯದ ಕುರಿತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವ ಅಭಿಪ್ರಾಯಗಳು ಸಾಮಾಜಿಕ ಜಾಲತಾಣದಲ್ಲಿ ಬಿಸಿ ಚರ್ಚೆಗೆ ಕಾರಣವಾಗಿದೆ.

ರವಿ ಹೇಳಿರುವ ಕತೆಯನ್ನು ಇಂದಿನ ರಾಜಕಾರಣಕ್ಕೆ ಹೋಲಿಸಿರುವ ಕೆಲವರು, ಇದರ ಹಿಂದಿನ ಗೂಢಾರ್ಥ ಹುಡುಕುವ ಯತ್ನವನ್ನೂ ಮಾಡಿದ್ದಾರೆ. ಅಳಿಯ ರಾಮರಾಯನ ಆಡಳಿತವನ್ನು ಈಗಿನ ಮುಖ್ಯಮಂತ್ರಿ ಯಡಿಯೂರಪ್ಪನವರ ಆಡಳಿತಕ್ಕೆ ಕೆಲವರು ಸಮೀಕರಿಸಿದ್ದರೆ, ಮತ್ತೆ ಕೆಲವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ ಹೇಳಿದ್ದೀರಾ ಎಂದು ಕಾಲೆಳೆದಿದ್ದಾರೆ.

ರವಿ ಹೇಳಿರುವುದೇನು?: ‘ಮರೆಯಲಾಗದ ಮಹಾ ಸಾಮ್ರಾಜ್ಯ’ ವಿಜಯನಗರದ ಏಳುಬೀಳುಗಳ ಕಥೆ ಓದುತ್ತಿದ್ದೆ ವಿ.ನಾಗರಾಜ್ ಹೇಳಿದ ‘ಅಳಿಯ ರಾಮರಾಯ’ನ ಕಥೆ ನೆನಪಾಯಿತು.

‘ರಾಮರಾಯ ಹಲವು ಯುದ್ಧಗಳನ್ನು ಗೆದ್ದ ಅಪ್ರತಿಮ ಸಾಹಸಿ, ಕೂಟ ನೀತಿಯಲ್ಲಿ ನಿಪುಣ. ಆತನ ಸಮಸ್ಯೆಯೆಂದರೆ ಎಲ್ಲರ ಮೇಲೂ ಅನುಮಾನ. ಆಯಕಟ್ಟಿನ ಜಾಗಗಳಲ್ಲಿ ಇದ್ದ ಸಾಮ್ರಾಜ್ಯ ನಿಷ್ಠರನ್ನು ಹೊರನೂಕಿ, ಆ ಜಾಗದಲ್ಲಿ ತನ್ನ ಹೊಗಳು ಭಟರನ್ನು ನೇಮಕ ಮಾಡಿದ. ಎಲ್ಲಡೆ ಅವರದ್ದೇ ಕಾರುಬಾರು. ಆಯಕಟ್ಟಿನ ಜಾಗದಲ್ಲಿ ಇರಬೇಕಾದವರು ರಾಜಧಾನಿಯಲ್ಲಿ ಸ್ಥಿರರಾದರು. ಸಾಮ್ರಾಜ್ಯದ ನೈಜ ವಿಚಾರಗಳನ್ನು ರಾಜನಿಗೆ ತಲುಪಿಸುತ್ತಿದ್ದವರು ಮೂಲೆಗುಂಪಾದರು. ಭಟ್ಟಂಗಿಗಳು ರಾಮರಾಯ ಕೇಳ ಬಯಸುವ ಮಾತುಗಳನ್ನಷ್ಟೇ ಹೇಳಲಾರಂಭಿಸಿದರು. ನೈಜ ಸಂಗತಿ ಮರೆಮಾಚಿದರು’.

‘ರಾಮರಾಯ ನಂಬಬೇಕಾದವರನ್ನು ನಂಬಲಿಲ್ಲ. ಸ್ವಾರ್ಥ ಕೇಂದ್ರಿತ ಅಧಿಕಾರ ಜನಮಾನಸದಲ್ಲಿ ಬಿತ್ತಿದ ಅಸಹನೆಯ ಬೀಜ ನಿಧಾನಕ್ಕೆ ಮರವಾಯಿತು. ಇದೇ ಸಮಯಕ್ಕೆ ಬಿಜಾಪುರದ ಆದಿಲ್‌ಶಾಹಿಗಳ ನೇತೃತ್ವದಲ್ಲಿ ವಿರೋಧಿಗಳು ಒಗ್ಗೂಡಿದರು. ತಪ್ಪು ಯುದ್ಧ ನೀತಿ, ಮೈಮರೆವು, ವೃದ್ಧಾಪ್ಯ, ತತ್ವಹೀನ ರಾಜಕಾರಣ, ಸಾಮ್ರಾಜ್ಯ ವಿರೋಧಿಗಳನ್ನು ಆಯಕಟ್ಟಿನ ಜಾಗದಲ್ಲಿ ಕೂರಿಸಿದ ಫಲ, ಅವರೆಲ್ಲ ಯುದ್ಧಕಾಲದಲ್ಲಿ ಕೈ ಕೊಟ್ಟರು’.

ಆದಿಲ್‌ಶಾಹಿ ಸೈನ್ಯದ ಮೂರು ಪಟ್ಟು ದೊಡ್ಡ ಸೈನ್ಯವಿದ್ದರೂ ತಾಳಿಕೋಟೆ, ರಕ್ಕಸತಂಗಡಿಯ ಯುದ್ಧದಲ್ಲಿ ವಿಜಯನಗರ ಅರಸು ಸೋಲಬೇಕಾಯಿತು. ದಿಕ್ಕೆಟ್ಟ ರಾಮರಾಯನನ್ನು ಮೋಸದಿಂದ ಕೊಂದು, ಭರ್ಜಿಯಲ್ಲಿ ರುಂಡ ಹಿಡಿದಾಕ್ಷಣ ವಿಜಯನಗರ ಸೇನೆ ದಿಕ್ಕೆಟ್ಟು ಓಡಿತು. ಸೇನೆ ಮುನ್ನಡೆಸುವ ನಾಯಕ ಇಲ್ಲದೆ ಸೇನೆಯೂ ದಿಕ್ಕಾಪಾಲಾಯಿತು.

‘ಈ ಕ್ಷಣದಲ್ಲಿ ಭಟ್ಟಂಗಿಗಳ ಬದಲು ಸಾಮ್ರಾಜ್ಯ ನಿಷ್ಠನೊಬ್ಬ ಸೈನ್ಯವನ್ನು ಮುನ್ನಡೆಸಿದ್ದರೆ ಇತಿಹಾಸದ ಗತಿಯೇ ಬದಲಾಗುತ್ತಿತ್ತು. ವ್ಯಕ್ತಿಗತ ಲಾಭಕ್ಕೆ ಆಯಕಟ್ಟಿನ ಸ್ಥಳದಲ್ಲಿದ್ದವರೆಲ್ಲ ರಾಮರಾಯನ ಸಾವಿನ ನಂತರ ತಮ್ಮ ಕುಟುಂಬವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ಕೈಗೆ ಸಿಕ್ಕಿದ್ದನ್ನು ತುಂಬಿಕೊಂಡು ಹೊರಟರು.

ಇತಿಹಾಸದಿಂದ ಪಾಠ ಕಲಿಯಬೇಕಾದ ನಾವು ಎಷ್ಟು ಕಲಿತಿದ್ದೇವೆ? ಪ್ರಜೆಗಳನ್ನು ಬಲಿಗೊಟ್ಟು, ಭಟ್ಟಂಗಿಗಳು ಕೋಟೆಯೊಳಗಿದ್ದರೆ ಸಾಮ್ರಾಜ್ಯ ಎಷ್ಟು ದಿನ ಉಳಿದೀತು? ಮರೆಯಲಾಗದ ಮಹಾ ಸಾಮ್ರಾಜ್ಯ ಪತನ ನಮಗೆ ಪಾಠ ಕಲಿಸಲಾರದೆ? ಹೇ ವಿರೂಪಾಕ್ಷ ನೀನೇ ರಕ್ಷಿಸು ಅನವರತ’.



ಸಂಬಳ–ಸರತಿ ಕಲಬುರ್ಗಿಯ ಸೂಪರ್ ಮಾರ್ಕೆಟ್‌ನಲ್ಲಿರುವ ಇಂಡಿಯನ್ ಬ್ಯಾಂಕ್ ಶಾಖೆಯ ಎದುರು ಬುಧವಾರ ಪಾಲಿಕೆ ಪೌರಕಾರ್ಮಿಕರು ತಮ್ಮ ತಿಂಗಳ ವೇತನ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ವಿದೇಶಿ ಲಸಿಕೆ ಪರೀಕ್ಷೆ ನಿಯಮ ಸಡಿಲ

ನವದೆಹಲಿ (ಪಿಟಿಐ): ಕೋವಿಡ್-19ರ ವಿದೇಶಿ ಲಸಿಕೆಗಳ ಪ್ರತಿ ಬ್ಯಾಚ್‌ಗಳನ್ನೂ ಕೇಂದ್ರೀಯ ಔಷಧ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸುವ ನಿಯಮವನ್ನು ಭಾರತೀಯ ಪ್ರಧಾನ ಔಷಧ ನಿಯಂತ್ರಕರ (ಡಿಜಿಸಿಐ) ಸಂಸ್ಥೆಯು ಸಡಿಲಿಸಿದೆ. ಈ ನಿಯಮವನ್ನು ಸಡಿಲಿಸಿರುವ ಕಾರಣ, ದೇಶದಲ್ಲಿ ವಿದೇಶಿ ಲಸಿಕೆಗಳ ಲಭ್ಯತೆ ಸರಾಗವಾಗಲಿದೆ. ಚೀನಾದ ಸಿನೋವ್ಯಾಕ್ ಲಸಿಕೆಗೂ ಈ ವಿನಾಯಿತಿ ಅನ್ವಯವಾಗಲಿದೆ.

ಪ್ರತಿ ಬ್ಯಾಚ್‌ನ ಲಸಿಕೆಗಳನ್ನೂ ಪರೀಕ್ಷೆಗೆ ಒಳಪಡಿಸಬೇಕು ಎಂಬ ನಿಯಮವನ್ನು ಸಡಿಲಿಸಬೇಕು ಎಂಬ ಮನವಿಯನ್ನು ಫೈಝರ್ ಮತ್ತು ಸಿಪ್ಲಾ ಕಂಪನಿಗಳು ಕೇಂದ್ರ ಸರ್ಕಾರದ ಮುಂದೆ ಇರಿಸಿದ್ದವು. ದೇಶದಲ್ಲಿ ಕೋವಿಡ್-19 ಹರಡುವುದನ್ನು ನಿಯಂತ್ರಿಸಲು ಲಸಿಕೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಆದರೆ, ಈ ಕಾರ್ಯಕ್ರಮವನ್ನು ಮುಂದುವರಿಸಲು ಅಗಾಧ ಪ್ರಮಾಣದಲ್ಲಿ ಲಸಿಕೆಯ ಡೋಸ್‌ಗಳ ಅವಶ್ಯಕತೆ ಇದೆ. ಈ ಪರೀಕ್ಷೆಗಳನ್ನು ತಪ್ಪಿಸುವುದರಿಂದ ತ್ವರಿತವಾಗಿ ಲಸಿಕೆ ಪೂರೈಸಬಹುದು ಎಂದು ಡಿಜಿಸಿಐ ಹೇಳಿದೆ.

‘ಅಮೆರಿಕ, ಬ್ರಿಟನ್, ಐರೋಪ್ಯ ಒಕ್ಕೂಟ, ಜಪಾನ್ ಮತ್ತು ವಿಶ್ವ ಆರೋಗ್ಯ ಸಂಸ್ಥೆಯು ಬಳಕೆಗೆ ಹಾಗೂ ತುರ್ತು ಬಳಕೆಗೆ ಅನುಮತಿ ನೀಡಿರುವ ಲಸಿಕೆಗಳಿಗೆ ಈ ವಿನಾಯಿತಿ ಅನ್ವಯವಾಗಲಿದೆ’ ಎಂದೂ ಹೇಳಿದೆ.

ಚಾಮರಾಜನಗರ: ಗ್ರಾಮೀಣರಿಗೆ ಮತ್ತಷ್ಟು ದೂರವಾದ ಆರೋಗ್ಯ ಸೇವೆ

ಏದುಸಿರು ಬಿಡುತ್ತಿರುವ ಆಸ್ಪತ್ರೆಗಳು

• ಕೆ.ಎಸ್.ಗಿರೀಶ

ಚಾಮರಾಜನಗರ: ಜಿಲ್ಲಾ ಆಸ್ಪತ್ರೆಯಲ್ಲಿ ಮೇ 2ರಂದು ರಾತ್ರಿ ಆಮ್ಲಜನಕ ಕೊರತೆಯಿಂದ ಸಂಭವಿಸಿದ ದುರಂತದ ಬಳಿಕ, ರೋಗಿಗಳಿಗೆ ಆಮ್ಲಜನಕ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಆದರೆ, ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಉಪಕೇಂದ್ರಗಳೇ ಅಕ್ಷರಶಃ ಮರಣಶಯ್ಯೆಯಲ್ಲಿವೆ. ಕಟ್ಟಡಗಳು ಶಿಥಿಲಗೊಂಡಿವೆ. ಜಿಲ್ಲೆಯ ಆರೋಗ್ಯ ವ್ಯವಸ್ಥೆಯೇ ಏದುಸಿರು ಬಿಡುತ್ತಿದೆ.

ಇಂತಹ ಅವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗುವ ಮನಸ್ಥಿತಿಗೆ ಬಂದಿರುವ ಜನರು, ಈಗಾಗಲೇ ಆಚರಣೆಯಲ್ಲಿರುವ ಮೂಢನಂಬಿಕೆಗಳಿಗೆ ಇನ್ನಷ್ಟು ಜೋತುಬಿದ್ದಿದ್ದಾರೆ. ಇದರಿಂದಲಾದರೂ ರೋಗ ನಿರ್ಮೂಲನೆಯಾಗುತ್ತದೆ ಎಂಬ ನಂಬಿಕೆಯಿಂದ ಅಲ್ಲಲ್ಲಿ ಕೋಳಿ ಬಲಿ ಕೊಡುತ್ತಿದ್ದಾರೆ.

ಜಿಲ್ಲೆಯಲ್ಲಿರುವುದು ಕೇವಲ 60 ಪ್ರಾಥಮಿಕ ಆರೋಗ್ಯ ಕೇಂದ್ರಗಳು. ಬಹುತೇಕ ಎಲ್ಲ ಆರೋಗ್ಯ ಉಪಕೇಂದ್ರಗಳು ಹೆಸರಿಲ್ಲದಂತಾಗಿವೆ. ಅವುಗಳಲ್ಲಿ ಕೆಲವು ಬಾಗಿಲು ತೆರೆದು ವರ್ಷಗಳೇ ಕಳೆದಿವೆ. ಹನೂರು ತಾಲ್ಲೂಕಿನಲ್ಲಿರುವ 13 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೇವಲ ಐದು ಮಂದಿ ವೈದ್ಯರಷ್ಟೇ ಕಾರ್ಯ ನಿರ್ವಹಿಸುತ್ತಿದ್ದಾರೆ.

25 ವೈದ್ಯರ ನೇಮಕಾತಿ ಆದೇಶವನ್ನು ಸರ್ಕಾರ ಮೇ 30ರಂದು ಹೊರಡಿಸಿದೆ. ಅವರಲ್ಲಿ ಎಷ್ಟು ವೈದ್ಯರು ಗಡಿಭಾಗದ ಜಿಲ್ಲೆಯ ಕರ್ತವ್ಯಕ್ಕೆ ಬರುತ್ತಾರೆ ಎಂಬುದನ್ನು ಕಾದು ನೋಡಬೇಕು.

ತಮಿಳುನಾಡಿನ ಗಡಿಭಾಗದಲ್ಲಿರುವ ಗೋಪಿನಾಥಂ ಪಂಚಾಯಿತಿ ವ್ಯಾಪ್ತಿಯ 8 ಹಳ್ಳಿಗಳ ಜನರೂ, ಜಿಲ್ಲೆಯ ಆರೋಗ್ಯ ವ್ಯವಸ್ಥೆಯನ್ನು ನೆಚ್ಚಿಕೊಂಡಿಲ್ಲ. ಬಹುತೇಕ ಭರವಸೆಯನ್ನೂ ಕೈಬಿಟ್ಟಿರುವ ಇವರು, ಆರೋಗ್ಯ ಕೆಟ್ಟರೆ 50 ಕಿ.ಮೀ ದೂರದಲ್ಲಿರುವ ತಮಿಳುನಾಡಿನ ಮೆಟ್ಟೂರಿನ ಸರ್ಕಾರಿ ಆಸ್ಪತ್ರೆಗೆ ಹೋಗುತ್ತಿದ್ದಾರೆ.

ಗೋಪಿನಾಥಂ ಪಂಚಾಯಿತಿ ವ್ಯಾಪ್ತಿಯಲ್ಲಿನ ಪುದೂರಿನ ಆರೋಗ್ಯ ಉಪಕೇಂದ್ರದ ಬಾಗಿಲು ತೆರೆದು 5 ವರ್ಷಗಳ ಮೇಲಾಯಿತು ಎನ್ನುತ್ತಾರೆ ಸ್ಥಳೀಯರು.

6ನೇ ಪುಟ ನೋಡಿ



ಕಳೆದ ಐದು ವರ್ಷಗಳಿಂದ ವೈದ್ಯರೇ ಇಲ್ಲದ, ಹನೂರು ತಾಲ್ಲೂಕಿನ ಮೀಣ್ಯಂ ಪ್ರಾಥಮಿಕ ಆರೋಗ್ಯ ಕೇಂದ್ರ ಬಿಕೋ ಎನ್ನುತ್ತಿರುವುದು

ಗ್ರಾಮಾರೋಗ್ಯ ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಎಚ್ಚೆತ್ತ ಸಚಿವ, ಜಿಲ್ಲಾಡಳಿತ!

ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಹಲವು ಮಂದಿ ಮೃತಪಟ್ಟ ಬಳಿಕ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್‌ಕುಮಾರ್ ಅವರು ವಾರಕ್ಕೆರಡು ಬಾರಿ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇವರು ಭೇಟಿ ಕೊಡುವ ಕೋವಿಡ್ ಕೇಂದ್ರಗಳಲ್ಲಿ ಸಂಗೀತ, ನೃತ್ಯ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಆದರೆ, ಕೆಲವೆಡೆ ಸರಿಯಾಗಿ ಊಟ ಕೊಡುತ್ತಿಲ್ಲ, ಸ್ವಚ್ಛತೆ ಇಲ್ಲ ಎಂದು ಸೋಂಕಿತರು ದೂರುತ್ತಾರೆ.

ವಿಶೇಷ ಪುಟ 6

ಅತ್ಯಾಚಾರ ಪ್ರಕರಣ: ಆರೋಪಿ ಬಂಧನ

ಬೆಂಗಳೂರು: ಬಾಂಗ್ಲಾ ಯುವತಿಯ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಗುಂಡು ಹಾರಿಸಿ ಬುಧವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಸೊಬೂಜ್ (30) ಬಂಧಿತ ಆರೋಪಿ. 'ಈತನೂ ಯುವತಿ ಮೇಲೆ ದೌರ್ಜನ್ಯ ನಡೆಸಿದ್ದ. ಘಟನೆ ಬೆಳಕಿಗೆ ಬಂದ ನಂತರ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

'ಆವಲಹಳ್ಳಿ ಸಮೀಪದ ರಾಂಪುರ ಕೆರೆಯ ಬಳಿ ಕಸ ಆಯುವವರ ಶೆಡ್‌ನಲ್ಲಿ ಸೊಬೂಜ್ ತಂಗಿರುವ ಮಾಹಿತಿಯನ್ನು ಪೊಲೀಸರು ಕಲೆಹಾಕಿದ್ದರು. ಆರೋಪಿಯನ್ನು ಬಂಧಿಸಿ ಜೀಪ್‌ನಲ್ಲಿ ಕರೆತರುತ್ತಿದ್ದಾಗ, ಮೂತ್ರ ವಿಸರ್ಜನೆ ಮಾಡಬೇಕೆಂದು ಕೇಳಿಕೊಂಡಿದ್ದ. ಪೊಲೀಸರು ಅದನ್ನು ನಂಬಿ ಆರೋಪಿಯನ್ನು ಜೀಪಿನಿಂದ ಕೆಳಗೆ ಇಳಿಸಿದ್ದರು. ಈ ವೇಳೆ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದ'.

'ಶರಣಾಗುವಂತೆ ಪೊಲೀಸರು ತಿಳಿಸಿದರೂ ಅದಕ್ಕೆ ಒಪ್ಪದ ಆರೋಪಿ, ಪೊಲೀಸ್ ಸಿಬ್ಬಂದಿ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ. ಈ ವೇಳೆ ಪಿಎಸ್ಐ ಶಿವರಾಜ್ ಹಾಗೂ ಹೆಡ್ ಕಾನ್‌ಸ್ಟೆಬಲ್ ದೇವೇಂದ್ರ ನಾಯಕ್ ಗಾಯಗೊಂಡರು. ಶಿವರಾಜ್ ಅವರು ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಿದರು' ಎಂದು ಮಾಹಿತಿ ನೀಡಿದರು.

ಮಳೆಗಾಲ ಪೂರ್ವ ಸಿದ್ಧತೆ ಪರಿಶೀಲನೆ: ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ

ಕಲ್ಕೆರೆ: 2 ಅಡಿಗಳಷ್ಟು ನೀರು ಬರಿದು ಮಾಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲದಲ್ಲಿ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿ ಅನಾಹುತ ಸಂಭವಿಸುವುದನ್ನು ತಪ್ಪಿಸಲು ಮಾಡಿಕೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಪರಿಶೀಲಿಸಲು ಕೆ.ಆರ್.ಪುರ ಕ್ಷೇತ್ರದ ಶಾಸಕರೂ ಆಗಿರುವ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಹೆಬ್ಬಾಳ ಕಣಿವೆಯ ವಿವಿಧ ಪ್ರದೇಶಗಳಿಗೆ ಬುಧವಾರ ಭೇಟಿ ನೀಡಿದರು.

ಕಳೆದ ವರ್ಷ ಗಂಟೆಗೆ 80 ರಿಂದ 90 ಮಿ.ಮೀ ಮಳೆಯಾದಾಗ ಹೆಣ್ಣೂರು ಮುಖ್ಯ ರಸ್ತೆ ಬಳಿ ಹೆಬ್ಬಾಳ ಕಣಿವೆ ತುಂಬಿ ಸಾಯಿ ಲೇಔಟ್, ಗೆದ್ದಲಹಳ್ಳಿ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಸಮಸ್ಯೆಯಾಗಿತ್ತು. ಈ ಬಾರಿ ಇಂತಹ ಅನಾಹುತ ತಡೆಯಲು ಸಿದ್ಧತೆ ಮಾಡಿಕೊಳ್ಳುವಂತೆ ಮುಖ್ಯ ಆಯುಕ್ತರು ಬಿಬಿಎಂಪಿ ರಾಜಕಾಲುವೆ ಹಾಗೂ ಕೆರೆ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಕಲ್ಕೆರೆ ಕೆರೆ ಪರಿಶೀಲನೆ: 183 ಎಕರೆಗಳಷ್ಟು ಪ್ರದೇಶಗಳಲ್ಲಿ ವ್ಯಾಪಿಸಿರುವ ಕಲ್ಕೆರೆ ಕೆರೆ ಹೆಬ್ಬಾಳ ಕಣಿವೆ ಪ್ರದೇಶದಲ್ಲಿದೆ. ಹೊರಮಾವು ಬಳಿ ಜಲಮಂಡಳಿ ನಿರ್ಮಿಸಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ (ಎಸ್‌ಟಿಪಿ) ಶುದ್ಧೀಕರಣಗೊಳ್ಳುವ ತ್ಯಾಜ್ಯ ನೀರನ್ನು ಈ ಜಲಕಾಯಕ್ಕೆ ಹರಿಸಲಾಗುತ್ತದೆ. ಸದಾ ತುಂಬಿರುವ ಈ ಕೆರೆ ಮಳೆಗಾಲದಲ್ಲಿ ಪ್ರವಾಹ ಸೃಷ್ಟಿಗೆ ಕಾರಣವಾಗುತ್ತಿದೆ.

'ಮಳೆಗಾಲಕ್ಕೆ ಪೂರ್ವಭಾವಿಯಾಗಿ ಕಲ್ಕೆರೆಯಲ್ಲಿ ಎರಡು ಅಡಿ ನೀರನ್ನು ಬರಿದು ಮಾಡಿದರೆ, ಮಳೆ ನೀರು ಕೆರೆಯಲ್ಲಿ ಸಂಗ್ರಹವಾಗಲು ಅವಕಾಶವಾಗುತ್ತದೆ. ಈ ಕುರಿತು ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯ ಆಯುಕ್ತರು ಕೆರೆ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಟಿ.ಮೋಹನ್ ಕೃಷ್ಣ ಅವರಿಗೆ ಸೂಚನೆ ನೀಡಿದರು.

ಕಲ್ಕೆರೆಯಲ್ಲಿ ಮಳೆ ನೀರು ಪೂರ್ಣವಾಗಿ ಸಂಗ್ರಹವಾಗುವಂತೆ ಮಾಡುವ ಸಲುವಾಗಿ ನೀರು ತರುವ ತೂಬುಗಳು ಮತ್ತು ತಿರುವು ಗಾಲುವೆಗಳ ಕಾಮಗಾರಿ ನಡೆಯುತ್ತಿದೆ. 1,800 ಮೀಟರ್ ಉದ್ದದ ತಿರುವುಗಾಲುವೆ ನಿರ್ಮಿಸಲಾಗುತ್ತಿದ್ದು, 400 ಮೀ ಉದ್ದದ ಕಾಮಗಾರಿ ಪ್ರಗತಿಯಲ್ಲಿದೆ.

'ಬಾಕಿ ಕಾಮಗಾರಿಯನ್ನು ಆದ್ಯತೆ ಮೇಲೆ ಕೈಗೆತ್ತಿಕೊಂಡು ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಕಾಮಗಾರಿಯಿಂದಾಗಿ, ಮಳೆಗಾಲದ ವೇಳೆ ನೀರು ಹರಿಯಲು ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ರಾಂಪುರ ಕೆರೆ ಪರಿಶೀಲನೆ:

187 ಎಕರೆ ವಿಸ್ತೀರ್ಣದ ರಾಂಪುರ ಕೆರೆಯನ್ನು 'ಮುಖ್ಯಮಂತ್ರಿಯವರ ಶುಭ್ರ ಬೆಂಗಳೂರು ಯೋಜನೆ'ಯಡಿ ₹ 35 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಬಿಬಿಎಂಪಿ ಕ್ರಮಕೈಗೊಂಡಿದೆ. ಈ ಕಾಮಗಾರಿಯನ್ನು ಭೈರತಿ ಬಸವರಾಜು ಹಾಗೂ ಗೌರವ್ ಗುಪ್ತ ಪರಿಶೀಲನೆ ನಡೆಸಿದರು. 'ಮಳೆಗಾಲದ ಒಳಗೆ ಕೆರೆಯ ಅಂಗಳದ ಹೂಳನ್ನು ಸಂಪೂರ್ಣವಾಗಿ ತೆರವು ಮಾಡಬೇಕು ಹಾಗೂ ತಿರುವುಗಾಲುವೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ಭೈರತಿ ಬಸವರಾಜು, 'ಸರ್ವಜ್ಞನಗರ, ಸಿ.ವಿ.ರಾಮನ್ ನಗರ ಹಾಗೂ ಹೆಬ್ಬಾಳದ ಕಡೆಯಿಂದ ಮಳೆಗಾಲದಲ್ಲಿ ಹೆಬ್ಬಾಳ ಕಣಿವೆಗೆ ಸಾಕಷ್ಟು ನೀರು ಹರಿದು ಬರುತ್ತದೆ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಸಮಸ್ಯೆ ಆಗುವುದನ್ನು ತಪ್ಪಿಸಲು ಕ್ರಮಕೈಗೊಳ್ಳಬೇಕು' ಎಂದು ಮುಖ್ಯ ಆಯುಕ್ತರಿಗೆ ಸೂಚಿಸಿದರು.

'ಹೆಬ್ಬಾಳ ಕಣಿವೆ ಮೂಲಕ ಕಲ್ಕೆರೆ, ರಾಂಪುರ ಕೆರೆಗಳಿಗೆ ಮಳೆನೀರು ಹರಿದು ಹೋಗಲಿದೆ. ಗಂಟೆಗೆ 60 ಮಿ.ಮೀ ಮಳೆಯಾದಾಗ ಈ ಕಣಿವೆಯ ತಗ್ಗು ಪ್ರದೇಶಗಳಲ್ಲಿ ಯಾವುದೇ ಸಮಸ್ಯೆ ಎದುರಾಗುವುದಿಲ್ಲ. 80 ಮಿ.ಮೀ.ಗಿಂತ ಹೆಚ್ಚು ಮಳೆಯಾದರೆ ಸಮಸ್ಯೆ ಆಗಲಿದೆ. ಇಲ್ಲಿನ ರೈಲ್ವೆ ಸೇತುವೆ ಕಿರಿದಾಗಿರುವುದರಿಂದ ಸಮಸ್ಯೆ ಸೃಷ್ಟಿಯಾಗುತ್ತಿದೆ. ಇದರ ವಿಸ್ತರಣೆಗೆ ರೈಲ್ವೆ ಇಲಾಖೆ ಜೊತೆ ಮಾತುಕತೆ ನಡೆಸಲಾಗಿದ್ದು, ಅವರು ಅನುಮತಿ ನೀಡಿದ್ದಾರೆ. ಸೇತುವೆಯ ಅಗಲ ಹೆಚ್ಚಿಸಿದರೆ ಗಂಟೆಗೆ 130 ಮಿ.ಮೀ ಮಳೆಯಾದರೂ ಸಮಸ್ಯೆಯಾಗದು' ಎಂದು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಮಾಹಿತಿ ನೀಡಿದರು.

ವಲಯ ಆಯುಕ್ತ ಡಿ.ರಂದೀಪ್, ಜಂಟಿ ಆಯುಕ್ತ ವೆಂಕಟಾಚಲಪತಿ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.



ಕಲ್ಕೆರೆ ಕೆರೆಗೆ ತ್ಯಾಜ್ಯ ನೀರು ಸೇರದಂತೆ ತಡೆಯುವ ಕಾಮಗಾರಿಯನ್ನು ಭೈರತಿ ಬಸವರಾಜು ಹಾಗೂ ಗೌರವ್ ಗುಪ್ತ ಬುಧವಾರ ಪರಿಶೀಲಿಸಿದರು

ಸುದ್ದಿ 2 ನಿಮಿಷ

'ವೈದ್ಯರು ಸೇತುವೆಯಂತೆ ಕಾರ್ಯನಿರ್ವಹಿಸಬೇಕು'

ಬೆಂಗಳೂರು: 'ಸರ್ಕಾರಿ ಆಸ್ಪತ್ರೆಗಳಿಗೆ ಹೆಚ್ಚಾಗಿ ಕೆಳ–ಮಧ್ಯಮ ವರ್ಗದ ಜನರು ಬರುತ್ತಾರೆ. ಅವರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಶ್ರಮಿಸಿ, ಸರ್ಕಾರಿ ಆಸ್ಪತ್ರೆಗಳ ಬಗೆಗಿನ ಜನರ ಮನೋಧೋರಣೆ ಬದಲಿಸಬೇಕು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ನೂತನವಾಗಿ ನೇಮಕಗೊಂಡ ವೈದ್ಯರ ಜತೆಗೆ ಆರೋಗ್ಯ ಇಲಾಖೆ ಬುಧವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಖಾಸಗಿ ಆಸ್ಪತ್ರೆಗಳಲ್ಲಿ ಸಿಗುವ ಗುಣಮಟ್ಟದ ವೈದ್ಯಕೀಯ ಸೇವೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವುದಿಲ್ಲ ಎಂಬ ಭಾವನೆ ಜನರಲ್ಲಿದೆ. ಹೊಸ ವೈದ್ಯರು ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ಕೆಲಸ ಮಾಡಿ, ಆ ಆಸ್ಪತ್ರೆಗಳನ್ನು ವಿಶ್ವದರ್ಜೆಯ ಆಸ್ಪತ್ರೆಗಳನ್ನಾಗಿ ಪರಿವರ್ತಿಸಬೇಕು. ಕಾರ್ಪೊರೇಟ್ ವಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸಿ, ಸರ್ಕಾರಿ ಆಸ್ಪತ್ರೆಗಳ ಗುಣಮಟ್ಟ ಹೆಚ್ಚಿಸುವ ಸಂಕಲ್ಪ ತೊಡಬೇಕು' ಎಂದರು.

ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಕೆ.ವಿ.ತ್ರಿಲೋಕ್ ಚಂದ್ರ ಇದ್ದರು.



'ವಂಡರ್ ಲಾ: ಶೇ 50 ರಿಯಾಯಿತಿ'

ಬೆಂಗಳೂರು: ಮೋಜಿನ ಆಟದ ಪ್ರಿಯರಿಗಾಗಿ ವಂಡರ್ ಲಾ ವಿಶೇಷ ಕೊಡುಗೆ ನೀಡಲು ಮುಂದಾಗಿದೆ. ಈ ಸಂದರ್ಭದಲ್ಲಿ ವಂಡರ್ ಲಾ ಟಿಕೆಟ್ ಕಾಯ್ದಿರಿಸುವವರಿಗೆ ಶೇ 50 ರಷ್ಟು ರಿಯಾಯಿತಿಯನ್ನು ಅದು ಘೋಷಿಸಿದೆ.

ಈಗ ಮುಂಗಡ ಕಾಯ್ದಿರಿಸಿಕೊಂಡರೆ, ಸರ್ಕಾರದ ನಿಯಮ ಸಡಿಲಗೊಂಡು ರೆಸ್ಟೋರೆಂಟ್ ತೆರೆಯಲು ಅವಕಾಶ ನೀಡಿದ ಕೂಡಲೇ ಈ ಸೌಲಭ್ಯ ಒದಗಿಸಲಾಗುತ್ತದೆ. ಇವರಿಗೆ ಟಿಕೆಟ್ ದರದಲ್ಲಿ ಶೇ 50ರಷ್ಟು ರಿಯಾಯಿತಿ ಸಿಗಲಿದೆ. ಯಾವುದೇ ದಿನವಾದರೂ ಈ ಟಿಕೆಟ್‌ನೊಂದಿಗೆ ವಂಡರ್‌ಲಾಗೆ ಭೇಟಿ ನೀಡಬಹುದು.ಇದು ಬೆಂಗಳೂರು, ಕೊಚ್ಚಿ, ಹೈದರಾಬಾದ್‌ನಲ್ಲಿರುವ ಎಲ್ಲ ವಂಡರ್‌ಲಾದಲ್ಲಿಯೂ ಅನ್ವಯವಾಗಲಿದೆ.

ಗ್ರಾಹಕರು ಜೂನ್ 6ರವರೆಗೆ ಟಿಕೆಟ್ ಕಾಯ್ದಿರಿಸಲು ಅವಕಾಶ ನೀಡಲಾಗಿದೆ. ವಿವರಗಳಿಗೆ ವಂಡರ್‌ಲಾ ವೆಬ್‌ಸೈಟ್ https://www.wonderla.com ವೀಕ್ಷಿಸಬಹುದು.



ಮಾಸ್ಕ್ ಮಾರಾಟ

ನಾಯಂಡಹಳ್ಳಿಯ ಹೊರವರ್ತುಲ ರಸ್ತೆಯಲ್ಲಿ ಸುಡುಬಿಸಿಲಿನ ನಡುವೆ ವ್ಯಾಪಾರಿಯೊಬ್ಬರು ಛತ್ರಿಗೆ ಮುಖಗವಸುಗಳನ್ನು (ಮಾಸ್ಕ್) ನೇತು ಹಾಕಿ ಮಾರಾಟ ಮಾಡುತ್ತಿರುವುದು ಬುಧವಾರ ಕಂಡುಬಂತು–ಪ್ರಜಾವಾಣಿ ಚಿತ್ರ

ಶವ ಕೊಡದೆ ಹಣಕ್ಕೆ ಆಸ್ಪತ್ರೆ ಒತ್ತಾಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಚಿಕಿತ್ಸಾ ಶುಲ್ಕವನ್ನು ಪಾವತಿಸದಿದ್ದರೆ ಶವಗಳನ್ನು ಹಸ್ತಾಂತರಿಸುವುದಿಲ್ಲ ಎಂದು ಪಟ್ಟಣದ ಸ್ವಾಸ್ಥ್ಯ ಆಸ್ಪತ್ರೆಯವರು ಪಟ್ಟು ಹಿಡಿದಿದ್ದರಿಂದ ಮೃತರ ಸಂಬಂಧಿಕರು ಮತ್ತು ಆಸ್ಪತ್ರೆಯ ಸಿಬ್ಬಂದಿ ನಡುವೆ ಗಲಾಟೆ ನಡೆಯಿತು.

ಕೋವಿಡ್‌ನಿಂದ ಮೃತಪಟ್ಟ ಇಬ್ಬರ ಚಿಕಿತ್ಸಾ ಶುಲ್ಕ ₹ 3 ಲಕ್ಷ ಬಾಕಿ ಇದೆ. ಅದನ್ನು ಪಾವತಿಸಬೇಕು ಎಂದು ಆಸ್ಪತ್ರೆ ಸಿಬ್ಬಂದಿ ಒತ್ತಾಯಿಸಿದ್ದರು.

'ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳು ಮಾತ್ರ ಇದ್ದು ಜೀವನ ನಡೆಸುವುದೇ ಕಷ್ಟವಾಗಿದೆ. ಇಷ್ಟೊಂದು ಹಣ ಎಲ್ಲಿಂದ ತರುವುದು' ಮೃತರ ಸಂಬಂಧಿ ದೀಪಾ ಗೋಳು ತೋಡಿಕೊಂಡರು ಆಸ್ಪತ್ರೆ ಸಿಬ್ಬಂದಿ ಪಟ್ಟು ಸಡಿಲಿಸಿರಲಿಲ್ಲ.

ನಂತರ, ಸ್ಥಳಕ್ಕೆ ಬಂದ ತಹಶೀಲ್ದಾರ್ ಮತ್ತು ಅಧಿಕಾರಿಗಳ ತಂಡ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ತಹಶೀಲ್ದಾರ್ ಕೆ. ಮಂಜುನಾಥ್, 'ತಕ್ಷಣವೇ ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಬೇಕು. ಇದು ಎಲ್ಲ ಆಸ್ಪತ್ರೆಗಳಿಗೂ ಅನ್ವಯಿಸುತ್ತದೆ' ಎಂದರು.

'ರೋಗಿಗಳ ಕಡೆಯವರು ಸರ್ಕಾರಿ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಮಾಡಿಸಿಲ್ಲ. ಸರ್ಕಾರಕ್ಕೆ ಮಾಹಿತಿಯನ್ನೂ ನೀಡಿಲ್ಲ. ಮಾಹಿತಿ ನೀಡಿದರೆ ರೋಗಿಗಳು ಎಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರೋಗದ ಹಿನ್ನೆಲೆ ಮತ್ತು ಇಲಾಖೆಯಿಂದ ಮೇಲ್ವಿಚಾರಣೆ ನಡೆಸಲು ಸಹಕರಿಸಿದಂತಾಗುತ್ತದೆ' ಎಂದೂ ಹೇಳಿದರು.



ತಹಶೀಲ್ದಾರ್ ಮಂಜುನಾಥ್ ರೋಗಿಯ ಸಂಬಂಧಿಕರಿಗೆ ಸಾಂತ್ವನ ಹೇಳಿದರು.

ಮಳಿಗೆಯಿಂದ ಕಾರು ಕಳವು: ಇಬ್ಬರು ವಿದೇಶಿಯರ ಬಂಧನ

ಬೆಂಗಳೂರು: ಕಾರು ಮಳಿಗೆಯೊಂದರಿಂದ ದುಬಾರಿ ಕಾರುಗಳನ್ನು ಕದ್ದು ಪರಾರಿಯಾಗಿದ್ದ ಇಬ್ಬರು ವಿದೇಶಿ ಪ್ರಜೆಗಳನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

ಸಂಪಿಗೇಹಳ್ಳಿ ಬಳಿಯ ತಿರುಮೇನಹಳ್ಳಿಯಲ್ಲಿ ವಾಸವಿದ್ದ ಲಿಬಿಯಾದ ಸಫಿ ಎಡ್ಡೆನ್ ಗುಮಾ ತಾಹರ್ ಬೆನ್ ಹಮ್ಮೆದ್ (27) ಹಾಗೂ ನೈಜೀರಿಯಾದ ಜಾನ್ ನೆರೊ (25) ಬಂಧಿತರು.

ಫೆ.24ರ ಮುಂಜಾನೆ ಆರೋಪಿಗಳು ಯಲಹಂಕದ ಕೋಗಿಲು ವೃತ್ತದ ಸಮೀಪವಿರುವ ಕಿಯಾ ಕಾರಿನ ಮಳಿಗೆಗೆ ನುಗ್ಗಿ, ಕಾವಲುಗಾರರಿಗೆ ಚಾಕು ತೋರಿಸಿ ಬೆದರಿಸಿದ್ದರು. ಎರಡು ಎಸ್‌ಯುವಿ ಕಾರುಗಳ ಬೀಗ ಕಸಿದು, ಕಾರಿನೊಂದಿಗೆ ಪರಾರಿಯಾಗಿದ್ದರು. ಈ ಎಲ್ಲ ಘಟನೆ ಮಳಿಗೆಯಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಪೊಲೀಸರು ಸಿಸಿಟಿವಿ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಬಂಧಿಸಿದ್ದಾರೆ.

'ಆರೋಪಿಗಳಿಬ್ಬರೂ ವಿದ್ಯಾರ್ಥಿ ವೀಸಾ ಪಡೆದು ಭಾರತಕ್ಕೆ ಬಂದಿದ್ದರು. ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ಆರಂಭಿಸಿ, ಅರ್ಧದಲ್ಲೇ ನಿಲ್ಲಿಸಿದ್ದರು. ಮಾದಕ ವಸ್ತುಗಳ ವ್ಯಸನಿಗಳಾಗಿದ್ದ ಇವರು, ಕದ್ದ ಕಾರುಗಳನ್ನು ಬೆಂಗಳೂರಿನಲ್ಲಿ ನೆಲೆಸಿರುವ ಆಫ್ರಿಕಾ ಪ್ರಜೆಗಳಿಗೆ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ನೌಕರರ ಕುಟುಂಬಕ್ಕೆ ಪ್ರೆಸ್ಟೀಜ್ ನೆರವು

ಬೆಂಗಳೂರು: ಕೋವಿಡ್ ಸಾಂಕ್ರಾಮಿಕಕ್ಕೆ ತುತ್ತಾಗುವ ತನ್ನ ನೌಕರರ ಕುಟುಂಬದವರ ನೆರವಿಗೆ ಟಿಟಿಕೆ ಪ್ರೆಸ್ಟೀಜ್ ಕಂಪನಿ ಮುಂದಾಗಿದೆ. ನೌಕರ ಕೋವಿಡ್‌ನಿಂದಾಗಿ ಮೃತಪಟ್ಟರೆ, ಅವರ ಕುಟುಂಬಕ್ಕೆ ಒಂದು ವರ್ಷದ ಅವಧಿಗೆ ಕಂಪನಿಯ ಕಡೆಯಿಂದ ನೌಕರನ ಪೂರ್ತಿ ವೇತನ ಕೊಡಲಾಗುತ್ತದೆ.

ಎರಡನೆಯ ವರ್ಷದಲ್ಲಿ, ನೌಕರನ ಸಂಬಳದ ಶೇಕಡ 50ರಷ್ಟನ್ನು ಕುಟುಂಬಕ್ಕೆ ನೀಡಲಾಗುತ್ತದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ನೌಕರ ಮೃತಪಟ್ಟ ದಿನದಿಂದ ಎರಡು ವರ್ಷಗಳವರೆಗೆ, ಆತ ನಾಮನಿರ್ದೇಶನ ಮಾಡಿದ್ದ ಕುಟುಂಬದ ಸದಸ್ಯರಿಗೆ ವೈದ್ಯಕೀಯ ವಿಮೆಯ ಸೌಲಭ್ಯ ಮುಂದುವರಿಯಲಿದೆ.

ಕುಟುಂಬದ ಸದಸ್ಯರು ನೌಕರಿ ಮಾಡಲು ಸಿದ್ಧರಿದ್ದರೆ, ಅವರಿಗೆ ಅಗತ್ಯ ಕೌಶಲ ಇದ್ದರೆ, ಉದ್ಯಮಕ್ಕೆ ಅವರ ಅಗತ್ಯ ಇದ್ದರೆ, ಮೃತ ಕುಟುಂಬದ ಒಬ್ಬ ಸದಸ್ಯನಿಗೆ ಉದ್ಯೋಗ ಕಲ್ಪಿಸುವ ಗುರಿ ಕಂಪನಿಗೆ ಇದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಸಿ.ಡಿ ಪ್ರಕರಣ: ಜಾಮೀನಿಗೆ ಆಕ್ಷೇಪ

ಬೆಂಗಳೂರು: ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಸಿ.ಡಿ ಪ್ರಕರಣದ ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಬುಧವಾರ ಆಕ್ಷೇಪಣೆ ಸಲ್ಲಿಸಿದೆ.

ಸಿ.ಡಿ ಸಂಬಂಧ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಆರೋಪಿಗಳು ಎನ್ನಲಾದ ನರೇಶ್ ಗೌಡ ಹಾಗೂ ಶ್ರವಣ್ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

'ಆರೋಪಿಗಳಿಗೆ ಜಾಮೀನು ಮಂಜೂರಾದರೆ, ತನಿಖೆಗೆ ತೊಡಕಾಗುವ ಸಾಧ್ಯತೆಗಳಿವೆ' ಎಂದು ಎಸ್‌ಐಟಿ ಪರ ವಕೀಲರು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಆರೋಪಿ ಪರ ವಕೀಲ ಜಾಮೀನು ಮಂಜೂರಿಗೆ ಕೋರಿದ್ದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ ಜೂ.8ಕ್ಕೆ ತೀರ್ಪು ಕಾಯ್ದಿರಿಸಿದೆ.



ಸುಬ್ರಹ್ಮಣ್ಯಪುರದಲ್ಲಿ ಆಟೊ ರಿಕ್ಷಾ ಚಾಲಕರು, ಪೌರಕಾರ್ಮಿಕರು ಸೇರಿದಂತೆ 2,500 ಬಡ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ಶಾಸಕ ಎಂ. ಕೃಷ್ಣಪ್ಪ ವಿತರಿಸಿದರು. ಪಾಲಿಕೆ ಮಾಜಿ ಸದಸ್ಯರಾದ ಹನುಮಂತಯ್ಯ, ರಮೇಶ್ ರಾಜು ಮತ್ತು ಉತ್ತರಹಳ್ಳಿ ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎ. ವಿಜಯ್ ಕುಮಾರ್ ಬಾಬು ಇದ್ದರು.

ಬ್ಯಾಂಕ್ ಖಾತೆ ಬ್ಲಾಕಿಂಗ್: ಯಶಸ್ವಿ ಕಾರ್ಯಾಚರಣೆ

ಸೈಬರ್ ವಂಚಕರ ಕೈಸೇರುತ್ತಿದ್ದ ₹48 ಕೋಟಿ ತಡೆ ಹಿಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರನ್ನು ವಂಚಿಸಿ ಕ್ಷಣ ಮಾತ್ರದಲ್ಲಿ ಭಾರಿ ಮೊತ್ತದ ಹಣ ದೋಚುತ್ತಿದ್ದ ಸೈಬರ್ ವಂಚಕರ ಖಾತೆ ಸೇರುತ್ತಿದ್ದ ಸುಮಾರು ₹48 ಕೋಟಿಯನ್ನು ತಡೆಹಿಡಿಯುವಲ್ಲಿ ಬೆಂಗಳೂರು ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.



ಕಮಲ್ ಪಂತ್

'ಸೈಬರ್ ವಂಚನೆಗೆ ಒಳಗಾದವರು ತಕ್ಷಣವೇ ಪೊಲೀಸ್ ಕಂಟ್ರೋಲ್ ರೂಂ 112 ಅಥವಾ 100ಕ್ಕೆ ಕರೆ ಮಾಡಿದರೆ, 'ಬ್ಯಾಂಕ್ ಅಕೌಂಟ್ ಬ್ಲಾಕಿಂಗ್ ಸಿಸ್ಟಂ' ತಾಂತ್ರಿಕತೆಯ ಮೂಲಕ 'ಗೋಲ್ಡನ್ ಅವರ್' ಬಳಸಿಕೊಂಡು, ನಿಮ್ಮ ಖಾತೆಯಿಂದ ಹಣ ತಲುಪಿರುವ ಬೇರೆ ಖಾತೆಯನ್ನು ಬ್ಲಾಕ್ ಮಾಡಿಸಿ ಹಣವನ್ನು ಹಿಂಪಡೆಯಬಹುದು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದ್ದಾರೆ.

'ಈ ಪ್ರಕ್ರಿಯೆ ವಂಚನೆಗೆ ಒಳಗಾದ ಕೆಲವೇ ಸಮಯದೊಳಗೆ ಮಾತ್ರ ನಡೆಯಲಿದ್ದು, ಆ ಸಮಯವನ್ನು 'ಗೋಲ್ಡನ್ ಅವರ್' ಎನ್ನಲಾಗುವುದು. ವಂಚನೆಗೆ ಒಳಗಾದವರು ತಕ್ಷಣವೇ ಮಾಹಿತಿ ನೀಡಿದರೆ, ವಂಚಕರ ಕೈಸೇರುವ ಮುನ್ನ ಹಣ ವಾಪಸ್ ಪಡೆಯಲು ಅವಕಾಶ ಇರುತ್ತದೆ'.

'ಬ್ಯಾಂಕ್ ಅಕೌಂಟ್ ಬ್ಲಾಕಿಂಗ್ ಸಿಸ್ಟಂ' ತಂತ್ರಜ್ಞಾನ ಬಳಸಿ, ಕಳೆದ ಡಿಸೆಂಬರ್‌ನಿಂದ ಮೇ ವರೆಗೆ ದಾಖಲಾಗಿದ್ದ 3,175 ವಂಚನೆ ಪ್ರಕರಣಗಳ ಪೈಕಿ 1,312 ಬ್ಯಾಂಕ್ ಖಾತೆಗಳನ್ನು ಬ್ಲಾಕ್ ಮಾಡಲಾಯಿತು. ಇದರಿಂದ ₹48.24 ಕೋಟಿ ಹಣವನ್ನು ಸೈಬರ್ ವಂಚಕರ ಕೈಸೇರದಂತೆ ತಡೆಯಲಾಗಿದೆ' ಎಂದು ಪಂತ್ ಮಾಹಿತಿ ನೀಡಿದರು.

ವಿಭಾಗ	ಜಪ್ತಿ ಮಾಡಲಾದ ಖಾತೆಗಳು
ದಕ್ಷಿಣ	615
ಆಗ್ನೇಯ	595
ಉತ್ತರ	521
ಪೂರ್ವ	439
ವೈಟ್‌ಫೀಲ್ಡ್	439
ಪಶ್ಚಿಮ	351
ಈಶಾನ್ಯ	106
ಕೇಂದ್ರ	79

ಅಪರಾಧ ಸುದ್ದಿ

ಪೊಲೀಸರ ಸೋಗಿನಲ್ಲಿ ಬೈಕ್ ಕಳ್ಳತನ: ಬಂಧನ

ಬೆಂಗಳೂರು: ಮಾಲೀಕನಿಂದ ಹಣ ದೋಚುವುದಕ್ಕಾಗಿ ನಕಲಿ ಪೊಲೀಸರ ತಂಡ ರಚಿಸಿ, ಮಾಲೀಕನ ಬೈಕ್, ಎಟಿಎಂನಲ್ಲಿದ್ದ ಹಣ ಕಳವು ಮಾಡಿಸಿರುವ ನಾಲ್ಕು ಮಂದಿಯನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಬಸವೇಶ್ವರನಗರದ ನಿವಾಸಿ ಶರತ್ ಶೆಟ್ಟಿ (25), ಮೂಡಲಪಾಳ್ಯದ ಪೂರ್ವಿಕ್ ರಾಜ್ (21), ಚೋಳರಪಾಳ್ಯದ ಮೋಹನ್ ಕುಮಾರ್ (24), ಜಾಲಹಳ್ಳಿಯಲ್ಲಿ ವಾಸವಿದ್ದ ತಪಸ್ ರಾಯ್ (24) ಬಂಧಿತರು.

'ಜಾಲಹಳ್ಳಿಯಲ್ಲಿ ವಾಸವಿದ್ದ ಪಶ್ಚಿಮ ಬಂಗಾಳದ ತಪನ್ ಬಿಸ್ವಾಸ್ ವಂಚನೆಗೆ ಒಳಗಾದ ವ್ಯಕ್ತಿ. ಬಂಧಿತ ತಪಸ್ ಇವರ ಬಳಿಯೇ ಕೆಲಸ ಮಾಡಿಕೊಂಡಿದ್ದು, ಈ ಕೃತ್ಯ ಎಸಗಿದ್ದಾನೆ. ಬಂಧಿತರಿಂದ ₹41 ಸಾವಿರ ನಗದು, ಒಂದು ಸ್ಕೂಟರ್ ಹಾಗೂ ಎರಡು ಬೈಕ್ ಜಪ್ತಿ ಮಾಡಲಾಗಿದೆ. ಪ್ರಕರಣದ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.



ವಶಪಡಿಸಿಕೊಂಡ ವಾಹನಗಳು

ದರೋಡೆಗೆ ಸಂಚು: ಬಂಧನ

ಬೆಂಗಳೂರು: ಸಾರ್ವಜನಿಕರನ್ನು ಬೆದರಿಸಿ, ದರೋಡೆಗೆ ಸಂಚು ರೂಪಿಸಿದ್ದ ಆರೋಪದಡಿ ಕುಖ್ಯಾತ ರೌಡಿಗಳ ಸಹಚರರಾದ ಐದು ಮಂದಿ ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ತಸ್ಲೀಂ ಪಾಷಾ (38), ಶೇಖ್ ತನ್ವೀರ್ (21), ಮಹಮದ್ ಸುಲ್ತಾನ್ (23), ಸೈಯದ್ ಫೈರೋಜ್ (32) ಹಾಗೂ ಇಮ್ರಾನ್ ಪಾಷಾ (34) ಬಂಧಿತರು.

'ಇವರು ವಿವೇಕನಗರ ಠಾಣಾ ವ್ಯಾಪ್ತಿಯ ಇನ್ಫೆಂಟ್ ಜೀಸಸ್ ಚರ್ಚ್ ಸಮೀಪದ ದಾರಿಯಲ್ಲಿ ಒಂಟಿಯಾಗಿ ಬರುವವರ ಮೇಲೆ ಹಲ್ಲೆ ನಡೆಸಿ, ದೋಚಲು ಆರೋಪಿಗಳು ಮಾರಕಾಸ್ತ್ರಗಳೊಂದಿಗೆ ಸಜ್ಜಾಗಿದ್ದರು. ಈ ವೇಳೆ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ತಂದೆ ಅಂತ್ಯಸಂಸ್ಕಾರ ವೇಳೆ ಮಗ ಸಾವು

ವಿಟ್ಲ: ಪುಣಚ ಗ್ರಾಮದ ಬೈಲುಗುತ್ತು ಕೊಪ್ಪಳದಲ್ಲಿ ಕೋವಿಡ್‌ನಿಂದ ಮೃತಪಟ್ಟ ತಂದೆಯ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದ ಮಗ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಕೋವಿಡ್‌ನಿಂದ ಬಳಲುತ್ತಿದ್ದ ಬೈಲುಗುತ್ತು ಕೊಪ್ಪಳ ನಿವಾಸಿ ಕೆಪಿಟಿ ನಿವೃತ್ತ ಪ್ರಾಧ್ಯಾಪಕ ಭುಜಂಗ ಶೆಟ್ಟಿ (85) ಮಂಗಳವಾರ ರಾತ್ರಿ ಮೃತಪಟ್ಟಿದ್ದರು. ಪುತ್ತೂರು ಸೇವಾಭಾರತಿ ಕಾರ್ಯಕರ್ತರ ಸಹಕಾರದಲ್ಲಿ ಕೋವಿಡ್ ನಿಯಮದಂತೆ ಮೃತರ ಅಂತ್ಯಸಂಸ್ಕಾರ ನಡೆಯಿತು. ಈ ಕಾರ್ಯದಲ್ಲಿ ಭಾಗಿಯಾಗಿದ್ದ ವೇಳೆ ಅವರ ಕಿರಿಯ ಪುತ್ರ ಶೈಲೇಶ್ ಶೆಟ್ಟಿ (44) ಕುಸಿದು ಬಿದ್ದರು.



ಭುಜಂಗ ಶೆಟ್ಟಿ



ಶೈಲೇಶ್ ಶೆಟ್ಟಿ

ಅವರನ್ನು ತಕ್ಷಣ ಪುತ್ತೂರಿನ ಖಾಸಗಿ ಆಸ್ಪತ್ರೆಗೆ ಕರೆತರಲಾಯಿತು. ಆದರೆ, ಅಷ್ಟರಲ್ಲಿಯೇ ಅವರು ಮೃತಪಟ್ಟಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಆಸ್ಟ್ರೇಲಿಯಾದಲ್ಲಿ ಉದ್ಯೋಗದಲ್ಲಿದ್ದ ಶೈಲೇಶ್, ಎರಡು ತಿಂಗಳ ಹಿಂದೆ ಊರಿಗೆ ಬಂದಿದ್ದು, ಹಾರಾಡಿಯಲ್ಲಿ ವಾಸ್ತವ್ಯವಿದ್ದರು.

ಬೊಮ್ಮನಹಳ್ಳಿಯಲ್ಲಿ ಶಾಸಕ ಎಂ.ಸತೀಶ್ ರೆಡ್ಡಿ ಚಾಲನೆ

ಬಡವರ ಮನೆ ಬಾಗಿಲಿಗೆ ಆಹಾರ ಕಿಟ್

ಬೊಮ್ಮನಹಳ್ಳಿ: ಕ್ಷೇತ್ರದ 50 ಸಾವಿರ ಬಡ ಕುಟುಂಬಗಳಿಗೆ ಆಹಾರಧಾನ್ಯ ಕಿಟ್ ವಿತರಿಸುವ ಕಾರ್ಯಕ್ಕೆ ಹೊಂಗಸಂದ್ರದಲ್ಲಿ ಶಾಸಕ ಎಂ.ಸತೀಶ್ ರೆಡ್ಡಿ ಚಾಲನೆ ನೀಡಿದರು.

ಕ್ಷೇತ್ರದ ಪ್ರತಿ ವಾರ್ಡ್‌ನಲ್ಲಿ ತಲಾ ಏಳು ಸಾವಿರ ಬಡ ಕುಟುಂಬಗಳನ್ನು ಗುರುತಿಸಲಾಗಿದ್ದು, ಬುಧವಾರದಿಂದ ಮನೆ ಬಾಗಿಲಿಗೆ ಆಹಾರಧಾನ್ಯ ಕಿಟ್ ತಲುಪಿಸುವ ಯೋಜನೆ ಆರಂಭವಾಗಿದೆ. ಹೊಂಗಸಂದ್ರದಲ್ಲಿ ಸತೀಶ್ ರೆಡ್ಡಿ ಸ್ವತಃ ಮನೆಗಳಿಗೆ ತೆರಳಿ ಕಿಟ್ ವಿತರಿಸಿದರು.

₹1 ಕೋಟಿಗೂ ಅಧಿಕ ವೆಚ್ಚದಲ್ಲಿ ಪ್ರತಿ ಕುಟುಂಬಕ್ಕೆ 20 ದಿನಗಳಿಗೆ ಆಗುವಷ್ಟು ಆಹಾರ ಧಾನ್ಯ ನೀಡಲಾಗುತ್ತಿದ್ದು, ಲಾಕ್‌ಡೌನ್ ಪರಿಸ್ಥಿತಿಯನ್ನು ನೋಡಿಕೊಂಡು ಎರಡನೇ ಹಂತದಲ್ಲಿ ಮತ್ತೊಮ್ಮೆ ಕಿಟ್ ವಿತರಿಸುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

'ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಅನಿವಾರ್ಯವಾಗಿದ್ದು, ಇದರಿಂದ ಬಡವರ ಬದುಕು ಕಷ್ಟಕ್ಕೆ ಸಿಲುಕಿರುವುದು ಹೌದು. ಶಾಸಕನಾಗಿ ಜನರ ನೆರವಿಗೆ ನಿಲ್ಲುವುದು ನನ್ನ ಕರ್ತವ್ಯ, ಕ್ಷೇತ್ರದ ಜನ ಯಾರೂ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಈ ಕಾರ್ಯಕ್ಕೆ ಮುಂದಾಗಿದ್ದೇನೆ. ಕಿಟ್ ವಿತರಣೆ ವೇಳೆ ದಟ್ಟಣೆ ಆಗಬಾರದೆಂಬ ಕಾರಣಕ್ಕಾಗಿ ಪ್ರತಿ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಿಕೊಂಡಿದ್ದೇನೆ' ಎಂದರು.

ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಹೊಂಗಸಂದ್ರದ ತಿಮ್ಮಣ್ಣ ಎಂಬುವರಿಗೆ ಚಿಕಿತ್ಸೆಗಾಗಿ ಸತೀಶ್ ರೆಡ್ಡಿ ₹1.5 ಲಕ್ಷ ಸಹಾಯ ಮಾಡಿದರು.



ಎಂ.ಸತೀಶ್ ರೆಡ್ಡಿ ಆಹಾರ ಧಾನ್ಯ ಕಿಟ್ ವಿತರಿಸಿದರು. ಬಿಜೆಪಿ ಮುಖಂಡರಾದ ಶ್ರೀನಿವಾಸ ರೆಡ್ಡಿ, ರಾಮಚಂದ್ರ, ಬಾಬು ರೆಡ್ಡಿ ಇದ್ದಾರೆ.

ಕೈಗಾರಿಕಾ ಭೂಮಿ ಅನ್ಯ ಉದ್ದೇಶಕ್ಕೆ ಬಳಸಲು ಹೈಕೋರ್ಟ್ ತಡೆ

ಬೆಂಗಳೂರು: ಕೆ.ಆರ್.ಪುರದ ದೊಡ್ಡನೆಕ್ಕುಂದಿ ಬಳಿಯ ಕೈಗಾರಿಕಾ ಭೂಮಿಯನ್ನು ಗ್ರ್ಯಾಫೈಟ್ ಇಂಡಿಯಾ ಲಿಮಿಟೆಡ್ ಅನ್ಯ ಉದ್ದೇಶಕ್ಕೆ ಬಳಕೆ ಮಾಡುವುದಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿರುವ 41 ಎಕರೆಯನ್ನು ರಿಯಲ್ ಎಸ್ಟೇಟ್ ಲಾಭಕ್ಕೆ ಪರಿವರ್ತಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಆರೋಪಿಸಿ ವಕೀಲ ಅಮೃತೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

'ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶದಲ್ಲಿ 1972ರಲ್ಲಿ ಈ ಕಂಪನಿಗೆ ₹5 ಲಕ್ಷಕ್ಕೆ ನೀಡಲಾಗಿದೆ. ಈ ಜಾಗದಲ್ಲಿ ಉದ್ಯಮವನ್ನು ಈ ಕಂಪನಿ 1980ರಿಂದ 2020ರ ತನಕ ನಿರ್ವಹಿಸಿತ್ತು. ಈ ನಡುವೆ, 2006ರಲ್ಲಿ 15 ಎಕರೆ ಭೂಮಿಯನ್ನು ರಿಯಲ್ ಎಸ್ಟೇಟ್ ಡೆವಲಪರ್‌ಗೆ ಸರ್ಕಾರದ ಅನುಮೋದನೆ ಇಲ್ಲದೆ ಮಾರಾಟ ಮಾಡಿದೆ' ಎಂದು ಅರ್ಜಿದಾರರು ದೂರಿದ್ದಾರೆ.



ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ಇಡೀ ಕೈಗಾರಿಕೆಯ ಕಾರ್ಯಾಚರಣೆ ನಿಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ) 2019ರ ಫೆಬ್ರುವರಿಯಲ್ಲಿ ನಿರ್ದೇಶನ ನೀಡಿತ್ತು. 2019ರ ಏಪ್ರಿಲ್‌ನಲ್ಲಿ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಆದೇಶ ಅನುಸರಿಸಿ ಕಂಪನಿಯ ಕಾರ್ಯಾಚರಣೆ ಸಂಪೂರ್ಣ ಮುಚ್ಚಲ್ಪಟ್ಟಿದೆ.

'ಈ ಉಳಿಕೆ ಭೂಮಿಯನ್ನೂ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ₹900 ಕೋಟಿಗೆ ಮಾರಾಟ ಮಾಡಲು ಕಂಪನಿ ಪ್ರಯತ್ನಿಸುತ್ತಿದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಕಳೆದ ವರ್ಷ ಮಾರ್ಚ್‌ನಲ್ಲಿ ಮೊದಲ ಸಾವಿನ ಪ್ರಕರಣ ವರದಿ • 2ನೇ ಅಲೆಯಲ್ಲಿ ಮೃತರ ಸಂಖ್ಯೆಯಲ್ಲಿ ಹೆಚ್ಚಳ

ಕೋವಿಡ್: 30 ಸಾವಿರ ದಾಟಿದ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರಲ್ಲಿ ಮತ್ತೆ 463 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 30 ಸಾವಿರ (30,017) ದಾಟಿದೆ.

ರಾಜ್ಯದಲ್ಲಿ ಕಳೆದ ವರ್ಷ ಮಾರ್ಚ್ 10ರಂದು ಮೊದಲ ಮರಣ ಪ್ರಕರಣ ವರದಿಯಾಗಿತ್ತು.

ಡಿಸೆಂಬರ್ ಅಂತ್ಯಕ್ಕೆ ಮರಣ ಪ್ರಮಾಣವು ಶೇ 0.94ರಷ್ಟಿತ್ತು. ಆ ವೇಳೆಗೆ 12,090 ಮಂದಿ ಮೃತಪಟ್ಟಿದ್ದರು.

ಎರಡನೇ ಅಲೆಯಲ್ಲಿ ಸೋಂಕಿತರ ಜತೆಗೆ ಕಾಯಿಲೆಯ ತೀವ್ರತೆಗೆ ಮೃತಪಡುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಈ ವರ್ಷ 5 ತಿಂಗಳಲ್ಲಿಯೇ 17 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಸದ್ಯ ಮರಣ ಪ್ರಮಾಣ ದರ ಶೇ 2.82ರಷ್ಟಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 16,387 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.45 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 11.22ಕ್ಕೆ ಇಳಿಕೆಯಾಗಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 26.35 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 21,199 ಮಂದಿ ಗುಣಮುಖರಾಗಿದ್ದಾರೆ. ಈವರೆಗೆ ಚೇತರಿಕೆ ಹೊಂದಿದವರ ಸಂಖ್ಯೆ 23.12 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 2.93 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ ಮತ್ತೆ 307 ಮಂದಿ ಮೃತಪಟ್ಟಿದ್ದಾರೆ.

ಬೆಳಗಾವಿಯಲ್ಲಿ 17 ಮಂದಿ, ಹಾಸನ, ಬೆಂಗಳೂರು ಗ್ರಾಮಾಂತರ ಹಾಗೂ ಮೈಸೂರಿನಲ್ಲಿ ತಲಾ 12 ಮಂದಿ, ಶಿವಮೊಗ್ಗದಲ್ಲಿ 10 ಮಂದಿ, ಉತ್ತರ ಕನ್ನಡದಲ್ಲಿ 9 ಮಂದಿ, ಬಳ್ಳಾರಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತಲಾ 8 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಮಕ್ಕಳ ಐಸಿಯು– ಹಾಸಿಗೆ ಹೆಚ್ಚಳಕ್ಕೆ ಕ್ರಮ: ಬಿಬಿಎಂಪಿ



ಗೌರವ್ ಗುಪ್ತ

ಕೋವಿಡ್ ಮೂರನೇ ಅಲೆ ಮಕ್ಕಳ ಪಾಲಿಗೆ ಹೆಚ್ಚು ಅಪಾಯಕಾರಿ ಆಗಲಿದೆ ಎಂದು ತಜ್ಞರು ಮುನ್ಸೂಚನೆ ನೀಡಿದ್ದು, ಮಕ್ಕಳ ಆರೋಗ್ಯ ಸೇವೆಯ ಸೌಕರ್ಯ ಹೆಚ್ಚಳಕ್ಕೆ ಬಿಬಿಎಂಪಿ ಕ್ರಮ ಕೈಗೊಂಡಿದೆ.

‘ಮಕ್ಕಳ ಆರೋಗ್ಯ ರಕ್ಷಣೆಗೆ ಏನೇನು ಕ್ರಮ ಕೈಗೊಳ್ಳ ಬೇಕು ಎಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಮಾಲೋಚನೆ ನಡೆಸಲಾಗುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಗಂಭೀರ ಸಮಸ್ಯೆ ಎದುರಿಸುವ ಮಕ್ಕಳ ಆರೈಕೆಗೆ ತುರ್ತು ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆಗಳ ಸಂಖ್ಯೆ ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಬುಧವಾರ ಇಲ್ಲಿ ತಿಳಿಸಿದರು.

ಕೆಲವೆಡೆ ಕೋವಿಡ್ ಆರೈಕೆ ಕೇಂದ್ರಗಳಿಗೆ (ಸಿಸಿಸಿ) ದಾಖಲಾಗಲು ಕೋವಿಡ್ ಸೋಂಕಿನ ಸೌಮ್ಯ ಲಕ್ಷಣಗಳಿರುವವರು ಮುಂದೆ ಬರುತ್ತಿಲ್ಲ. ಕೋರಮಂಗಲದ ಕೋವಿಡ್ ಆರೈಕೆ ಕೇಂದ್ರವೂ ಸೇರಿದಂತೆ ವಿವಿಧ ಸಿಸಿಸಿಗಳಲ್ಲಿ ಹಾಸಿಗೆಗಳು ಖಾಲಿ ಬಿದ್ದಿವೆ. ಈ ಕುರಿತು ಪ್ರತಿಕ್ರಿಯಿಸಿದ ಗೌರವ್ ಗುಪ್ತ, ‘ಕೆಲವು ಕಡೆ ಸೋಂಕಿತರು ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾಗಲು ಅಷ್ಟಾಗಿ ಆಸಕ್ತಿ ವಹಿಸುತ್ತಿಲ್ಲ ನಿಜ. ಆದರೂ ಈ ಮೂಲಸೌಕರ್ಯವನ್ನು ಸದ್ಯಕ್ಕೆ ಉಳಿಸಿಕೊಳ್ಳುತ್ತೇವೆ’ ಎಂದರು.

ಕೋವಿಡ್ ಪರೀಕ್ಷಾ ವರದಿ ಕೈಸೇರುವುದು ಈಗಲೂ ವಿಳಂಬವಾಗುತ್ತಿದೆ. ಕೆಲವರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡ ನಾಲ್ಕೈದು ದಿನಗಳ ಬಳಿಕವೂ ಫಲಿತಾಂಶ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, ‘ಕೋವಿಡ್ ಪರೀಕ್ಷೆ ಮಾಡಿಸಿಕೊಂಡ ಮರುದಿನವೇ ಫಲಿತಾಂಶದ ವರದಿಯೂ ಕೈಸೇರುತ್ತದೆ. ನಾಲ್ಕೈದು ದಿನಗಳ ಬಳಿಕವೂ ವರದಿ ಕೈಸೇರದ ದೂರುಗಳಿದ್ದರೆ ನನ್ನ ಗಮನಕ್ಕೆ ತರಬಹುದು. ಪರೀಕ್ಷಾ ಫಲಿತಾಂಶದ ವರದಿ ತ್ವರಿತವಾಗಿ ತಲುಪಿಸಲು ಕ್ರಮ ಕೈಗೊಳ್ಳುತ್ತೇವೆ’ ಎಂದರು.

‘ಕೋವಿಡ್ ಮೂರನೇ ಅಲೆಯ ಬಗ್ಗೆ ತಜ್ಞರು ಮುನ್ಸೂಚನೆ ನೀಡಿದ್ದಾರೆ. ಇದನ್ನು ಸಮರ್ಥವಾಗಿ ನಿಭಾಯಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಕೋವಿಡ್‌ನಿಂದ ಸಾವು ನೋವುಗಳಾಗುತ್ತಿವೆ. ಇವುಗಳನ್ನು ನೋಡಿಯಾದರೂ ಸಾರ್ವಜನಿಕರು ಮನೆಯಲ್ಲೇ ಉಳಿದು ಕೊರೊನಾದಿಂದ ರಕ್ಷಿಸಿಕೊಳ್ಳಬೇಕು. ಕೈಮುಗಿದು ಮನವಿ ಮಾಡುತ್ತೇನೆ’ ಎಂದು ಸಚಿವ ಭೈರತಿ ಬಸವರಾಜು ತಿಳಿಸಿದರು.

ಕೋವಿಡ್ ಲಸಿಕೆ: ಕೈಗಾರಿಕಾ ಸಂಸ್ಥೆಗಳಿಗೆ ಅವಕಾಶ

ಕೋವಿಡ್ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಕೈಗಾರಿಕಾ ಸಂಸ್ಥೆಗಳು ತಯಾರಿಕಾ ಕಂಪನಿಗಳಿಂದ ನೇರವಾಗಿ ಖರೀದಿಸಿ ಅಥವಾ ಒಪ್ಪಂದ ಮಾಡಿಕೊಂಡಿರುವ ಆಸ್ಪತ್ರೆಗಳ ಸಹಕಾರದಲ್ಲಿ ಲಸಿಕಾ ಅಭಿಯಾನ ನಡೆಸಲು ಅವಕಾಶ ನೀಡಲಾಗಿದೆ.

ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸುತ್ತೋಲೆ ಹೊರಡಿಸಿದ್ದಾರೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಮೇ 1ರಿಂದ ಲಸಿಕೆಯನ್ನು ನೇರವಾಗಿ ಖರೀದಿಸಿ, ವಿತರಿಸಲು ಖಾಸಗಿ ಆಸ್ಪತ್ರೆಗಳಿಗೆ ಅವಕಾಶ ನೀಡಲಾಗಿದೆ. ಅದೇ ರೀತಿ, ಕೈಗಾರಿಕಾ ಸಂಸ್ಥೆಗಳಿಗೂ ಅನುಮತಿಸಲಾಗಿದೆ. ಫಲಾನುಭವಿಗಳಿಗೆ ಲಸಿಕೆ ದೊರೆಯಬೇಕಾಗಿದ್ದು, ಈ ನಿಟ್ಟಿನಲ್ಲಿ ತಯಾರಕರಿಂದ ನೇರವಾಗಿ ಅಥವಾ ಖಾಸಗಿ ಆಸ್ಪತ್ರೆಗಳಿಂದ ಪಡೆದು ಅಭಿಯಾನ ಪ್ರಾರಂಭಿಸಬೇಕು ಎಂದು ತಿಳಿಸಲಾಗಿದೆ.

ಕೈಗಾರಿಕಾ ಸಂಸ್ಥೆಗಳು ನೇರವಾಗಿ ಲಸಿಕೆ ಖರೀದಿಸಿದಲ್ಲಿ ಆ ವಿವರವನ್ನು ಜಿಲ್ಲೆಯ ಆರ್‌ಸಿಎಚ್ ಅಧಿಕಾರಿಗಳಿಗೆ ನೀಡಬೇಕು.

ಅದೇ ರೀತಿ, ಒಪ್ಪಂದ ಮಾಡಿಕೊಂಡ ಆಸ್ಪತ್ರೆಗಳ ಸಹಕಾರ ಪಡೆದು, ಲಸಿಕೆ ವಿತರಿಸಿದರೂ ಆ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒದಗಿಸಬೇಕು. ಕೋವಿನ್ ಪೋರ್ಟಲ್ ಮೂಲಕ ಲಸಿಕೆ ವಿತರಣೆ ಪ್ರಕ್ರಿಯೆ ನಡೆಸಬೇಕು. ಕೋವಿಡ್ ಮಾರ್ಗಸೂಚಿ ಪಾಲಿಸಬೇಕು ಎಂದು ಸೂಚಿಸಲಾಗಿದೆ.

ಕಪ್ಪು ಶಿಲೀಂಧ್ರ: ಬಾಲಕ ಚೇತರಿಕೆ

ಬೆಂಗಳೂರು: ಶಿಲೀಂಧ್ರ ಸೋಂಕಿಗೆ ಒಳಗಾಗಿ ನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದ ಚಿತ್ರದುರ್ಗದ 11 ವರ್ಷದ ಬಾಲಕ ಚೇತರಿಸಿಕೊಂಡಿದ್ದಾನೆ.

ಬಾಲಕನಿಗೆ ಕಳೆದ ಭಾನುವಾರ ಶಿಲೀಂಧ್ರ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಆಸ್ಪತ್ರೆಗೆ ದಾಖಲಾದ ಬಳಿಕ ನಡೆಸಲಾದ ಪ್ರತಿಕಾಯ ಪರೀಕ್ಷೆಯಲ್ಲಿ ಕೊರೊನಾ ಸೋಂಕು ತಗುಲಿ, ಕೋವಿಡ್ ಕಾಯಿಲೆ ವಾಸಿಯಾಗಿರುವುದು ಖಚಿತಪಟ್ಟಿತ್ತು. ತೀವ್ರತರದ ಮಧುಮೇಹದಿಂದ ಕೂಡ ಬಾಲಕ ಬಳಲಿದ್ದ. ಆಸ್ಪತ್ರೆಯಲ್ಲಿ ನೀಡಿದ ಚಿಕಿತ್ಸೆಗೆ ಸ್ಪಂದಿಸಿ ರುವ ಬಾಲಕ, ಈಗ ಚೇತರಿಸಿಕೊಂಡಿದ್ದಾನೆ.

‘ಚಿತ್ರದುರ್ಗದ ಬಾಲಕ ಗುಣಮುಖನಾಗುತ್ತಿದ್ದಾನೆ. ವೈರಾಣು ಕಣ್ಣಿನ ಮೇಲೆ ದಾಳಿ ನಡೆ ಸಿದ ಕಾರಣ ಎಡ ಕಣ್ಣಿನ ದೃಷ್ಟಿ ನಾಶವಾಗಿದೆ. ಬಲ ಕಣ್ಣು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮೈಸೂರಿನ 11 ವರ್ಷದ ಬಾಲಕನಿಗೆ ಚಿಕಿತ್ಸೆ ಮುಂದುವರಿಸಲಾಗಿದೆ’ ಎಂದು ಬೌರಿಂಗ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಕೋವಿಡ್‌ನಿಂದ ಚೇತರಿಸಿ ಕೊಂಡು ಶಿಲೀಂಧ್ರ ಸೋಂಕಿತರಾದ 8 ಮಂದಿ ಬುಧವಾರ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸೋಂಕಿಗೆ ಒಳಗಾದವರಲ್ಲಿ ಮೂವರು ಚೇತರಿಸಿಕೊಂಡು ಮನೆಗೆ ತೆರಳಿದ್ದಾರೆ. ಸದ್ಯ ಅಲ್ಲಿ 137 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್‌19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.21 ಕೋಟಿ ▲	2.84 ಕೋಟಿ ▲
ಸಕ್ರಿಯ ಪ್ರಕರಣ	1.36 ಕೋಟಿ ▼	17.17 ಲಕ್ಷ ▲
ಗುಣಮುಖ	15.47 ಕೋಟಿ ▲	2.63 ಕೋಟಿ ▲
ಸಾವು	36.95 ಲಕ್ಷ ▲	3.37 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.47 ಲಕ್ಷ ▲	1.13 ಲಕ್ಷ ▲
ಗುಣಮುಖ	6.88 ಲಕ್ಷ ▲	1.83 ಲಕ್ಷ ▼
ಸಾವು	10,637 ▲	2,305 ▼



ಎಲ್ಲಿ ಹೆಚ್ಚು ಸಾವು

96,751 ▲	ಮಹಾರಾಷ್ಟ್ರ
24,402 ▲	ದೆಹಲಿ
25,205 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

57.76	ಮಹಾರಾಷ್ಟ್ರ ▲
25.66	ಕೇರಳ ▲
21.48	ತಮಿಳುನಾಡು ▲

3ನೇ ಅಲೆ: ಪಂಚಾಯಿತಿ ಸದಸ್ಯರಿಗೆ ತರಬೇತಿ

ಕೋವಿಡ್ 3ನೇ ಅಲೆಯಿಂದ ಮಕ್ಕಳ ಮೇಲೆ ಪರಿಣಾಮ ಉಂಟಾಗಲಿದೆ ಎಂಬ ತಜ್ಞರ ವರದಿ ಹಿನ್ನೆಲೆಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಮಕ್ಕಳನ್ನು ಸೋಂಕಿನಿಂದ ರಕ್ಷಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಗ್ರಾಮ ಪಂಚಾಯಿತಿ ಸದಸ್ಯರಿಗೆ ರಾಜ್ಯ ಸರ್ಕಾರವು ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಯೂಟ್ಯೂಬ್ ಮೂಲಕ ಈ ತರಬೇತಿ ನಡೆಸಲಾಗುವುದು. ಬೆಂಗಳೂರು ಚೈಲ್ಡ್ ರೈಟ್ಸ್ ಟ್ರಸ್ಟ್‌ನ ವಾಸುದೇವ ಶರ್ಮ ಅವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ನೇಮಕ ಮಾಡಲಾಗಿದೆ ಎಂದು ಮಕ್ಕಳ ನಿರ್ದೇಶನಾಲಯದ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

11,70,742 ▲	ಒಟ್ಟು ಪ್ರಕರಣಗಳು (11,66,647 ನಿನ್ನೆಯ ವಿವರ)
1,38,870 ▼	ಸಕ್ರಿಯ ಪ್ರಕರಣಗಳು
10,17,942 ▲	ಗುಣಮುಖರಾದವರು
13,929 ▲	ಒಟ್ಟು ಸಾವು

ಬುಧವಾರದ ಏರಿಕೆ

ಹೊಸ ಪ್ರಕರಣ	4,095 ▲
ಗುಣಮುಖ	8,620 ▲
ಸಾವು	307 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಪುಲ್ವಾಮ: ಬಿಜೆಪಿ ಮುಖಂಡ ಹತ್ಯೆ

ಶ್ರೀನಗರ(ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯ ತ್ರಾಲ್ ಪ್ರದೇಶದಲ್ಲಿ ಬಿಜೆಪಿ ಮುಖಂಡರೊಬ್ಬರನ್ನು ಉಗ್ರರು ಬುಧವಾರ ಗುಂಡಿಕ್ಕಿ ಹತ್ಯೆಗೈದಿದ್ದಾರೆ.

ಮನೆಯಲ್ಲಿದ್ದಾಗಲೇ ಬಿಜೆಪಿ ಮುಖಂಡ ರಾಕೇಶ್ ಪಂಡಿತ್ ಅವರ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಳಿಯಲ್ಲಿ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ಮಹಿಳೆಯರ ಸಂಕಷ್ಟ ನೀಗಲು ‘ಭರವಸೆ’

ಬೆಂಗಳೂರು: ಕೋವಿಡ್ ಕಾಲದ ಮಹಿಳೆಯರ ಸಂಕಟಗಳ ಪರಿಹಾರಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹಾಗೂ ಅಖಿಲ ಭಾರತ ವಕೀಲರ ಸಂಘವು ‘ಭರವಸೆ’ ಎಂಬ ಆಪ್ತ ಸಲಹಾ ಕೇಂದ್ರದ ಸಹಾಯವಾಣಿಗೆ ಬುಧವಾರ ಚಾಲನೆ ನೀಡಿದವು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಮಾತನಾಡಿ, ‘ಮಹಿಳಾ ರಕ್ಷಣೆ ಮತ್ತು ಸುರಕ್ಷತೆಗೆ ಸಂವಿಧಾನದಲ್ಲಿ ಅನೇಕ ಕಾನೂನುಗಳಿವೆ. ಮಹಿಳೆಯರ ಜನಸಂಖ್ಯೆ ಶೇ 50ರಷ್ಟಿದ್ದರೂ ಪುರುಷ ಪ್ರಧಾನ ಸಮಾಜದಲ್ಲಿ ಇಂದಿಗೂ ಸಂಕಷ್ಟ ಅನುಭವಿಸುತ್ತಿದ್ದಾರೆ. ಕೋವಿಡ್ ಕಾಲದಲ್ಲಿ ಇನ್ನೂ ಹೆಚ್ಚಿನ ಕಷ್ಟ ಅನುಭವಿಸುತ್ತಿದ್ದಾರೆ. ಅಂಥವರಿಗೆ ವಕೀಲರು ಉಚಿತವಾಗಿ ಕಾನೂನು ನೆರವು ನೀಡಲು ಮುಂದಾಗಿರುವುದು ಸ್ವಾಗತಾರ್ಹ’ ಎಂದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ವುಮನ್ಸ್ ಅಸೋಸಿಯೇಷನ್‌ನ ಗೌರಮ್ಮ ಮಾತನಾಡಿ, ‘ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದ ಮಹಿಳೆಯರಿಗೆ ಆಪ್ತ ಸಮಾಲೋಚನೆ ನಡೆಸುವ ಉದ್ದೇಶದಿಂದ ರಾಜ್ಯದಲ್ಲಿ 193 ಸಾಂತ್ವನ ಕೇಂದ್ರಗಳನ್ನು ತೆರೆಯ ಲಾಗಿತ್ತು. ಮಹಿಳೆಯರಿಗೆ ಕಾನೂನು ನೆರವು ಮತ್ತು ಆಪ್ತ ಸಮಾಲೋಚನ ಸೇವೆ ಇವುಗಳಲ್ಲಿ ದೊರೆಯುತ್ತಿತ್ತು. ಒಂದೊಂದು ಕೇಂದ್ರದಲ್ಲಿ 25ಕ್ಕೂ ಹೆಚ್ಚು ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿತ್ತು. ಆದರೆ, ಕಳೆದ ಬಾರಿಯ ಲಾಕ್‌ಡೌನ್ ಸಮಯದಲ್ಲಿ ಇವುಗಳಿಗೆ ಹಣ ಬಿಡುಗಡೆ ಮಾಡಲಿಲ್ಲ. ಈಗ ಬಹಳಷ್ಟು ಕೇಂದ್ರಗಳು ಸ್ಥಗಿತಗೊಂಡಿವೆ. ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಕೆಲವೇ ಕೇಂದ್ರಗಳು ನಡೆಯುತ್ತಿವೆ’ ಎಂದರು.

‘ಕಳೆದ ಲಾಕ್‌ಡೌನ್ ಸಮಯದಲ್ಲಿ ಕರ್ನಾಟಕದಲ್ಲಿಯೇ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಶೇ 115ರಷ್ಟು ಹೆಚ್ಚಾಗಿದ್ದವು. ಸರ್ಕಾರ ಮಹಿಳೆಯರ ರಕ್ಷಣೆ ಮತ್ತು ಸುರಕ್ಷತೆಗೆ ಕ್ರಮಕೈಗೊಳ್ಳಬೇಕಾದ ಅಗತ್ಯವಿದೆ’ ಎಂದರು.

ಚಿಂತಕಿಯರಾದ ಕೆ. ನೀಲಾ, ಕೆ.ಎಸ್. ವಿಮಲಾ ಇತರರು ಇದ್ದರು.

ಆಪ್ತ ಸಲಹಾ ಕೇಂದ್ರದಲ್ಲಿ ಲಭ್ಯ ಇರುವವರು:
ಗೌರಮ್ಮ– 98451 97079
ವಕೀಲರಾದ ಎಸ್. ಶಂಕರಪ್ಪ 99456 45330
ಶ್ರೀನಿವಾಸ್– 94497 84667
ಶಿವಮ್ಮ– 94322 11383
ಈರಮ್ಮ– 72593 27689
ಪ್ರಕೃತಿ– 80509 05547.



ಖರೀದಿ... ಲಾಕ್‌ಡೌನ್ ಅವಧಿಯಲ್ಲಿ ಸಮಯ ಕಳೆಯಲು ಹೊರವರ್ತುಲ ರಸ್ತೆಯ ಚೌಡೇಶ್ವರಿ ನಗರ ಬಸ್ ನಿಲ್ದಾಣದ ಬಳಿ ಬುಧವಾರ ಜನರು ಕೇರಂ ಬೋರ್ಡ್ ಖರೀದಿಸಿದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ವಿದ್ಯಾರ್ಥಿಗಳ ಪ್ರವೇಶಕ್ಕೆ ತೊಂದರೆ ಆಗಬಾರದು’

ಬೆಂಗಳೂರು: ‘10ನೇ ತರಗತಿಯಿಂದ 11ನೇ ತರಗತಿಗೆ ಮತ್ತು 12ನೇ ತರಗತಿಯಿಂದ ಪದವಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು’ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ.

ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮಕ್ಕೂ ರಾಜ್ಯ ಪಠ್ಯಕ್ರಮಕ್ಕೂ ಅಜಗಜಾಂತರ ಇದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಪೈಪೋಟಿ ನೀಡುವುದು ಕಷ್ಟವಾಗಿದೆ. ಆತಂಕಗಳ ನಡುವೆ ಪರೀಕ್ಷೆ ಬರೆಯಲು ಒತ್ತಡ ಹೇರುವುದು ಸರಿಯಲ್ಲ ಎಂದು ಸಮಿತಿಯ ರಾಜ್ಯ ಸಂಚಾಲಕ ಲಕ್ಷ್ಮೀ ನಾರಾಯಣ ನಾಗವಾರ ಅವರು ತಿಳಿಸಿದ್ದಾರೆ.

ಪರೀಕ್ಷೆಗಳನ್ನು ಕೈಬಿಡಿ: ಪೋಷಕರ ಸಂಘಟನೆಗಳ ಸಮನ್ವಯ ಸಮಿತಿ ಆಗ್ರಹ

ಬೆಂಗಳೂರು: ‘ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ 12ನೇ ತರಗತಿಗಳ ವಾರ್ಷಿಕ ಪರೀಕ್ಷೆಗಳನ್ನು ರದ್ದುಪಡಿಸಿರುವ ರೀತಿಯಲ್ಲೇ ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು’ ಎಂದು ಕರ್ನಾಟಕ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮನ್ವಯ ಸಮಿತಿ ಒತ್ತಾಯಿಸಿದೆ.

‘ಈ ಬಗ್ಗೆ ಮುಖ್ಯಮಂತ್ರಿ ಮತ್ತು ಶಿಕ್ಷಣ ತಜ್ಞರ ಜೊತೆ ಚರ್ಚಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ಒಂದೆರಡು ದಿನಗಳಲ್ಲಿ ತೀರ್ಮಾನ ಪ್ರಕಟಿಸಬೇಕು’ ಎಂದು ಸಮಿತಿಯ ಬಿ.ಎನ್. ಯೋಗಾನಂದ ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಕೆ. ಚಂದ್ರಶೇಖರ್ ಅವರಿಂದ ಪಡಿತರ ವಿತರಣೆ

‘ಸಂಕಷ್ಟದಲ್ಲಿ ಬಡವರ ಕೈ ಹಿಡಿದ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಕಾಂಗ್ರೆಸ್ ಮುಖಂಡ ಕೆ. ಚಂದ್ರಶೇಖರ್ ಅವರು ಬಡವರಿಗೆ ಪಡಿತರ, ಹಣ್ಣು ಮತ್ತು ತರಕಾರಿ ಇರುವ ಕಿಟ್‌ಗಳನ್ನು ಬುಧವಾರ ಉಚಿತವಾಗಿ ವಿತರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಕೋವಿಡ್ ಬಿಕ್ಕಟ್ಟಿನಂತಹ ಸಂಕಷ್ಟದ ಸಮಯದಲ್ಲಿ ಕಾಂಗ್ರೆಸ್ ಪಕ್ಷವು ಬಡವರ ಪರವಾಗಿದ್ದು ಪಕ್ಷದ ಮುಖಂಡರು ಸ್ವಂತ ಹಣದಿಂದ ಬಡವರಿಗೆ ಆಹಾರ ಧಾನ್ಯ ಸೇರಿದಂತೆ ಇನ್ನಿತರ ನೆರವು ನೀಡುತ್ತಿದ್ದಾರೆ’ ಎಂದರು.

‘ಅಧಿಕಾರದಲ್ಲಿರುವ ಬಿಜೆಪಿಯು ಬಡವರಿಗೆ ಸಹಾಯ ಮಾಡುತ್ತಿಲ್ಲ. ರಾಜ್ಯದಲ್ಲಿ ಹಾಗೂ ಬಸವನಗುಡಿ ಕ್ಷೇತ್ರದಲ್ಲಿ ಬಡವರಿಗೆ ಆಹಾರ ಒದಗಿಸುವಂತಹ ಕಾರ್ಯ ಮಾಡಿಲ್ಲ. ಆದರೆ, ಅಧಿಕಾರದಲ್ಲಿಲ್ಲದಿದ್ದರೂ ಕಾಂಗ್ರೆಸ್ ಈ ಕಾರ್ಯವನ್ನು ಮಾಡುತ್ತಿದೆ. ಕಾಂಗ್ರೆಸ್ ಪಕ್ಷವು ಮೊದಲಿನಿಂದಲೂ ಬಡವರ ಪರವಾಗಿಯೇ ಇದೆ. ಮುಂದಿನ ಬಾರಿ ಬಸವನಗುಡಿ ಕ್ಷೇತ್ರದಲ್ಲಿ ಜನರು ಕಾಂಗ್ರೆಸ್‌ಗೆ ಆಶೀರ್ವಾದ ಮಾಡಲಿದ್ದಾರೆ’ ಎಂದರು.



ಕಾಂಗ್ರೆಸ್ ಮುಖಂಡ ಕೆ. ಚಂದ್ರಶೇಖರ್ ನೇತೃತ್ವದಲ್ಲಿ ಹನುಮಂತ ನಗರದ ರಾಮಾಂಜನೇಯ ಗುಡ್ಡದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದಿನಸಿ ಕಿಟ್ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹಮದ್, ಕೆ.ಚಂದ್ರಶೇಖರ್ ಇದ್ದರು –ಪ್ರಜಾವಾಣಿ ಚಿತ್ರ

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ‘ಬಿಜೆಪಿ ನೀಡುತ್ತಿರುವ ಪರಿಹಾರದ ಪ್ಯಾಕೇಜ್ ಕೇವಲ ಬೂಟಾಟಿಕೆಯಾಗಿದ್ದು ಇದು ವರೆಗೂ ಒಬ್ಬ ಅರ್ಹ ಫಲಾನುಭವಿಯನ್ನೂ ತಲುಪಿಲ್ಲ’ ಎಂದು ದೂರಿದರು.

ಯು.ಬಿ. ವೆಂಕಟೇಶ್, ‘ಕೊರೊನಾ ಲಸಿಕೆಯನ್ನು ಉಚಿತವಾಗಿ ನೀಡಬೇಕು. ಆದರೆ, ಅದನ್ನೂ ಮಾರಾಟ ಮಾಡುವಂತಹ ಕಾರ್ಯಕ್ಕೆ ಬಿಜೆಪಿ ನಾಯಕರು ಮುಂದಾಗಿದ್ದಾರೆ’ ಎಂದರು.

ಕೆ. ಚಂದ್ರಶೇಖರ್, ‘ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್ ಅನಿವಾರ್ಯ ಹೌದು. ಆದರೆ, ಸರ್ಕಾರ ಅದಕ್ಕೆ ಪೂರಕವಾದ ಸಿದ್ಧತೆಗಳನ್ನು ಮಾಡಿಕೊಂಡು ಬಡವರ, ಮಧ್ಯಮ ವರ್ಗದವರ ಹಸಿವು ನೀಗಿಸುವ ಕಾರ್ಯ ಮಾಡಬೇಕಿತ್ತು’ ಎಂದರು.

‘ದಾಸರಹಳ್ಳಿ ಕ್ಷೇತ್ರಕ್ಕೆ 100 ಹಾಸಿಗೆ ಆಸ್ಪತ್ರೆ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ರಾಜ್ಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಸುಧಾರಣೆ ತಂದು ದೇಶದಲ್ಲೇ ಆರೋಗ್ಯ ಕ್ಷೇತ್ರದಲ್ಲಿ ಉತ್ತಮ ರಾಜ್ಯ ಎಂಬಂತೆ ಮಾಡುವ ಪ್ರಯತ್ನ ನಡೆದಿದೆ' ಎಂದು ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ಬಾಗಲಗುಂಟೆಯ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಆಮ್ಲಜನಕ ಸಾಂದ್ರಕಗಳನ್ನು ವಿತರಿಸಿ ಮಾತನಾಡಿದರು.

'ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಸುಧಾರಣೆಯಾಗಿ ಕ್ರಾಂತಿಕಾರಿ ಪರಿಣಾಮ ಬೀರಿದೆ. ನಮ್ಮ ದೇಶದಲ್ಲಿ ವ್ಯಾಕ್ಸಿನ್ ತಯಾರಿಕೆ ಮಾಡಿ 23 ಕೋಟಿ ಜನರಿಗೆ ಲಸಿಕೆ ಹಾಕಲಾಗಿದೆ' ಎಂದರು.

‘ಈಗಾಗಲೇ ಬಿಜೆಪಿ ಸರ್ಕಾರವು ದಾಸರಹಳ್ಳಿ ಕ್ಷೇತ್ರಕ್ಕೆ ಸರ್ಕಾರಿ ಪದವಿ ಕಾಲೇಜು ನೀಡಿದೆ. ಅದರಂತೆಯೇ 100 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆಯನ್ನು ನಿರ್ಮಿಸಲಾಗುವುದು’ ಎಂದು ಭರವಸೆ ನೀಡಿದರು.



ಬಾಗಲಗುಂಟೆಯ ಸಹಾಯವಾಣಿ ಕೇಂದ್ರಕ್ಕೆ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಆಮ್ಲಜನಕ ಸಾಂದ್ರಕಗಳನ್ನು ವಿತರಿಸಿದರು.

ಮಾಜಿ ಶಾಸಕ ಎಸ್. ಮುನಿರಾಜು ಮಾತನಾಡಿ, ‘ಸೇವಾ ಸಪ್ತಾಹ ಎಂಬ ಸಾಮಾಜಿಕ ಸೇವೆ ಅಡಿಯಲ್ಲಿ ಮುಖಂಡರು ಪ್ರತಿನಿತ್ಯ ಬಡವರ ಹಾಗೂ ಕೋವಿಡ್ ರೋಗಿಗಳ ಸೇವೆ ಮಾಡುತ್ತಿದ್ದಾರೆ’ ಎಂದರು.

ಕ್ಷೇತ್ರದ ಬಿಜೆಪಿ ಮಂಡಲ ಅಧ್ಯಕ್ಷ ಎನ್.ಲೋಕೇಶ್ ಅವರು ಬಾಗಲಗುಂಟೆ ಪೊಲೀಸ್ ಠಾಣೆಗೆ ಸುಮಾರು ₹10 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡವನ್ನು ಅಶ್ವತ್ಥ ನಾರಾಯಣ ವೀಕ್ಷಿಸಿದರು. ಬಳಿಕ ದಾಸರಹಳ್ಳಿ ಆರೋಗ್ಯ ಕೇಂದ್ರಕ್ಕೆ ತೆರಳಿ ಆಸ್ಪತ್ರೆ ಸಿಬ್ಬಂದಿಗೆ ಊಟ ನೀಡುವ ಕಾರ್ಯಕ್ಕೆ ಚಾಲನೆ ನೀಡಿದರು.

ಬಿಜೆಪಿ ಪ್ರಧಾನಕಾರ್ಯದರ್ಶಿಗಳಾದ ಟಿ.ಶಿವಕುಮಾರ್, ಪಿ.ಎಚ್. ರಾಜು, ವಿನೋದ್ ಗೌಡ, ಬಿಜೆಪಿ ಮುಖಂಡರಾದ ನಾಗಣ್ಣ, ಕೃಷ್ಣಮೂರ್ತಿ, ರವಿಗೌಡ, ಸಂದೀಪ್ ಸಿಂಗ್, ಎಸಿಪಿ ಶ್ರೀನಿವಾಸ್ ರೆಡ್ಡಿ, ಇನ್‌ಸ್ಪೆಕ್ಟರ್ ಸುನೀಲ್ ಇದ್ದರು.

‘ಅಂಗವಿಕಲರಿಗೆ ಮನೆ ಸಮೀಪವೇ ಲಸಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಮನೆಯ ಸಮೀಪವೇ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆಸಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಎಲ್ಲ ಜಿಲ್ಲಾಧಿಕಾರಿಗಳಿಗೆ ಅವರು ಸೂಚನೆ ನೀಡಿದ್ದಾರೆ. .

ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಕೋವಿಡ್ ಲಸಿಕೆ ವಿತರಣಾ ಕೇಂದ್ರಗಳಿಗೆ ತೆರಳುವುದು ಕಷ್ಟವಾಗುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಫಲಾನುಭವಿಗಳಿಗೆ ಮನೆಯ ಸಮೀಪವೇ ಕೇಂದ್ರ ಗುರುತಿಸಿ, ಕ್ರಮಕೈಗೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಈ ತಂತ್ರವು ಸಮುದಾಯ ಆಧಾರಿತ ವಿಧಾನವಾಗಿದೆ. ಮನೆಯ ಹತ್ತಿರದ ಸಮುದಾಯ ಆರೋಗ್ಯ ಕೇಂದ್ರಗಳು, ನಿವಾಸಿ ಕಲ್ಯಾಣ ಸಂಘಗಳ ಕೇಂದ್ರಗಳು, ಪಂಚಾಯಿತಿ ಕಟ್ಟಡಗಳು ಹಾಗೂ ಶಾಲಾ-ಕಾಲೇಜುಗಳಲ್ಲಿ ಕೋವಿಡ್ ಲಸಿಕೆ ವಿತರಣೆಗೆ ಕೇಂದ್ರಗಳನ್ನು ಗುರುತಿಸಬಹುದು. ಈ ಕೇಂದ್ರಗಳನ್ನು ಚಾಲ್ತಿಯಲ್ಲಿರುವ ಲಸಿಕಾ ಕೇಂದ್ರಗಳಿಗೆ ಜೋಡಿಸಬಹುದು ಎಂದೂ ಅರುಂಧತಿ ಚಂದ್ರಶೇಖರ್ ಅವರು ಹೇಳಿದ್ದಾರೆ.

ಚೋಕ್ಸಿ: ಹೇಬಿಯಸ್ ಕಾರ್ಪಸ್ ಅರ್ಜಿ ರದ್ದತಿಗೆ ಕೋರಿಕೆ

ನವದೆಹಲಿ(ಪಿಟಿಐ): ಉದ್ಯಮಿ ಮೆಹುಲ್ ಚೋಕ್ಸಿ ಪರ ಸಲ್ಲಿಕೆಯಾಗಿರುವ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ತಿರಸ್ಕರಿಸುವಂತೆ ಡೊಮಿನಿಕಾ ಸರ್ಕಾರ ನ್ಯಾಯಾಲಯವನ್ನು ಕೋರಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ತನ್ನನ್ನು ಅಪಹರಿಸಿ ಬಲವಂತವಾಗಿ ಕೆರಿಬಿಯನ್ ದ್ವೀಪ ರಾಷ್ಟ್ರಕ್ಕೆ ಕರೆತರಲಾಗಿದೆ ಎಂದು ಉದ್ಯಮಿ ಮೆಹುಲ್ ಚೋಕ್ಸಿ ಅರ್ಜಿಯಲ್ಲಿ ದೂರಿದ್ದಾರೆ.

ಅಕ್ರಮವಾಗಿ ದೇಶ ಪ್ರವೇಶಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿ ಕ್ರಿಯೆ ನೀಡಲು ಚೋಕ್ಸಿ ಅವರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಡೊಮಿನಿಕಾದ ಹೈಕೋರ್ಟ್ ಆದೇಶಿಸಿದೆ ಮತ್ತು ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆಯನ್ನು ಗುರುವಾರ ತನಕ ಮುಂದೂಡಿದೆ.

‘ಈ ವಿಚಾರಣೆಯೂ ಹೇಬಿಯಸ್ ಕಾರ್ಪಸ್ ಅರ್ಜಿಗೆ ಸಂಬಂಧಿಸಿದ್ದಾಗಿದೆಯೇ ಹೊರತು ಅವರು ಭಾರತಕ್ಕೆ ವಾಪಸಾಗುವ ಕುರಿತು ಇಲ್ಲ. ಅವರ ಪೌರತ್ವದ ಕುರಿತು ನ್ಯಾಯಾಲಯದ ಮುಂದೆ ಯಾವುದೇ ವಿಚಾರಣೆ ಇಲ್ಲ’ ಎಂದು ಚೋಕ್ಸಿ ಪರ ವಕೀಲ ವಿಜಯ್ ಅಗರ್‌ವಾಲ್ ಹೇಳಿದ್ದಾರೆ.

ಡೊಮಿನಿಕಾ ಹೈಕೋರ್ಟ್ ನ್ಯಾಯಮೂರ್ತಿ ಬರ್ನಿ ಸ್ಟೀಫನ್‌ಸನ್ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿದರು. ಚೋಕ್ಸಿ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಂದಲೇ ವಿಚಾರಣೆ ಎದುರಿಸಿದರು.

ರಾಯಚೂರು: ಆರು ಮಕ್ಕಳಿಗೆ 'ಕವಾಸಕಿ' ರೋಗ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): 'ಕೋವಿಡ್ ಚಿಕಿತ್ಸೆಗಾಗಿ ನಗರದ ಸಹನಾ ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದ ಆರು ಮಕ್ಕಳಲ್ಲಿ ಕವಾಸಕಿ ರೋಗದ ಲಕ್ಷಣಗಳು ಪತ್ತೆಯಾಗಿದ್ದು, ಚಿಕಿತ್ಸೆಗಾಗಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಕಳುಹಿಸಲಾಗಿದೆ' ಎಂದು ಮಕ್ಕಳ ತಜ್ಞ ಡಾ.ಕೆ.ಶಿವರಾಜ ಪಾಟೀಲ ತಿಳಿಸಿದ್ದಾರೆ.

'ಸದ್ಯಕ್ಕೆ ಕಂಡು ಬಂದಿರುವ ಪ್ರಕರಣಗಳು ಸೌಮ್ಯ ಲಕ್ಷಣಗಳಿಂದ ಕೂಡಿರುವುದರಿಂದ ಪಾಲಕರು ಭಯ ಪಡಬೇಕಿಲ್ಲ. ಈ ತರಹದ ಲಕ್ಷಣಗಳು ಕಂಡು ಬಂದರೆ ಚಿಕಿತ್ಸೆ ಕೊಡಿಸುವುದು ಅತಿಮುಖ್ಯ' ಎಂದು ಅವರು ಹೇಳಿದ್ದಾರೆ.

ಜಿಲ್ಲಾಧಿಕಾರಿ ಆರ್. ವೆಂಕಟೇಶಕುಮಾರ್ ಈ ಬಗ್ಗೆ ಪ್ರತಿಕ್ರಿಯೆ ನೀಡಿ, 'ಕೋವಿಡ್‌ನಿಂದ ಗುಣಮುಖವಾದ ಕೆಲವು ಮಕ್ಕಳಲ್ಲಿ ಅತಿಯಾದ ಜ್ವರ ಮತ್ತು ಚರ್ಮದ ಮೇಲೆ ಊತ

ಬರುವ ಲಕ್ಷಣಗಳು ಕಂಡುಬರುತ್ತಿದ್ದರೆ, ವೈದ್ಯರು ಅದನ್ನು 'ಕವಾಸಕಿ' ರೋಗ ಎಂದು ಗುರುತಿಸುತ್ತಿದ್ದಾರೆ. ಸಿಂಧನೂರಿನಿಂದ ಬಂದಿದ್ದ ಮೂರು ಮಕ್ಕಳು ರಿಮ್ಸ್‌ಗೆ ದಾಖಲಾಗಿದ್ದರು.

ಇಬ್ಬರು ಗುಣಮುಖರಾಗಿದ್ದಾರೆ. ಸದ್ಯ ಒಂದು ಮಗು ಆಸ್ಪತ್ರೆಯಲ್ಲಿದೆ. ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ' ಎಂದರು.

ಸಿಡಿಲಿಗೆ ವ್ಯಕ್ತಿ, ಜಾನುವಾರು ಬಲಿ

ಕಲಬುರ್ಗಿ/ ಮೈಸೂರು: ರಾಯಚೂರು ತಾಲ್ಲೂಕಿನ ಹುಣಸಿಹಾಳಹುಡಾದಲ್ಲಿ ಸಿಡಿಲು ಬಡಿದು ಚಂದ್ರಶೇಖರ್ (58) ಎಂಬುವರು ಸಾವನ್ನಪ್ಪಿದ್ದಾರೆ. ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ದಿಕ್ಸಂಗಾ(ಕೆ) ಗ್ರಾಮದಲ್ಲಿ ಒಂದು ಆಕಳು ಮತ್ತು ಕಾಳಗಿ ತಾಲ್ಲೂಕಿನ ರುಮ್ಮನಗೂಡ ತಾಂಡಾದಲ್ಲಿ ಎರಡು ಆಕಳು ಸಾವನ್ನಪ್ಪಿವೆ.

ಕಲಬುರ್ಗಿ ಜಿಲ್ಲೆಯ ಚಿಂಚೋಳಿ, ಕಾಳಗಿಲ್ಲಿ, ರಾಯಚೂರು ಜಿಲ್ಲೆಯ ಕವಿತಾಳ, ಸಿರವಾರದಲ್ಲಿ ಮಳೆ ಸುರಿಯಿತು.

ಮೈಸೂರಿನಲ್ಲೂ ಮಳೆ: ನಗರವೂ ಸೇರಿ, ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ, ರಾತ್ರಿ 'ರೋಹಿಣಿ' ಮಳೆ ಸುರಿಯಿತು.

ನಗರದ ಒಂದೊಂದು ಭಾಗದಲ್ಲಿ ಬೇರೆ ಬೇರೆ ಸಮಯದಲ್ಲಿ ಮಳೆಯಾಗಿದೆ. ತಡರಾತ್ರಿ 11 ಗಂಟೆ ವೇಳೆಗೆ ಬಿರುಸಿನ ಮಳೆ ಸುರಿಯಿತು. ಪಿರಿಯಾಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಅರ್ಧ ಗಂಟೆಗೂ ಹೆಚ್ಚಿನ ಅವಧಿ ಮಳೆಯಾಗಿದೆ.

ಸೋಂಕನ್ನು ತಡೆಯುವ ಪ್ರತಿಕಾಯ ಅಭಿವೃದ್ಧಿ: ಕ್ಯಾನ್ಸರ್ ತಜ್ಞ ಡಾ. ವಿಶಾಲ್ ರಾವ್ ತಂಡ ಅಧ್ಯಯನ

ಕೋವಿಡ್ ತಡೆಗೆ ಪೋಲಿಯೊ ಲಸಿಕೆ!

ಪ್ರಜಾವಾಣಿ ವಾರ್ತೆ



18 ವರ್ಷದೊಳಗಿನವರನ್ನು ಕೋವಿಡ್ ಮೂರನೇ ಅಲೆಯಲ್ಲಿ ರಕ್ಷಿಸಬೇಕು. ಪೋಲಿಯೊ ಲಸಿಕೆ ಪ್ರತಿಕಾಯ ವೃದ್ಧಿಗೆ ಸಹಕಾರಿಯಾಗಿದೆ. ವೈದ್ಯಕೀಯ ಪ್ರಯೋಗಗಳು ನಡೆಯಬೇಕು

ಡಾ. ವಿಶಾಲ್ ರಾವ್, ಕ್ಯಾನ್ಸರ್ ತಜ್ಞ

ಬೆಂಗಳೂರು: 'ಪೋಲಿಯೊ ಮತ್ತು ಕೋವಿಡ್ ಎರಡೂ ಆರ್‌ಎನ್‌ಎ ವೈರಾಣುಗಳಾಗಿದ್ದು, ಮೂರನೇ ಅಲೆಯಲ್ಲಿ 18 ವರ್ಷದೊಳಗಿನವರನ್ನು ರಕ್ಷಿಸಲು ಪೋಲಿಯೊ ಲಸಿಕೆ ಸಹಕಾರಿಯಾಗಿದೆ' ಎನ್ನುವುದು ಡಾ.ವಿಶಾಲ್ ರಾವ್ ನೇತೃತ್ವದಲ್ಲಿ ತಜ್ಞರು ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಈ ಲಸಿಕೆ ನೀಡಿದರೆ ಕೊರೊನಾ ಸೋಂಕನ್ನು ತಾತ್ಕಾಲಿಕವಾಗಿ ತಡೆಯುವ ಪ್ರತಿಕಾಯಗಳು ಅಭಿವೃದ್ಧಿ ಹೊಂದಲಿವೆ ಎಂಬುದನ್ನೂ ಅಧ್ಯಯನ ಹೇಳಿದೆ.

'ಕೋವಿಡ್-19 ವಿರುದ್ಧ ರಕ್ಷಣೆಯ ಸಂಭಾವ್ಯ ಮೂಲವಾಗಿ ಪೋಲಿಯೊ ಲಸಿಕೆ' ಎಂದು ಶೀರ್ಷಿಕೆಯಡಿ ಅಧ್ಯಯನ ವರದಿ ಸಿದ್ಧಪಡಿಸಿದ್ದು, ಇದು ಇಂಡಿಯನ್ ಜರ್ನಲ್ ಮೆಡಿಕಲ್ ಸೈನ್ಸ್‌ನಲ್ಲಿ ಪ್ರಕಟವಾಗಿದೆ. ಏಳು ಪುಟಗಳ ಅಧ್ಯಯನ ವರದಿಯನ್ನು ದೇಶದ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಐವರು ಸೇರಿ ಸಿದ್ಧಪಡಿಸಿದ್ದಾರೆ. ಉಜ್ವಲ್ ರಾವ್, ಸತೀಶ್ ಎಸ್., ಶ್ವೇತಾ ಕಣ್ಣನ್, ಜಿತೇಂದ್ರ ಕುಮಾರ್ ಹಾಗೂ ಆಶಿಶ್ ಗುಲಿಯಾ ಅಧ್ಯಯನದ ಭಾಗವಾಗಿದ್ದಾರೆ.

'ದೇಶದಲ್ಲಿ 18 ವರ್ಷದೊಳಗಿನವರಿಗಾಗಿ ಕೋವಿಡ್ ಲಸಿಕೆ ಸಂಶೋಧಿಸಲ್ಪಟ್ಟಿಲ್ಲ. ಇದರಿಂದಾಗಿ ಕೋವಿಡ್ ಮೂರನೇ ಅಲೆ ಮಕ್ಕಳಿಗೆ ಅಪಾಯ ತಂದೊಡ್ಡುವ ಸಾಧ್ಯತೆಗಳಿವೆ. ಆದ್ದರಿಂದ ತುರ್ತಾಗಿ ಮಕ್ಕಳಿಗೆ ರಕ್ಷಣೆ ನೀಡಲು ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕಿದೆ. ಸದ್ಯ ಇರುವ ಲಸಿಕೆಗಳಲ್ಲಿ ಪೋಲಿಯೊ ಲಸಿಕೆ ತಕ್ಕ ಮಟ್ಟಿಗೆ ರಕ್ಷಣೆ ಒದಗಿಸಲಿದೆ. ದೇಹದ ಪ್ರತಿಕಾಯ ವ್ಯವಸ್ಥೆಗೆ ಪ್ರೋತ್ಸಾಹ ನೀಡಲು ಸಮರ್ಥವಾಗಿದೆ. ಹೀಗಾಗಿ, ಕೊರೊನಾ ವೈರಾಣುವಿನಿಂದ ಕೂಡ ರಕ್ಷಣೆ ಒದಗಿಸಲಿದೆ. ಈ ಬಗ್ಗೆ ಕ್ಲಿನಿಕಲ್ ಪ್ರಯೋಗಗಳು ನಡೆಯಬೇಕು' ಎಂದು ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ.

'ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಸಂಶೋಧನಾ ಪ್ರಯತ್ನಗಳು ನಡೆಯುತ್ತಲೇ ಇವೆ. ಹೊಸದಾಗಿ ಅಭಿವೃದ್ಧಿಪಡಿಸಲಾದ ಲಸಿಕೆಗಳ ಸುರಕ್ಷತೆ ಹಾಗೂ ಪರಿಣಾಮದ ಬಗ್ಗೆ ಜನರ ಮೇಲೆ ಪ್ರಯೋಗಗಳು ನಡೆಯಬೇಕಾಗುತ್ತದೆ. ಹಾಗಾಗಿ, ಈಗಾಗಲೇ ಬಳಕೆಲ್ಲಿರುವ ಪೋಲಿಯೊ ಲಸಿಕೆಯನ್ನು ನೂತನ ವೈರಾಣುವಿನ ಮೇಲೆ ಪರೀಕ್ಷೆ ನಡೆಸಲು ಅವಕಾಶಗಳಿವೆ' ಎಂದು ವಿವರಿಸಲಾಗಿದೆ.

ತೀವ್ರತೆ ಕಡಿಮೆ: 'ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಮೂಲಕ ಅವರಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಬಹುದು. ಇದರಿಂದಾಗಿ ಕೊರೊನಾ ಸೋಂಕು ತಗುಲಿದರೂ ಅದರ ತೀವ್ರತೆ ಕಡಿಮೆ ಇರಲಿದೆ. ಕಳೆದ ವರ್ಷ ಹಾಗೂ ಈ ವರ್ಷ ಪೋಲಿಯೊ ಲಸಿಕೆ ಪಡೆದ 5 ವರ್ಷದೊಳಗಿನ ಮಕ್ಕಳಲ್ಲಿ ಎಷ್ಟು ಮಂದಿಗೆ ಸೋಂಕು ತಗುಲಿದೆ ಹಾಗೂ ಅದರ ತೀವ್ರತೆ ಯಾವ ಪ್ರಮಾಣದಲ್ಲಿ ಇದೆ ಎನ್ನುವುದರ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ' ಎಂದು ಎಚ್‌ಸಿಜಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ವಿಶಾಲ್ ರಾವ್ ತಿಳಿಸಿದರು.

'ಈಗಾಗಲೇ ಭಾರತವು ಪೋಲಿಯೊ ನಿಯಂತ್ರಣದಲ್ಲಿ ಇಡೀ ಜಗತ್ತಿಗೆ ಮಾದರಿಯಾಗಿದೆ. ಅಮೆರಿಕದ ಖ್ಯಾತ ವಿಜ್ಞಾನಿ ರಾಬರ್ಟ್ ಗ್ಯಾಲೊ ಅವರು ಕೂಡ ಪೋಲಿಯೊ ಲಸಿಕೆ ಕೋವಿಡ್ ತಡೆಯುವ ಸಾಮರ್ಥ್ಯ ಹೊಂದಿದೆ ಎನ್ನುವುದನ್ನು ವಿವರಿಸಿದ್ದಾರೆ' ಎಂದರು.

ನೆರೆಹೊರೆಯವರ ವರ್ತನೆಯಿಂದ ನೊಂದಿದ್ದ ಕುಟುಂಬ?

ಒಂದೇ ಕುಟುಂಬದ ನಾಲ್ವರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಎಚ್. ಮೂಕಹಳ್ಳಿಯಲ್ಲಿ ಒಂದೇ ಕುಟುಂಬದ ನಾಲ್ವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ಮಹಾದೇವಪ್ಪ (46), ಅವರ ಪತ್ನಿ ಮಂಗಳಮ್ಮ (40), ಮಕ್ಕಳಾದ ಜ್ಯೋತಿ (16), ಶ್ರುತಿ (11) ಮೃತಪಟ್ಟವರು.

ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಮಹಾದೇವಪ್ಪ ಅವರಿಗೆ 20 ದಿನಗಳ ಹಿಂದೆ ಕೋವಿಡ್ ದೃಢಪಟ್ಟು, ಚೇತರಿಸಿಕೊಂಡಿದ್ದರು. ಒಂದೂವರೆ ಎಕರೆ ಜಮೀನು ಇದ್ದರೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಹಸು ಸಾಕಿಕೊಂಡಿದ್ದ ಅವರು ಡೇರಿಗೆ ಹಾಲನ್ನೂ ಹಾಕುತ್ತಿದ್ದರು. ಆದರೆ, ಕೋವಿಡ್ ದೃಢಪಟ್ಟ ನಂತರ ಹಾಲು ಹಾಕುವುದನ್ನು ನಿಲ್ಲಿಸಿದ್ದರು.

ಮಹಾದೇವಪ್ಪ ಅವರು, ನಂಜನಗೂಡು ತಾಲ್ಲೂಕಿನಲ್ಲಿರುವ ತಮ್ಮ ಹಿರಿಯ ಮಗಳೊಂದಿಗೆ ಮಂಗಳವಾರ ಚೆನ್ನಾಗಿಯೇ ಮಾತನಾಡಿದ್ದಾರೆ. ಗ್ರಾಮದ ಕುಮಾರ್ ಎಂಬುವವರೊಂದಿಗೂ ಮಾತನಾಡಿದ್ದಾರೆ. ಬುಧವಾರ ಬೆಳಿಗ್ಗೆ ಗ್ರಾಮದವರೊಬ್ಬರು ಕೂಲಿ ಕೆಲಸಕ್ಕೆ ಕರೆಯಲು ಹೋದಾಗ ಬಾಗಿಲು ತೆರೆದಿರಲಿಲ್ಲ. ಮನೆಯಿಂದ ಯಾವುದೇ ಸದ್ದು ಕೇಳದೇ ಇದ್ದಾಗ ಮನೆಯ ಮೇಲೆ ಹತ್ತಿ ಹೆಂಚು ಸರಿಸಿನೋಡಿದಾಗ ನಾಲ್ವರೂ ನೇಣು ಹಾಕಿಕೊಂಡಿದ್ದು ಬೆಳಕಿಗೆ ಬಂದಿದೆ.

'ಮೇ 9ನೇ ತಾರೀಖಿಗೆ ಮಹಾದೇವಪ್ಪ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಬೇರೆಯವರಿಗೆ ಯಾವುದೇ ರೋಗ ಲಕ್ಷಣಗಳು ಇರಲಿಲ್ಲ. ಮಂಗಳವಾರ ನಂಜನಗೂಡಿನಲ್ಲಿರುವ ಅವರ ಮಗಳೊಂದಿಗೆ ಮಾತನಾಡಿದ್ದಾರೆ. ಗ್ರಾಮದ ಸ್ನೇಹಿತರೊಬ್ಬರೊಂದಿಗೂ ಮಾತನಾಡಿದ್ದಾರೆ. ಆದರೆ, ಇಂತಹ ನಿರ್ಧಾರದ ಬಗ್ಗೆ ಯಾವುದೇ ಮುನ್ಸೂಚನೆ ನೀಡಿರಲಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ. ಮೇಲ್ನೋಟಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಂತೆ ಕಾಣಿಸುತ್ತಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ನೈಜ ಕಾರಣ ತಿಳಿಯಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವ್ಯಾ ಸಾರಾ ಥಾಮಸ್ ತಿಳಿಸಿದ್ದಾರೆ.

ಮಾನಸಿಕವಾಗಿ ನೊಂದಿದ್ದರೇ?

ಕುಟುಂಬವು ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿತ್ತು ಎಂಬ ಮಾತೂ ಕೇಳಿ ಬರುತ್ತಿದೆ. ಆದರೆ, ಅಂತಹ ಸಮಸ್ಯೆ ಇದ್ದಂತೆ ಇಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಹಾದೇವಪ್ಪ ಅವರು ಸ್ವಾಭಿಮಾನಿಯಾಗಿದ್ದರು, ಅನಗತ್ಯವಾಗಿ ಯಾರಿಂದಲೂ ಸಹಾಯ ಪಡೆಯುತ್ತಿರಲಿಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

ಅವರಿಗೆ ಕೋವಿಡ್ ದೃಢಪಟ್ಟ ನಂತರ ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. ಚೇತರಿಸಿಕೊಂಡ ನಂತರವೂ ಊರಿನವರು ಮಹಾದೇವಪ್ಪ ಹಾಗೂ ಕುಟುಂಬದ ಸದಸ್ಯರೊಂದಿಗೆ ಬೆರೆಯುತ್ತಿರಲಿಲ್ಲ. ಈ ಕಾರಣದಿಂದ ಅವರು ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ.

'ಮಹಾದೇವಪ್ಪಗೆ ಬಡತನ ಇತ್ತು. ಕೂಲಿ ಕೆಲಸ ಮಾಡುತ್ತಿದ್ದ. ಕೋವಿಡ್ ಬಂದ ಸೋಂಕಿನಿಂದ ಚೇತರಿಸಿಕೊಂಡಿದ್ದರೂ, ಊರಿನವರು ಅವನೊಂದಿಗೆ ಬೆರೆಯುತ್ತಿರಲಿಲ್ಲ. ಅವನಿಂದ ದೂರ ಹೋಗುತ್ತಿದ್ದರು. ಇದರಿಂದಾಗಿ ಆತ ಮಾನಸಿಕವಾಗಿ ನೊಂದಿರುವ ಸಾಧ್ಯತೆ ಇದೆ' ಎಂದು ಗ್ರಾಮದ ನಾಗರಾಜು ಅವರು ಮಾಧ್ಯಮಗಳಿಗೆ ತಿಳಿಸಿದರು.



ಆತ್ಮಹತ್ಯೆ ಮಾಡಿಕೊಂಡಿರುವ ಮಹಾದೇವಪ್ಪ ಕುಟುಂಬ

ಆಮ್ಲಜನಕ ನೀಡದ ಜಿಂದಾಲ್‌ಗೆ ನೋಟಿಸ್: ಶೆಟ್ಟರ್

ಬೆಂಗಳೂರು: 'ರಾಜ್ಯಕ್ಕೆ ಮಂಗಳವಾರ (ಜೂನ್ 1) ನೀಡಬೇಕಾಗಿದ್ದ ದ್ರವೀಕೃತ ಆಮ್ಲಜನಕವನ್ನು ಕೆಲವು ತಾಂತ್ರಿಕ ಸಮಸ್ಯೆಗಳನ್ನು ಮುಂದಿಟ್ಟು ಜಿಂದಾಲ್ ಕಂಪನಿ ನೀಡಿಲ್ಲ. ಈ ಸಂಕಷ್ಟದ ಸಮಯದಲ್ಲಿ ಆಮ್ಲಜನಕ ನೀಡದಿರುವ ಬಗ್ಗೆ ಕಾರಣ ಕೇಳಿ ಜಿಂದಾಲ್‌ಗೆ ನೋಟಿಸ್ ನೀಡಲಾಗಿದ್ದು, ಪ್ರತಿಕ್ರಿಯೆಗೆ ಕಾಯುತ್ತಿದ್ದೇವೆ' ಎಂದು ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಹೇಳಿದರು.

ರಾಜ್ಯದಲ್ಲಿ ಆಮ್ಲಜನಕ ಉತ್ಪಾದನೆ ಮತ್ತು ಸರಬರಾಜು ಕುರಿತು ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಜಿಂದಾಲ್ ಕಂಪನಿ ಆಮ್ಲಜನಕ ಪೂರೈಸದ ಕಾರಣ ರಾಜ್ಯಕ್ಕೆ ಲಭ್ಯವಾಗಬೇಕಾಗಿದ್ದ 830 ಟನ್‌ಗಳಲ್ಲಿ ಕೇವಲ 386 ಟನ್ ಸಿಕ್ಕಿದೆ. ಇಂಥ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ರಾಜ್ಯದಲ್ಲಿ ನೂತನ ಆಮ್ಲಜನಕ ಘಟಕ ನಿರ್ಮಾಣ ಆರಂಭಿಸಲು ವಿಶೇಷ ರಿಯಾಯಿತಿ ಪ್ರಸ್ತಾವನೆಯನ್ನು ರಚಿಸಲಾಗಿದ್ದು ಆರ್ಥಿಕ ಇಲಾಖೆಯ ಅನುಮತಿಯ ಬಳಿಕ ಘೋಷಿಸಲಾಗುವುದು' ಎಂದರು.

'ತಜ್ಞರ ಅಂದಾಜಿನಂತೆ ಮೂರನೇ ಅಲೆಯನ್ನು ಸಮರ್ಥವಾಗಿ ನಿಭಾಯಿಸಲು ಆಮ್ಲಜನಕ ಉತ್ಪಾದನೆಯಲ್ಲಿ ರಾಜ್ಯವನ್ನು ಸ್ವಾವಲಂಬಿ ಮಾಡುವುದು ಗುರಿ' ಎಂದರು.

ಸುದ್ದಿ 2 ನಿಮಿಷ

₹ 72 ಲಕ್ಷ ಮೌಲ್ಯದ ನಕಲಿ ನೋಟು ವಶ

ದಾಂಡೇಲಿ(ಉತ್ತರ ಕನ್ನಡ): ನಕಲಿ ನೋಟು ಮುದ್ರಿಸಿ ಚಲಾವಣೆ ಮಾಡುತ್ತಿದ್ದ ಜಾಲವನ್ನು ದಾಂಡೇಲಿ ಗ್ರಾಮೀಣ ಠಾಣೆ ಪೊಲೀಸರು ಭೇದಿಸಿದ್ದಾರೆ. ಆರು ಮಂದಿಯನ್ನು ಬಂಧಿಸಿ, ₹ 72 ಲಕ್ಷ ಮೌಲ್ಯದ ವಿವಿಧ ಮುಖಬೆಲೆಯ ನೋಟುಗಳನ್ನು ಜಪ್ತಿ ಮಾಡಿದ್ದಾರೆ.

ದಾಂಡೇಲಿಯ ನವಶ್ರೀ ನಗರದದ ಶಬ್ಬೀರ್ ಅಂತೋಣಿ ಇಸ್ಮಾಯಿಲ್ ಕುಟ್ಟಿ, ಶಿವಾಜಿ ಶ್ರವಣ ಕಾಂಬಳೆ, ಮಹಾರಾಷ್ಟ್ರದ ರತ್ನಗಿರಿ ನಗರದ ಕಿರಣ್ ಮಧುಕರ ದೇಸಾಯಿ, ಗಿರೀಶ ನಿಂಗಪ್ಪ ಪೂಜಾರಿ, ಬೆಳಗಾವಿಯ ಅಮರ ಮೋಹನ ನಾಯ್ಕ ಮತ್ತು ಸಾಗರ ಪುಂಡ್ಲೀಕ್ ಕುಣ್ಣೂರಕರ ಬಂಧಿತ ಆರೋಪಿಗಳು. ಮೊದಲ ಇಬ್ಬರು ಆರೋಪಿಗಳು ನೋಟುಗಳನ್ನು ಮುದ್ರಿಸುತ್ತಿದ್ದರೆ, ಉಳಿದ ನಾಲ್ವರು ನೋಟುಗಳ ಖರೀದಿಗೆ ಬಂದಿದ್ದರು.

'ಆರೋಪಿಗಳ ಬಳಿ ₹ 4.50 ಲಕ್ಷ ಮೌಲ್ಯದ, ₹500 ಮುಖಬೆಲೆಯ ಅಸಲಿ ನೋಟುಗಳು, ಎರಡು ಕಾರುಗಳನ್ನು ಕೂಡ ಜಪ್ತಿ ಮಾಡಲಾಗಿದೆ. ₹ 2 ಸಾವಿರ, ₹ 500, ₹ 200, ₹ 100 ಮುಖಬೆಲೆಯ ನಕಲಿ ನೋಟುಗಳು ಸಿಕ್ಕಿವೆ. ಮುದ್ರಿಸಲು ಬಳಸಿದ್ದ ಸಲಕರಣೆಗಳನ್ನು ವಶ ಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ ದೇವರಾಜು ಬುಧವಾರ ತಿಳಿಸಿದರು.

ಟ್ರ್ಯಾಕ್ಟರ್ ಚಲಾಯಿಸಿದ ಎಚ್‌ಡಿಕೆ



ರಾಮನಗರ: ಬಿಡದಿ ಸಮೀಪದ ಕೇತಗಾನಹಳ್ಳಿಯಲ್ಲಿ ಕೃಷಿಭೂಮಿ ಹೊಂದಿರುವ ಮಾಜಿ ಮುಖ್ಯಮಂತ್ರಿ ಎಚ್. ಡಿ ಕುಮಾರಸ್ವಾಮಿ ಅವರು ಕೃಷಿ ಚಟುವಟಿಕೆಗಳಿಗಾಗಿ ಬುಧವಾರ ಹೊಸ ಟ್ರ್ಯಾಕ್ಟರ್ ಖರೀದಿಸಿದ್ದಾರೆ.

ಮಾಜಿ ಪ್ರಧಾನಿ ಮತ್ತು ತಮ್ಮ ತಂದೆ ಎಚ್.ಡಿ ದೇವೇಗೌಡರ ಸಮ್ಮುಖದಲ್ಲಿ ಟ್ರ್ಯಾಕ್ಟರ್‌ಗೆ ಪೂಜೆ ಸಲ್ಲಿಸಿದ ಅವರು ಟ್ರ್ಯಾಕ್ಟರ್ ಚಲಾಯಿಸಿ, ಖುಷಿಪಟ್ಟರು.

ಕೇತಗಾನಹಳ್ಳಿಯಲ್ಲಿರುವ ಕೃಷಿಭೂಮಿಯನ್ನು ಮಾದರಿ ತೋಟವನ್ನಾಗಿ ಪರಿವರ್ತಿಸಲು ಆಸಕ್ತಿ ತೋರಿಸಿರುವ ಎಚ್‌ಡಿಕೆ ಕರೋನಾ ಸಂದರ್ಭದಲ್ಲಿ ಹೆಚ್ಚಿನ ಸಮಯ ತೋಟದಲ್ಲೇ ಕಳೆದಿದ್ದಾರೆ. ಕೆಲವು ದಿನಗಳಿಂದ ತೋಟದ ಮನೆಯಲ್ಲಿಯೇ ವಾಸ್ತವ್ಯ ಹೂಡಿದ್ದಾರೆ.

ವೈದ್ಯಕೀಯ ಸಿಬ್ಬಂದಿಗೆ ಅಪಾಯ ಭತ್ಯೆ

ಬೆಂಗಳೂರು: ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಕೋವಿಡ್ ಪರೀಕ್ಷೆ ಪ್ರಯೋಗಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 922 ಗುತ್ತಿಗೆ ನೌಕರರಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮಾಸಿಕ ಅಪಾಯ ಭತ್ಯೆ ಘೋಷಿಸಿದೆ.

ಈ ಬಗ್ಗೆ ಸಚಿವ ಡಾ.ಕೆ. ಸುಧಾಕರ್ ಅವರು ಟ್ವೀಟ್ ಮಾಡಿದ್ದು, 'ಗ್ರೂಪ್ ಡಿ ನೌಕರರಿಗೆ ₹ 10 ಸಾವಿರ, ದಾದಿಯರಿಗೆ ₹8 ಸಾವಿರ, ಸಂಶೋಧನಾ ವಿಜ್ಞಾನಿಗಳು, ಸಂಶೋಧನಾ ಸಹಾಯಕರು, ಪ್ರಯೋಗಾಲಯದ ತಂತ್ರಜ್ಞರು ಹಾಗೂ ದತ್ತಾಂಶಗಳನ್ನು ದಾಖಲಿಸುವವರಿಗೆ ₹ 5 ಸಾವಿರ ಭತ್ಯೆಯನ್ನು ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ಮಹಾಂತೇಶ ಬಿ. ಉದಪುಡಿ



ಲೋಕಾಪುರ (ಬಾಗಲಕೋಟೆ ಜಿಲ್ಲೆ) : ಲೋಕಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರದ ಕಾಂಗ್ರೆಸ್ ಸದಸ್ಯ, ಗಣಿ ಉದ್ಯಮಿ ಮಹಾಂತೇಶ ಬಿ. ಉದಪುಡಿ (43) ಬುಧವಾರ ಹೃದಯಾಘಾತದಿಂದ ನಿಧನರಾದರು.

ಕೋವಿಡ್ ಸೋಂಕಿನಿಂದ ಗುಣಮುಖರಾಗಿದ್ದ ಮಹಾಂತೇಶ ಅವರಿಗೆ ನಂತರ ಬ್ಲಾಕ್ ಫಂಗಸ್ ಸೋಂಕು ತಗುಲಿತ್ತು ಎಂದು ತಿಳಿದುಬಂದಿದೆ. ಮೊದಲಿಗೆ ಮುಧೋಳ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಅವರನ್ನು 20 ದಿನಗಳ ಹಿಂದೆ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದೊಯ್ಯಲಾಗಿತ್ತು. ನಂತರ ಏರ್ ಆಂಬುಲೆನ್ಸ್ ಮೂಲಕ ರಾಜಸ್ತಾನದ ಜೈಪುರದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ತಾಯಿ, ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.



ಸೂರ್ಯನುಂಗುರ

ಕಲಬುರ್ಗಿ ಜಿಲ್ಲೆಯ ಚಿಂಚೋಳಿಯಲ್ಲಿ ಬುಧವಾರ ಬಾನಂಗಳದಲ್ಲಿ ಸೂರ್ಯನ ಸುತ್ತಲೂ ಉಂಟಾಗಿದ್ದ ಉಂಗುರದ ಚಿತ್ತಾರ ಕುತೂಹಲಕ್ಕೆ ಕಾರಣವಾಯಿತು

'ಪರಿಹಾರ ನಿಯಮ ಸರಳವಾಗಲಿ'

ಬೆಂಗಳೂರು: 'ಕೋವಿಡ್ ಪರಿಹಾರ ಪ್ಯಾಕೇಜ್ ಅಡಿ ಸರ್ಕಾರವು ಹಲವು ವರ್ಗಗಳಿಗೆ ಪರಿಹಾರ ಘೋಷಿಸಿರುವುದು ಸ್ವಾಗತಾರ್ಹ. ಆದರೆ, ತಂತ್ರಜ್ಞಾನದ ಬಳಕೆ ಗೊತ್ತಿರದವರಿಗೆ ಈ ಪರಿಹಾರ ಪಡೆಯುವುದು ಕಷ್ಟವಾಗುತ್ತಿದೆ. ತಾಂತ್ರಿಕ ಅಂಶಗಳನ್ನು ಮತ್ತು ನಿಯಮ ಸರಳೀಕರಣಗೊಳಿಸಬೇಕು' ಎಂದು ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ ಒತ್ತಾಯಿಸಿದ್ದಾರೆ.

'ಹಲವು ವರ್ಗಗಳಿಗೆ ನೀಡಿರುವ ಪರಿಹಾರ ಮೊತ್ತವು ಅತ್ಯಲ್ಪವಾಗಿದೆ. ಪರಿಹಾರ ಮೊತ್ತವನ್ನು ಹೆಚ್ಚಿಸಬೇಕು' ಎಂದು ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಕೆಎಸ್‌ಪಿಸಿಬಿ ಅಧ್ಯಕ್ಷರ ನೇಮಕ ಪ್ರಕ್ರಿಯೆ:ನೋಟಿಸ್

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಅಧ್ಯಕ್ಷರ ನೇಮಕ ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಸಾರ್ವಜನಿಕ ಪ್ರಕಟಣೆಯನ್ನು ಪ್ರಶ್ನಿಸಿ, ಚಿಕ್ಕಬಳ್ಳಾಪುರದ ಸಾಮಾಜಿಕ ಕಾರ್ಯಕರ್ತ ಆರ್. ಆಂಜನೇಯರೆಡ್ಡಿ ಅರ್ಜಿ ಸಲ್ಲಿಸಿದ್ದಾರೆ.

'ಅಧ್ಯಕ್ಷರ ನೇಮಕ ಸಂಬಂಧ 2020 ಜುಲೈ 21ರಂದು ಹೊರಡಿಸಿರುವ ಪ್ರಕಟಣೆಯಲ್ಲಿನ ಷರತ್ತುಗಳು ಜಲ ಕಾಯ್ದೆಯ ನಿಬಂಧನೆಗಳು ಮತ್ತು ಸುಪ್ರೀಂ ತೀರ್ಪಿಗೆ ವಿರುದ್ಧವಾಗಿವೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

'ನಿಬಂಧನೆಗಳನ್ನು ಪ್ರಕಟಣೆಯಲ್ಲಿ ಸೇರಿಸಿಲ್ಲ. ಕನಿಷ್ಠ ಅನುಭವವನ್ನೂ ನಿರ್ದಿಷ್ಟಪಡಿಸಲಾಗಿಲ್ಲ. ಈ ಆಯ್ಕೆ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಸಂಬಂಧ ಬಾಕಿ ಇರುವ ಇತರೆ ಅರ್ಜಿಗಳನ್ನು ಈ ಪಿಐಎಲ್‌ನೊಂದಿಗೆ ಸಂಯೋಜಿಸುವಂತೆ ತಿಳಿಸಿತು.

ಡಿ.ಕೆ. ಶಿವಕುಮಾರ್ ಕಾರ್ಯಕ್ರಮದಲ್ಲಿ ನಿಯಮ ಉಲ್ಲಂಘನೆ: ₹10 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮೇ 30ರಂದು ನಗರಕ್ಕೆ ಭೇಟಿ ನೀಡಿದ್ದಾಗ ಹೆಚ್ಚಿನ ಕಾರ್ಯಕರ್ತರು ಜಮಾಯಿಸಿ, ಕೋವಿಡ್ ನಿಯಮ ಉಲ್ಲಂಘಿಸಿದ್ದಾರೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ₹10 ಸಾವಿರ ದಂಡ ವಿಧಿಸಿದ್ದಾರೆ. ಒಂದೇ ಕಾರ್ಯಕ್ರಮದಲ್ಲಿ ನಡೆದ ಉಲ್ಲಂಘನೆಗೆ ಒಮ್ಮೆ ₹2 ಸಾವಿರ, ಮತ್ತೊಮ್ಮೆ ₹8 ಸಾವಿರ ದಂಡ ವಿಧಿಸಿರುವುದಕ್ಕೆ ಕಾಂಗ್ರೆಸ್ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಸೇರಿದಂತೆ ಹೆಚ್ಚಿನ ಕಾರ್ಯಕರ್ತರು ಅಂತರ ಕಾಯ್ದುಕೊಳ್ಳದೆ ಜಮಾಯಿಸಿದ್ದರು. ₹2 ಸಾವಿರ ದಂಡ ವಿಧಿಸಲಾಗಿತ್ತು. ಅವರಿಗೆ ಸ್ವಾಗತ ಕೋರಲು ರಸ್ತೆಯಲ್ಲಿ ನಿಯಮಬಾಹಿರವಾಗಿ ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಹಾಕಿದ್ದಕ್ಕಾಗಿ ₹8 ಸಾವಿರ ದಂಡ ವಿಧಿಸಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದರು.

ಬಿಜೆಪಿ ಆಣತಿಯಂತೆ ದಂಡ: 'ಪಾಲಿಕೆ ಅಧಿಕಾರಿಗಳು ಬಿಜೆಪಿ ಆಣತಿಯಂತೆ ಕೆಲಸ ಮಾಡುತ್ತಿದ್ದಾರೆ. ಮೊದಲು ₹2 ಸಾವಿರ ದಂಡ ಹಾಕಿ, ನಂತರ ಮತ್ತೆ ₹8 ಸಾವಿರ ದಂಡ ವಿಧಿಸಿದ್ದಾರೆ. ಇದು ಅಧಿಕಾರಿಗಳ ಇಬ್ಬಗೆಯ ನೀತಿಗೆ ಸಾಕ್ಷಿಯಾಗಿದೆ. ನಗರದಲ್ಲಿ ಸಚಿವರು ನಡೆಸುವ ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಮ ಉಲ್ಲಂಘನೆಯಾಗುತ್ತಿರುತ್ತದೆ. ಆಗ, ಅಧಿಕಾರಿಗಳು ಎಲ್ಲಿ ಹೋಗಿರುತ್ತಾರೆ' ಎಂದು ದಂಡ ಪಾವತಿಸಿರುವ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಪ್ರಶ್ನಿಸಿದರು.

ಶೀರೂರು ಪೀಠಾಧಿಪತಿ ನೇಮಕ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿಯ ಶೀರೂರು ಮಠದ ನೂತನ ಪೀಠಾಧಿಪತಿಯನ್ನಾಗಿ ಅಪ್ರಾಪ್ತರನ್ನು ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಉಡುಪಿ ಜಿಲ್ಲಾಡಳಿತಕ್ಕೆ ನೋಟಿಸ್ ನೀಡಲು ಹೈಕೋರ್ಟ್ ಬುಧವಾರ ಆದೇಶಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಎಲ್ಲಾ ಪ್ರತಿವಾದಿಗಳ ವಿಚಾರಣೆ ನಡೆಸಿದ ಬಳಿಕವೇ ಮಧ್ಯಂತರ ಆದೇಶದ ಮನವಿ ಪರಿಗಣಿಸಲಾಗುವುದು' ಎಂದು ತಿಳಿಸಿತು. ವಿಚಾರಣೆಯನ್ನು ಜುಲೈ 1ಕ್ಕೆ ಮುಂದೂಡಿತು.

'ಅಪ್ರಾಪ್ತರನ್ನು ಮಠಾಧಿಪತಿ ಮಾಡುವ ಮೂಲಕ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ. 18 ವರ್ಷ ತುಂಬುವ ತನಕ ಸ್ವತಂತ್ರವಾಗಿ ನಿರ್ಧಾರ ಕೈಗೊಂಡಿದ್ದರೂ ಅದಕ್ಕೆ ಕಾನೂನಿನಲ್ಲಿ ಮಾನ್ಯತೆ ಇಲ್ಲ. ಪೋಷಕರು ಕೂಡ ತಮ್ಮ ಮಗನ ಮೇಲೆ ಸನ್ಯಾಸ ಹೇರಲು ಅಧಿಕಾರ ಇಲ್ಲ' ಎಂದು ಪಿ. ಲಾತವ್ಯ ಆಚಾರ್ಯ ಹಾಗೂ ಇತರರು ಅರ್ಜಿಯಲ್ಲಿ ತಿಳಿಸಿದ್ದಾರೆ.

'ಈ ಬಗ್ಗೆ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೂ ತಿಳಿಸಲಾಗಿದೆ. ಬಾಲಕನ ಶೈಕ್ಷಣಿಕ ಭವಿಷ್ಯ ಮತ್ತು ಇತರ ಹಕ್ಕುಗಳನ್ನು ರಕ್ಷಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮಠಾಧಿಪತಿ ಆಗಿರುವ ಬಾಲಕನನ್ನು ವಶಕ್ಕೆ ಪಡೆಯಲು ನಿರ್ದೇಶನ ನೀಡಬೇಕು' ಎಂದು ಕೋರಿದ್ದಾರೆ.

'ಲಾಕ್‌ಡೌನ್ ನಿಯಮಾವಳಿ ಮತ್ತು ಸಾಂಕ್ರಾಮಿಕ ರೋಗಗಳ ಕಾಯ್ದೆಯನ್ನು ಉಲ್ಲಂಘಿಸಿ ಪೀಠಾಧಿಪತಿ ನೇಮಕ ಕಾರ್ಯಕ್ರಮ ನಡೆಸಲಾಗಿದೆ' ಎಂದೂ ಅರ್ಜಿದಾರರು ದೂರಿದ್ದಾರೆ.

ಸಚಿವ ಯೋಗೇಶ್ವರ್ ವಿರುದ್ಧ ಸಿಐಡಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಗಾಸಿಟಿ ಡೆವಲಪರ್ಸ್ ಕಂಪನಿಯ ಗ್ರಾಹಕರಿಗೆ ವಂಚಿಸಿರುವ ಪ್ರಕರಣದಲ್ಲಿ ಸಚಿವ ಸಿ.ಪಿ. ಯೋಗೇಶ್ವರ್ ವಿರುದ್ಧ ಕ್ರಮ ಜರುಗಿಸಿ, ಗ್ರಾಹಕರಿಗೆ ನ್ಯಾಯ ದೊರಕಿಸಿಕೊಡುವಂತೆ ಒತ್ತಾಯಿಸಿ ಮೆಗಾಸಿಟಿ ನಿವೇಶನ ಸದಸ್ಯರ ಹಿತರಕ್ಷಣಾ ಸಂಘದ ಅಧ್ಯಕ್ಷ ರವೀಂದ್ರ ಬೆಲೆಯೂರು ಸಿಐಡಿ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ.

'1995–2000ದ ಅವಧಿಯಲ್ಲಿ 9,000 ಜನರಿಂದ ₹ 70 ಕೋಟಿ ಸಂಗ್ರಹಿಸಿ ವಂಚಿಸಿರುವ ಆರೋಪ ಮೆಗಾಸಿಟಿ ಡೆವಲಪರ್ಸ್ ಮೇಲಿದೆ. 25 ವರ್ಷಗಳಾದರೂ ವಂಚನೆಗೊಳಗಾದ ಗ್ರಾಹಕರಿಗೆ ನ್ಯಾಯ ದೊರಕಿಲ್ಲ. ಕೇಂದ್ರ ಸರ್ಕಾರದ ಗಂಭೀರ ವಂಚನೆ ಪ್ರಕರಣಗಳ ತನಿಖಾ ಕಚೇರಿ (ಎಸ್‌ಎಫ್‌ಐಒ) ಮತ್ತು ರಾಜ್ಯದ ಸಿಐಡಿ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ. ಆದರೂ, ಗ್ರಾಹಕರಿಗೆ ನ್ಯಾಯ ಲಭಿಸಿಲ್ಲ' ಎಂದು ಮೇ 31ರಂದು ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಗ್ರಾಹಕರ ವೇದಿಕೆಗಳ ಆದೇಶದಂತೆ 69 ಮಂದಿಗೆ ಪಾವತಿಸಬೇಕಿದ್ದ ₹ 4.86 ಕೋಟಿಯನ್ನು 2006ರಿಂದಲೂ ನೀಡಿಲ್ಲ. ಹೂಡಿಕೆದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆಯ ಅಡಿಯಲ್ಲೂ ಕ್ರಮ ಜರುಗಿಸಿಲ್ಲ. ಕಂಪನಿಯ ಸಂಸ್ಥಾಪಕರಾದ ಸಚಿವ ಯೋಗೇಶ್ವರ್ ವಿರುದ್ಧ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ತಕ್ಷಣ ಮಧ್ಯ ಪ್ರವೇಶಿಸಿ ಗ್ರಾಹಕರಿಗೆ ನ್ಯಾಯ ದೊರಕಿಸಿಕೊಡಬೇಕು ಮತ್ತು ಯೋಗೇಶ್ವರ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಚರ್ಚೆಗೆ ಗ್ರಾಸವಾದ ತೇಜಸ್ವಿನಿ ಅನಂತಕುಮಾರ್ ಟ್ವೀಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಅವರು 'ನಾಯಕತ್ವ' ವಿಚಾರಕ್ಕೆ ಸಂಬಂಧಿಸಿದಂತೆ ಬುಧವಾರ ಮಾಡಿರುವ ಟ್ವೀಟ್ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದೆ.

'ಪ್ರಧಾನಿ ನರೇಂದ್ರ ಮೋದಿಯವರನ್ನೇ ಉದ್ದೇಶಿಸಿ ಈ ಟ್ವೀಟ್ ಮಾಡಿದ್ದೀರಲ್ಲವೇ' ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ.

'ಯಾರ ಮಾತುಗಳನ್ನೂ ಕೇಳದ ನಾಯಕನ ಸುತ್ತ ಅಂತಿಮವಾಗಿ ಏನನ್ನೂ ಹೇಳಲು ಬಯಸದವರೇ ಸುತ್ತುವರೆದಿರುತ್ತಾರೆ' ಎಂಬ ಆ್ಯಂಡಿ ಸ್ಟಾನ್ಲಿ ಅವರ ಈ ಮಾತನ್ನಷ್ಟೇ ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ತೇಜಸ್ವಿನಿ, 'ಈ ಬಲಿಷ್ಠ ಸಂದೇಶವು ಸಮಾಜದ ಎಲ್ಲ ವರ್ಗಕ್ಕೂ ಅನ್ವಯವಾಗುತ್ತದೆ' ಎಂದೂ ತೇಜಸ್ವಿನಿ ಅನಂತಕುಮಾರ್ ಪ್ರತಿಪಾದಿಸಿದ್ದಾರೆ.

ಈ ಬಗ್ಗೆ ಸಾಕಷ್ಟು ವ್ಯಾಖ್ಯಾನಗಳು ಟ್ವಿಟರ್‌ನಲ್ಲಿ ವ್ಯಕ್ತವಾಗಿವೆ.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಚುನಾವಣೆ ಸ್ಪರ್ಧಿಸುವಂತೆ ಒತ್ತಾಯಿಸಿ ಪ್ರಚಾರಕ್ಕೆ ಇಳಿಸಿದರು. ಆದರೆ, ಟಿಕೆಟ್ ನೀಡಿದ್ದು ತೇಜಸ್ವಿ ಸೂರ್ಯ ಅವರಿಗೆ. ಬಳಿಕ ತೇಜಸ್ವಿನಿ ಅವರನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷರನ್ನಾಗಿ ಮಾಡಿದರೂ, ಅವರ ಪ್ರತಿಭೆಯನ್ನು ಬಳಸಿಕೊಳ್ಳಲಿಲ್ಲ. ಬಿ.ಎಲ್.ಸಂತೋಷ್ ಅವರ ಕಾರಣಕ್ಕೆ ಟಿಕೆಟ್‌ನಿಂದ ವಂಚಿತರಾಗಿದ್ದೂ ಅಲ್ಲದೆ, ರಾಜಕೀಯವಾಗಿ ಮೂಲೆಗುಂಪು ಮಾಡಲಾಗಿದೆ ಎಂದು ಬಿಜೆಪಿಯ ಒಂದು ವಲಯ ಭಾವಿಸಿದೆ. ಇವೆಲ್ಲವೂ ಮತ್ತೆ ಮುನ್ನೆಲೆಗೆ ಬರಲು ಟ್ವೀಟ್ ಕಾರಣವಾಗಿದೆ.

ಕೇಳುವವರಿಲ್ಲದ ಮೌರಿಸ್ ಬಾಳೆಹಣ್ಣು


ಟ್ರ್ಯಾಕ್ಟರ್ ಓಡಿಸಿ ಬೆಳೆ ನೆಲಸಮ

• ಸುವರ್ಣಾ ಬಸವರಾಜ್

ಹಿರಿಯೂರು: ತಾಲ್ಲೂಕಿನ ದಿಂಡಾವರ ಗ್ರಾಮದಲ್ಲಿ ರೋಬೊಸ್ಟಾರ್-ಜಿ 9 ತಳಿಯ (ಪಚ್ಚಬಾಳೆ/ಮೌರಿಸ್) ಬಾಳೆ ಹಣ್ಣನ್ನು ಖರೀದಿಸುವವರಿಲ್ಲದೇ ಬೇಸರಗೊಂಡ ಯುವ ರೈತರೊಬ್ಬರು ಬುಧವಾರ ಟ್ರ್ಯಾಕ್ಟರ್ ಮೂಲಕ ಬಾಳೆ ಬೆಳೆಯನ್ನು ನೆಲಸಮ ಮಾಡಿದ್ದಾರೆ.

ಎಂ.ಎ., ಬಿ.ಇಡಿ ಪದವೀಧರರಾಗಿರುವ ಚಂದ್ರಗಿರಿ ಅವರು ಕೃಷಿ-ತೋಟಗಾರಿಕೆಯಲ್ಲಿ ಏನಾದರೂ ಸಾಧಿಸಬೇಕೆಂಬ ಛಲದಿಂದ ಕೃಷಿ ಕ್ಷೇತ್ರಕ್ಕೆ ಬಂದಿದ್ದರು. ಆದರೆ, ಕೊರೊನಾ ಲಾಕ್‌ಡೌನ್ ಅವರ ಕನಸಿಗೆ ಪೆಟ್ಟು ನೀಡಿದೆ.

'₹ 3 ಲಕ್ಷ ಖರ್ಚು ಮಾಡಿ ಒಂದೂವರೆ ಎಕರೆಯಲ್ಲಿ 1,500 ರೊಬೊಸ್ಟಾರ್–ಜಿ–9 ತಳಿಯ ಬಾಳೆ ನಾಟಿ ಮಾಡಿದ್ದೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಪಚ್ಚ ಬಾಳೆಗೆ ಉತ್ತಮ ಬೇಡಿಕೆ ಇರುತ್ತದೆ ಎಂದು ಅದೇ ಸಮಯಕ್ಕೆ ಕೊಯ್ಲಿಗೆ ಬರುವಂತೆ ಬೆಳೆಸಿದ್ದೆ. ಕೊರೊನಾ ನನ್ನ ಎಲ್ಲ ಲೆಕ್ಕಾಚಾರಗಳನ್ನು ನುಚ್ಚುನೂರು ಮಾಡಿದೆ. ₹ 15ರಿಂದ ₹20ಕ್ಕೆ ಒಂದು ಕೆ.ಜಿಯಂತೆ ತೋಟಕ್ಕೇ ಬಂದು ಖರೀದಿಸುತ್ತಿದ್ದ ವರ್ತಕರನ್ನು, 'ಎಷ್ಟಾದರೂ ಕೊಡಿ, ಬಾಳೆಗೊನೆ ಕಡಿದುಕೊಂಡು ಹೋಗಿ' ಎಂದರೂ ಬರುತ್ತಿಲ್ಲ. ಗಿಡದಲ್ಲಿಯೇ ಹಣ್ಣಾಗಿ ಉದುರುತ್ತಿದ್ದವು. ಅಂತಿಮವಾಗಿ ಬೆಳೆಯ ಮೇಲೆ ಟ್ರ್ಯಾಕ್ಟರ್ ಹರಿಸಲು ತೀರ್ಮಾನಿಸಿದೆ' ಎಂದು ಚಂದ್ರಗಿರಿ ಅಳಲು ತೋಡಿಕೊಂಡರು.



ಹಿರಿಯೂರು ತಾಲ್ಲೂಕಿನ ದಿಂಡಾವರ ಗ್ರಾಮದಲ್ಲಿ ಬೆಲೆ ಕುಸಿತದಿಂದ ಬೇಸತ್ತ ರೈತ ಚಂದ್ರಗಿರಿ ಅವರು ತಮ್ಮ ಹೊಲದಲ್ಲಿ ಬೆಳೆದ ಬಾಳೆ ಫಸಲನ್ನು ಟ್ರ್ಯಾಕ್ಟರ್ ಹಾಯಿಸಿ ನಾಶಪಡಿಸಿದ್ದಾರೆ.

'ಪಂಪ್‌ಸೆಟ್ ನೀರಿನ ಆಶ್ರಯದಲ್ಲಿ ಬೆಳೆ ತೆಗೆಯುವ ಕಷ್ಟ ಏನೆಂದು ಬೆಳೆದವರಿಗೆ ಮಾತ್ರ ಗೊತ್ತು. ಕರೆಂಟ್ ಬರುವುದನ್ನು ಹಗಲು-ರಾತ್ರಿ ಎನ್ನದೇ ಕಾದುಕೊಂಡಿದ್ದು ನೀರು ಹಾಯಿಸಬೇಕು. ನಮ್ಮ ಇನ್ನೊಂದು ಜಮೀನಿನಲ್ಲಿ 2,500 ಏಲಕ್ಕಿ ಬಾಳೆಗಿಡಗಳಿವೆ. ಅದಕ್ಕೂ ಬೆಲೆ ಇಲ್ಲ. ₹ 8ರಿಂದ ₹ 12ಕ್ಕೆ ಕೆ.ಜಿಯಂತೆ ಕೇಳುತ್ತಾರೆ. ಕನಿಷ್ಠ ಖರ್ಚಾದರೂ ಬರಲಿ ಎಂದು ಅದನ್ನು ಬಿಟ್ಟಿದ್ದೇನೆ' ಎಂದು ಅವರು ಹೇಳಿದರು.



ಚಂದ್ರಗಿರಿ

'ತೋಟಗಾರಿಕೆ ಇಲಾಖೆಯವರು ಹಣ್ಣು-ತರಕಾರಿ ಬೆಳೆಗಳನ್ನು ಖರೀದಿಸುವ ವರ್ತಕರ ಮೊಬೈಲ್ ನಂಬರ್ ಕೊಡುತ್ತಾರೆ. ಆದರೆ, ರೈತರು ಖರೀದಿದಾರರನ್ನು ಸಂಪರ್ಕಿಸಿದರೆ, 'ಸದ್ಯಕ್ಕೆ ಬೇಡ; ಬೇಡಿಕೆ ಇಲ್ಲ. ಕೊರೊನಾ ಮುಗಿಯಲಿ' ಎನ್ನುತ್ತಾರೆ. ತೀರಾ ಒತ್ತಾಯ ಮಾಡಿದರೆ ಬಾಯಿಗೆ ಬಂದ ದರಕ್ಕೆ ಕೊಡುವಂತೆ ಹೇಳಿ ಫೋನ್ ಕಟ್ ಮಾಡುತ್ತಾರೆ. ಮದುವೆ, ಜಾತ್ರೆ-ಉತ್ಸವಗಳು ನಡೆದಿದ್ದರೆ ಯಾರನ್ನೂ ಬೇಡುವ ಸನ್ನಿವೇಶ ಬರುತ್ತಿರಲಿಲ್ಲ. ಸರ್ಕಾರ ನೆರವು ನೀಡುತ್ತದೆ ಎಂಬ ನಂಬಿಕೆಯೂ ಇಲ್ಲ. ಕನಿಷ್ಠ ನಾವು ಮಾಡಿರುವ ಖರ್ಚನ್ನಾದರೂ ಸಹಾಯಧನದ ರೂಪದಲ್ಲಿ ಕೊಟ್ಟರೆ ಸಾಕು' ಎಂದು ಚಂದ್ರಗಿರಿ ಅಭಿಪ್ರಾಯಪಟ್ಟರು.

ಕಾವೇರಿ ತೀರದ ದೇವಾಲಯದಲ್ಲಿ ವಿಧಿವಿಧಾನ

ಕೋವಿಡ್– 19 ಸಾವು: ಸರ್ಕಾರದಿಂದ ಅಸ್ಥಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟ ಸಾವಿರಕ್ಕೂ ಹೆಚ್ಚು ಮಂದಿಯ ಅಸ್ಥಿ ವಿಸರ್ಜನೆಯ ಕಾರ್ಯವು, ಬುಧವಾರ ಕಾವೇರಿ ನದಿ ತೀರದಲ್ಲಿ ಸರ್ಕಾರದ ವತಿಯಿಂದಲೇ ನಡೆಯಿತು.

ಬುಧವಾರ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸಮೀಪದ ಕಾವೇರಿ ನದಿ ತೀರದಲ್ಲಿ ಸರ್ಕಾರದ ವತಿಯಿಂದಲೇ ನೆರವೇರಿತು.

ವಾರಸುದಾರರು ಇಲ್ಲದ, ಅಂತ್ಯಕ್ರಿಯೆ ನಡೆಸಲು ಕುಟುಂಬದ ಸದಸ್ಯರು ನಿರಾಕರಿಸಿದ ಮೃತದೇಹಗಳಿಗೆ ಸರ್ಕಾರದ ವತಿಯಿಂದಲೇ ಅಂತ್ಯಸಂಸ್ಕಾರ ನೆರವೇರಿಸಲಾಗಿತ್ತು. ಕುಟುಂಬದ ಸದಸ್ಯರು ಅಸ್ಥಿಯನ್ನೂ ಪಡೆದಿರಲಿಲ್ಲ. ಹೀಗಾಗಿ, ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸಮೀಪದ ಕಾವೇರಿ ತೀರದಲ್ಲಿರುವ ಕಾಶಿವಿಶ್ವನಾಥಸ್ವಾಮಿ ದೇವಾಲಯದಲ್ಲಿ ಧಾರ್ಮಿಕ ವಿಧಿವಿಧಾನದೊಂದಿಗೆ ಅಸ್ಥಿ ವಿಸರ್ಜಿಸಲಾಯಿತು.

ಕಂದಾಯ ಸಚಿವ ಆರ್.ಅಶೋಕ್ ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡಾ.ಭಾನುಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ ಅಸ್ಥಿ ವಿಸರ್ಜನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಆರ್.ಅಶೋಕ್, 'ಕೋವಿಡ್ ಅಲೆಯಲ್ಲಿ ಮಾನವೀಯತೆ ಮರೆಯಾಗಿದೆ. ಅಂತ್ಯಸಂಸ್ಕಾರಕ್ಕೆ ಕುಟುಂಬ ಸದಸ್ಯರೇ ನಿರಾಕರಿಸಿದ್ದಾರೆ. ಹಲವೆಡೆ ಶವಗಳನ್ನು ನದಿಗೆ ಎಸೆಯುತ್ತಿರುವ ಘಟನೆಗಳೂ ನಡೆದಿವೆ. ನಮ್ಮಲ್ಲಿ ಅಂತಹ ಪರಿಸ್ಥಿತಿ ಬರಬಾರದು ಎಂಬ ಕಾರಣಕ್ಕೆ ಸರ್ಕಾರದ ವತಿಯಿಂದಲೇ ಅಂತ್ಯಸಂಸ್ಕಾರ ಮಾಡಿ ಅಸ್ಥಿಯನ್ನೂ ವಿಸರ್ಜನೆ ಮಾಡಲಾಗುತ್ತಿದೆ' ಎಂದರು.

'ಮುಸ್ಲಿಂ, ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಮೃತದೇಹಗಳನ್ನು ಅವರ ಧರ್ಮದ ಸಂಪ್ರದಾಯದಂತೆ ಹೂಳಲಾಗಿದೆ. ದಹನ ಮಾಡಲಾದ, ಹಿಂದೂಗಳ ಚಿತಾಭಸ್ಮವನ್ನು ನದಿಯಲ್ಲಿ ವಿಸರ್ಜಿಸಲಾಗುತ್ತಿದೆ' ಎಂದರು.

ಸಂಖ್ಯೆಯಲ್ಲಿ ವ್ಯತ್ಯಾಸ: ಸಚಿವ ಆರ್. ಅಶೋಕ್ ಹಾಗೂ ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ಅವರು ಹೇಳಿದ ಅಸ್ಥಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡು ಬಂತು.

'500 ಅಸ್ಥಿಗಳನ್ನು ವಿಸರ್ಜನೆ ಮಾಡಲಾಗಿದೆ' ಎಂದು ಸಚಿವ ಆರ್. ಅಶೋಕ್ ತಿಳಿಸಿದರು. 'ಸಾವಿರಕ್ಕೂ ಹೆಚ್ಚು ಹೆಸರುಗಳನ್ನು ಧಾರ್ಮಿಕ ವಿಧಾನದ ವೇಳೆ ಓದಲಾಯಿತು' ಎಂದು ಜ್ಯೋತಿಷಿ ಡಾ.ಭಾನುಪ್ರಕಾಶ್ ಶರ್ಮಾ ತಿಳಿಸಿದರು.



ಕಾವೇರಿ ನದಿ ತೀರದ ಕಾಶಿ ವಿಶ್ವನಾಥಸ್ವಾಮಿ ದೇವಾಲಯದಲ್ಲಿ, ಅಸ್ಥಿ ವಿಸರ್ಜನೆಗೆ ಧಾರ್ಮಿಕ ವಿಧಿವಿಧಾನ ಪೂರೈಸಲಾಯಿತು

ಮೆಚ್ಚುಗೆ–ಟೀಕೆ

ಕೋವಿಡ್ ಶವಗಳ ಅಂತ್ಯಸಂಸ್ಕಾರ ಹಾಗೂ ಅಸ್ಥಿ ವಿಸರ್ಜನೆ ಕುರಿತು ಸಚಿವ ಆರ್.ಅಶೋಕ್ ತಮ್ಮ ಫೇಸ್ ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಅವರ ಈ ಕಾರ್ಯಕ್ಕೆ ಜನರಿಂದ ಮೆಚ್ಚುಗೆ ಹಾಗೂ ಟೀಕೆ ಎರಡೂ ವ್ಯಕ್ತವಾಗಿದೆ.

ಅನಾಥ ಶವಗಳ ಅಂತ್ಯಕ್ರಿಯೆ ನಡೆಸಿ, ಪಿತೃಕಾರ್ಯ ಮಾಡುತ್ತಿರುವುದಕ್ಕೆ ಕೆಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಲವರು ನದಿಯನ್ನು ಮಲಿನಗೊಳಿಸುತ್ತಿರುವುದಕ್ಕೆ ಆಕ್ಷೇಪಿಸಿದ್ದಾರೆ.

ಇನ್ನೂ ಕೆಲವರು, 'ಸರಿಯಾದ ಸಂದರ್ಭದಲ್ಲಿ ಜನರಿಗೆ ಹಾಸಿಗೆ, ಆಮ್ಲಜನಕ ಹಾಗೂ ಇತರ ವೈದ್ಯಕೀಯ ಸೌಲಭ್ಯ ನೀಡಿದ್ದರೆ ಸರ್ಕಾರಕ್ಕೆ ಅಸ್ಥಿ ವಿಸರ್ಜನೆ ಮಾಡುವ ಸ್ಥಿತಿ ಬರುತ್ತಿರಲಿಲ್ಲ' ಎಂದು ತಿವಿದಿದ್ದಾರೆ.

ಪ್ರತಿಭಟನೆ ನಡೆಸಿದ್ದರೂ ಕ್ರಮ ತೆಗೆದುಕೊಳ್ಳಲು ಹಿಂದೇಟು


ಪರಿಶಿಷ್ಟರಿಗೆ ಲಸಿಕೆ ನಿರಾಕರಣೆ: ಹರಿಪ್ರಸಾದ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ಜಾತಿ ಆಧಾರದಲ್ಲಿ ಕೋವಿಡ್ ಲಸಿಕೆ ಹಾಕಲು ಹೊರಟಿದೆ. ಮಲ್ಲೇಶ್ವರದ ಬಾಲಕಿಯರ ಪ್ರೌಢಶಾಲೆಯಲ್ಲಿ ಪರಿಶಿಷ್ಟರಿಗೆ ಮಂಗಳವಾರ ಲಸಿಕೆ ನಿರಾಕರಿಸಲಾಗಿದೆ' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ನಿಮಗೆ ಇಲ್ಲಿ ಲಸಿಕೆ ಹಾಕಲ್ಲ, ಬಿಬಿಎಂಪಿಗೆ ಹೋಗಿ ಎಂದು ಪರಿಶಿಷ್ಟರಿಗೆ ಹೇಳಿದ್ದಾರೆ. ಈ ಬಗ್ಗೆ ಪ್ರತಿಭಟನೆ ನಡೆಸಲಾಗಿದೆ. ಆದರೆ, ಕ್ರಮ ತೆಗೆದುಕೊಳ್ಳಲು ಪೊಲೀಸರು ಹಿಂಜರಿಯುತ್ತಿದ್ದಾರೆ' ಎಂದರು.

'ಸರ್ಕಾರದ ಇಂಥ ವರ್ತನೆಯ ವಿರುದ್ಧ ಬೀದಿಗಿಳಿದು ನಾವು ಪ್ರತಿಭಟನೆ ನಡೆಸುತ್ತೇವೆ. ಜೈಲಿಗೆ ಹೋಗಲು ಕೂಡಾ ಸಿದ್ಧರಿದ್ದೇವೆ. ಹಾಸಿಗೆ ಬ್ಲಾಕಿಂಗ್ ಪ್ರಕರಣದಲ್ಲಿ ಯಾರ ಮೇಲೆ ಕೇಸು ಹಾಕಿದ್ದಾರೆ. ಈಗ ಪರಿಶಿಷ್ಟರ ಬಗ್ಗೆ ಯಾರು ಧ್ವನಿ ಎತ್ತುತ್ತಾರೆ' ಎಂದು ಪ್ರಶ್ನಿಸಿದ ಅವರು, 'ಇದು ಉಳ್ಳವರ ಸರ್ಕಾರ' ಎಂದು ವಾಗ್ದಾಳಿ ನಡೆಸಿದರು.



ಹರಿಪ್ರಸಾದ್

'ಪೊಲೀಸರ ನಿಷ್ಠೆ ರಾಷ್ಟ್ರ ಧ್ವಜಕ್ಕೆ ಇರಬೇಕು, ಅವರು ಸಂವಿಧಾನಕ್ಕೆ ನಿಷ್ಠರಾಗಿರಬೇಕು, ಯಾವುದೇ ಪಕ್ಷದ ಪರವಾಗಿ ಇರಬಾರದು. ಲಸಿಕೆ ನೀಡಲು ವಾಪಸ್ ಕಳುಹಿಸಿದ ಬಗ್ಗೆ ಕೇಸ್ ದಾಖಲು ಮಾಡಬೇಕು' ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ವಿರುದ್ಧವೂ ವಾಗ್ದಾಳಿ ನಡೆಸಿದ ಹರಿಪ್ರಸಾದ್, 'ಮೋದಿ ಅಂದರೆ ಬ್ಯುಸಿನೆಸ್ ಎನ್ನಲಾಗುತ್ತಿತ್ತು. ಇವತ್ತು ಮೋದಿ ಅಂದರೆ ಕ್ರೈಸಿಸ್ ಎನ್ನಲಾಗುತ್ತಿದೆ. ಇವರ ಸಾಧನೆ ಹೊರಗೆ ಸಿಂಗಾರ, ಒಳಗೆ ಗೋಣಿ ಸೊಪ್ಪಿನಂತಾಗಿದೆ' ಎಂದರು.

'ಮುಗ್ಧ ಜನರ ರಕ್ತದ ಕಣ್ಣೀರು ದೇಶದಲ್ಲಿ ಹರಿದಿದೆ. ಜನರ ಸಂಕಷ್ಟಗಳಿಗೆ ಸರ್ಕಾರ ಸ್ಪಂದಿಸಬೇಕು. ಆದರೆ, ಅದ್ಯಾವುದನ್ನೂ ಮೋದಿ ಮಾಡುತ್ತಿಲ್ಲ. ಪ್ರಜಾಪ್ರಭುತ್ವದ ಮೇಲೆ ಇವರಿಗೆ ನಂಬಿಕೆಯಿಲ್ಲ. ಪ್ರಧಾನಿ ವರ್ಚಸ್ಸು ಕಾಪಾಡುವುದೇ 70 ಸಚಿವರ ಗುರಿಯಾಗಿದೆ. ಇವತ್ತು ಕೋವಿಡ್ ಸೋಂಕಿನಲ್ಲಿ ದೇಶ ಮೊದಲ ಸ್ಥಾನಕ್ಕೆ ಬಂದಿದೆ. ದೇಶವನ್ನು ಸಂಪೂರ್ಣ ಹಾಳು ಮಾಡಿದ ಕೀರ್ತಿ ಮೋದಿಗೆ ಸಲ್ಲುತ್ತದೆ' ಎಂದು ಟೀಕಿಸಿದರು.

'ಕೇಂದ್ರ ಸರ್ಕಾರ ಎಲ್ಲರ ಜನಧನ ಖಾತೆಗೆ ತಲಾ ₹ 10 ಸಾವಿರ ಹಾಕಬೇಕು. ಕಾರ್ಮಿಕ, ಬಡವರಿಗೆ ಹಣ ಸಹಾಯ ಮಾಡಬೇಕು' ಎಂದೂ ಒತ್ತಾಯಿಸಿದರು.

ಆರೋಪ ಸುಳ್ಳು: ಅಶ್ವತ್ಥನಾರಾಯಣ

'ಮಲ್ಲೇಶ್ವರಲ್ಲಿ ಜಾತಿ ಆಧಾರದ ಮೇಲೆ ಲಸಿಕೆ ನೀಡಲಾಗುತ್ತಿದೆ' ಎಂದು ಬಿ.ಕೆ. ಹರಿಪ್ರಸಾದ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಕ್ಷೇತ್ರದ ಶಾಸಕರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಇದು ಬೇಜವಾಬ್ದಾರಿ ಹೇಳಿಕೆ. ಜಾತಿ- ಧರ್ಮದ ಹೆಸರೇಳದಿದ್ದರೆ ಅವರಿಗೆ ನಿದ್ದೆ ಬರುವುದಿಲ್ಲ. ಲಸಿಕೆ ಅಭಿಯಾನವನ್ನು ಹಳಿ ತಪ್ಪಿಸಬೇಕು ಎಂಬ ಷಡ್ಯಂತ್ರ ಅವರು ಇಟ್ಟುಕೊಂಡಿರುವಂತಿದೆ' ಎಂದು ತರಾಟೆಗೆ ತೆಗೆದುಕೊಂಡರು.

'ಲಸಿಕೆಯಲ್ಲಿ ಜಾತಿ ತರುವ ಕೆಲಸವನ್ನು ನಾನಾಗಲಿ ಅಥವಾ ನಮ್ಮ ಪಕ್ಷವಾಗಲಿ ಮಾಡಿಲ್ಲ. ಯಾರಿಗೂ ಲಸಿಕೆ ನಿರಾಕರಿಸಿಲ್ಲ. ದಾನಿಗಳ ನೆರವಿನಿಂದ ಮುಕ್ತ ಮಾರುಕಟ್ಟೆಯಲ್ಲಿ ಲಸಿಕೆ ಖರೀದಿ ಮಾಡಿ ಕೊಳೆಗೇರಿಗಳಲ್ಲಿ ವಾಸಿಸುವ 1,000ಕ್ಕೂ ಹೆಚ್ಚು ಬಡವರಿಗೆ, ಆರ್ಥಿಕ ದುರ್ಬಲರಿಗೆ ಲಸಿಕೆ ಕೊಡಿಸಿದ್ದೇನೆ. ಅಲ್ಲದೆ 9 ಸಾವಿರ ಜನರಿಗೆ ಲಸಿಕೆ ನೀಡಲಾಗಿದೆ. ಇದರಲ್ಲಿ ಕ್ಷೇತ್ರದ ಏಳು ಕೊಳೆಗೇರಿಗಳ ಜನರೇ ಹೆಚ್ಚು ಇದ್ದಾರೆ' ಎಂದರು.

ಹೆಚ್ಚುವರಿ ವಿದ್ಯುತ್ ಮಾರಾಟ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಹೆಚ್ಚುವರಿ ವಿದ್ಯುತ್‌ನ್ನು ದೀರ್ಘಾವಧಿ ಒಪ್ಪಂದದ ಮೂಲಕ ಮಾರಾಟ ಮಾಡಲು ಕ್ರಮ ಕೈಗೊಳ್ಳಬೇಕು' ಎಂದು ಇಂಧನ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚಿಸಿದರು.

ರಾಜ್ಯದಲ್ಲಿನ ವಿದ್ಯುತ್ ಪೂರೈಕೆಯ ಸ್ಥಿತಿಗತಿ ಮತ್ತು ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆ ಕುರಿತಂತೆ ಅವರು ಬುಧವಾರ ಸಭೆ ನಡೆಸಿದರು.

'ರಾಜ್ಯದಲ್ಲಿ ಒಟ್ಟು ವಿದ್ಯುತ್‌ನಲ್ಲಿ ಶೇ 18ರಷ್ಟು ಕೈಗಾರಿಕೆಗಳಿಗೆ ಬಳಕೆಯಾಗುತ್ತಿದೆ. ಕೈಗಾರಿಕೆಗಳಿಗೆ ನಿರಂತರವಾಗಿ ಗುಣಮಟ್ಟದ ವಿದ್ಯುತ್ ಪೂರೈಕೆ ವೇಳೆ ತಲೆದೋರುವ ತೊಡಕುಗಳನ್ನು ನಿವಾರಿಸಲು ಕೈಗಾರಿಕಾ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು' ಎಂದೂ ಅಧಿಕಾರಿಗಳಿಗೆ ಸಲಹೆ ನೀಡಿದರು.

'ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಸಾಮರ್ಥ್ಯ 30,562.56 ಮೆಗಾ ವ್ಯಾಟ್‌ನಷ್ಟಿದೆ. ಶೇ 50ರಷ್ಟು ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಲಾಗುತ್ತಿದೆ. ಸದ್ಯ ವಿದ್ಯುತ್ ಕೊರತೆ ಇಲ್ಲ. ಜಲಾಶಯಗಳಲ್ಲಿ ಸಾಕಷ್ಟು ನೀರು ಇರುವುದರಿಂದ ಹಾಗೂ ಈ ಬಾರಿ ಮುಂಗಾರು ಸಾಮಾನ್ಯವಾಗಿರುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಈ ಬಾರಿ ವಿದ್ಯುತ್ ಕೊರತೆ ಉಂಟಾಗದು' ಎಂದು ಅಧಿಕಾರಿಗಳು ತಿಳಿಸಿದರು.

'ರಾಜ್ಯದಲ್ಲಿ ವಿದ್ಯುತ್ ಪ್ರಸರಣ ಜಾಲದಲ್ಲಿ ಸೋರಿಕೆ ಪ್ರಮಾಣ ಕೇವಲ ಶೇ 3ರಷ್ಟಿದೆ. ಆ ಮೂಲಕ, ಸೋರಿಕೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದಾಗ, 'ವಿತರಣಾ ಜಾಲದ ಸೋರಿಕೆ ಪ್ರಮಾಣವನ್ನು ಶೇ 5ಕ್ಕಿಂತ ಕಡಿಮೆಗೊಳಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

'ನೀರಾವರಿ ಪಂಪ್ ಸೆಟ್‌ಗಳಿಗೆ 7 ಗಂಟೆ ವಿದ್ಯುತ್ ಪೂರೈಕೆ ಸಾಧ್ಯವಾಗುವಂತೆ ಸ್ಟೇಷನ್‌ಗಳು ಹಾಗೂ ಫೀಡರ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. 2022ರ ಮಧ್ಯಭಾಗದಲ್ಲಿ ಈ ಕೆಲಸ ಪೂರ್ಣಗೊಳ್ಳಲಿದೆ. 26 ಸ್ಟೇಷನ್‌ಗಳು ಹಾಗೂ 182 ಫೀಡರ್‌ಗಳ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ' ಎಂದೂ ಅಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಕೂಡಾ ಇದ್ದರು.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ: ಹಾವೇರಿ ಆಯ್ಕೆ

ಹಾವೇರಿ: 'ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ, ಮಿಶ್ರಬೆಳೆ ಪದ್ಧತಿಯನ್ನು ಪ್ರೋತ್ಸಾಹಿಸಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶವಿದೆ. ಈ ಯೋಜನೆಗೆ ರಾಜ್ಯದಲ್ಲಿ ಹಾವೇರಿಯನ್ನು ಪ್ರಾಯೋಗಿಕ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಏಕ ಬೆಳೆ ಪದ್ಧತಿಯಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಇದನ್ನು ತಪ್ಪಿಸಿ ಆದಾಯ ಹೆಚ್ಚಿಸಲು ಎಣ್ಣೆಕಾಳು ಹಾಗೂ ದ್ವಿದಳ ಧಾನ್ಯಗಳ 'ಮಿಶ್ರಬೆಳೆ ಯೋಜನೆಗೆ ಆದ್ಯತೆ ನೀಡಲಾಗುತ್ತದೆ. ಹಾವೇರಿ ಜಿಲ್ಲೆಯಲ್ಲಿ 6 ಸಾವಿರ ಹೆಕ್ಟೇರ್‌ನಲ್ಲಿ ಮಿಶ್ರ ಬೆಳೆಗೆ ಪ್ರೋತ್ಸಾಹ ನೀಡಲಾಗುತ್ತದೆ' ಎಂದರು.

ಈ ಯೋಜನೆಯಡಿ 401 ಕ್ವಿಂಟಲ್ ತೊಗರಿ, 240 ಕ್ವಿಂಟಲ್ ಶೇಂಗಾ, 2,800 ಕ್ವಿಂಟಲ್ ಸೋಯಾ ಅವರೆ ಬಿತ್ತನೆ ಬೀಜ ಸೇರಿದಂತೆ ಒಟ್ಟು 2,441 ಕ್ವಿಂಟಲ್ ಬಿತ್ತನೆ ಬೀಜವನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುವುದು. ಎಂದು ಮಾಹಿತಿ ನೀಡಿದರು.

ಲಸಿಕೆ: ನಗರ ಪ್ರದೇಶದಲ್ಲೂ ಸ್ಥಳದಲ್ಲಿ ನೋಂದಣಿ

ಬೆಂಗಳೂರು: ನಗರ ಪ್ರದೇಶದಲ್ಲಿನ 45 ವರ್ಷ ಮೇಲ್ಪಟ್ಟವರು ಕೂಡ ಸರ್ಕಾರಿ ವ್ಯವಸ್ಥೆಯಡಿ ಸ್ಥಳದಲ್ಲಿಯೇ ಹೆಸರು ನೋಂದಾಯಿಸಿ, ಲಸಿಕೆ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ.

ಈ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ಇನ್ನುಮುಂದೆ 45 ವರ್ಷ ಮೇಲ್ಪಟ್ಟ ಎಲ್ಲ ಫಲಾನುಭವಿಗಳು ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಆನ್‌ಲೈನ್ ಅಥವಾ ಸ್ಥಳದಲ್ಲಿಯೇ ಹೆಸರು ನೋಂದಾಯಿಸಿ, ಲಸಿಕೆ ಪಡೆದುಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ಗ್ರಾಮಾರೋಗ್ಯ; ಆಗಲಿ ಇನ್ನಷ್ಟು ಯೋಗ್ಯ



ಅಸಹಾಯಕತೆಯಲ್ಲಿ ದೈವಕ್ಕೆ ಶರಣೆಂಬರು

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಮೊಳಕಾಲ್ಮುರು ತಾಲ್ಲೂಕಿನ ಮುತ್ತಿಗೇರಹಳ್ಳಿ ಮ್ಯಾಸರಹಟ್ಟಿ ಜನರಿಗೆ ಕೋವಿಡ್ ಆತಂಕವಿಲ್ಲ. ಮ್ಯಾಸನಾಯಕ ಬುಡಕಟ್ಟು ಆರಾಧ್ಯ ದೈವ 'ದೇವರ ಎತ್ತು' ಸಮಾಧಿ ಸುತ್ತ ಕುಳಿತಿದ್ದವರು ಕೆಮ್ಮುತ್ತ, ಸೀನುತ್ತ ಹರಟುತ್ತಿದ್ದರು. ಕೊರೊನಮ್ಮನಿಗೆ ಪೂಜೆ ನೆರವೇರಿಸಿ ಗ್ರಾಮದ ಗಡಿ ದಾಟಿಸಿದವರಿಗೆ ಕೋವಿಡ್ ಬರುವುದಿಲ್ಲವೆಂಬ ಬಲವಾದ ನಂಬಿಕೆ!

ಚಳ್ಳಕೆರೆ ತಾಲ್ಲೂಕಿನ ಮನ್ನೆಕೋಟೆಯ ನಾಲ್ವರಿಗೆ ಕೋವಿಡ್ ಕಾಣಿಸಿಕೊಂಡ ತಕ್ಷಣ ಗ್ರಾಮಸ್ಥರೆಲ್ಲರೂ ಮಾರಮ್ಮ ದೇವಿಯ ಮೊರೆಹೋದರು. ಊರ ಸುತ್ತ ತೆಂಗಿನಕಾಯಿ ಕಟ್ಟಿ ಕೈಮುಗಿದರು. ನಾಯಕನಹಟ್ಟಿ ಜನರು ಅನ್ನ ಚೆಲ್ಲಿ ಹರಕೆ ತೀರಿಸಿದರು. ಸಾಂಕ್ರಾಮಿಕ ರೋಗವನ್ನು ವೈದ್ಯಕೀಯ ಸಾಧನಗಳೊಂದಿಗೆ ಎದುರಿಸಬೇಕಾದ ಜನರು ಮೌಢ್ಯಕ್ಕೆ ಜೋತು ಬಿದ್ದಿರುವ ಕಂಡು ಬಂದಿತು.

ವೈದ್ಯಕೀಯ ಸೌಲಭ್ಯಕ್ಕೆ ಹೊರ ಜಿಲ್ಲೆಯನ್ನೇ ಹೆಚ್ಚಾಗಿ ಆಶ್ರಯಿಸಿದ ಚಿತ್ರದುರ್ಗ ಜಿಲ್ಲೆಯ ಜನರಿಗೆ ಕೋವಿಡ್ ಚಿಕಿತ್ಸೆ ಸಕಾಲಕ್ಕೆ ದೊರೆಯುತ್ತಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಶುಶ್ರೂಷಕರ ಕೊರತೆ ವಿಪರೀತವಾಗಿದೆ. ವೈದ್ಯಕೀಯ ಸೌಕರ್ಯ ಕೈಗೆಟಕುವುದು ಅನುಮಾನ ಎಂಬುದು ದಿಟವಾದ ಬಳಿಕ ಜನರು ದೇವರ ನೆರವಿಗೆ ಮೊರೆ ಹೋಗಿದ್ದಾರೆ.

ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಹಳ್ಳಿಗಳು ವೈದ್ಯಕೀಯ ಸೌಲಭ್ಯಗಳಿಂದ ಬಹುದೂರವೇ ಉಳಿದಿವೆ. ಪರಶುರಾಂಪುರ ಹೋಬಳಿಯ ದೊಡ್ಡಚಲ್ಲೂರು ಗ್ರಾಮಕ್ಕೆ ಕೋವಿಡ್ ಅಂಟಿದ್ದೇ ಆಂಧ್ರಪ್ರದೇಶದಿಂದ ಎಂಬುದು ಗ್ರಾಮಸ್ಥರ ಅಭಿಪ್ರಾಯ. 'ನಮಗೆ ಬಂದಿರುವುದು ನಿಗೂಢ ಜ್ವರವೇ ಹೊರತು ಕೋವಿಡ್ ಅಲ್ಲ' ಎಂಬ ವಾದವನ್ನು ಅವರು ಮುಂದಿಡುತ್ತಾರೆ.

ಕೋವಿಡ್ ಮೊದಲ ಅಲೆಯಲ್ಲಿ ತೊಂದರೆ ಅನುಭವಿಸದ ಕೋಟೆನಾಡು ಎರಡನೇ ಅಲೆಗೆ ತತ್ತರಿಸಿ ಹೋಗಿದೆ. ಜಿಲ್ಲೆಯ 1,360 ಗ್ರಾಮಗಳಲ್ಲಿ 526 ಹಳ್ಳಿಗಳಲ್ಲಿ ಸೋಂಕು ಕಾಣಿಸಿಕೊಂಡಿದೆ. ಇದರಲ್ಲಿ 22 ಹಳ್ಳಿಗಳನ್ನು 'ಹಾಟ್‌ಸ್ಪಾಟ್'ಗಳೆಂದು ಗುರುತಿಸಲಾಗಿದೆ. ಸೋಂಕು ದೃಢಪಡುವ ಪ್ರಮಾಣ ಶೇ 20ಕ್ಕೆ ತಲುಪಿದೆ. ಗುಣಮುಖರಾಗುವವರ ಪ್ರಮಾಣ ಶೇ 76ಕ್ಕೆ ಕುಸಿದಿದೆ. ಇದು ರಾಜ್ಯದ ಸರಾಸರಿಗಿಂತಲೂ ಕಡಿಮೆ ಆಗಿದ್ದು, ಮರಣ ಪ್ರಮಾಣ ಆತಂಕ ಹುಟ್ಟಿಸುವ ರೀತಿಯಲ್ಲಿ ಹೆಚ್ಚಾಗುತ್ತಿದೆ.

ಕೆಲಸ ಅರಸಿ ಮಹಾನಗರಗಳಿಗೆ ವಲಸೆ ಹೋಗುವ ಪ್ರವೃತ್ತಿ ಬರದ ನಾಡಿನಲ್ಲಿದೆ. ಮಳೆ ಕೊರತೆ ಎದುರಿಸುವ ಹಳ್ಳಿಯ ಬಹುತೇಕರು ಬೆಂಗಳೂರು, ಹೈದರಾಬಾದ್ ಹಾಗೂ ಚಿಕ್ಕಮಗಳೂರು, ಕೊಡಗಿನ ಕಾಫಿತೋಟಗಳನ್ನು ಆಶ್ರಯಿಸಿದ್ದಾರೆ. ಲಾಕ್‌ಡೌನ್ ಘೋಷಣೆಯಾಗುತ್ತಿದ್ದಂತೆ ತಮ್ಮ ಊರಿಗೆಗೆ ಮರಳಿದರು. ಹೊರಗಿನ ಜನ ಬಂದ ಎರಡೇ ವಾರಗಳಲ್ಲಿ ಹಳ್ಳಿಗಳಲ್ಲಿ ಸಾವು ಹೆಚ್ಚಾಗಿದೆ.

'ಲಾಕ್‌ಡೌನ್ ಬಳಿಕ ಬೆಂಗಳೂರಿನಿಂದ ನೂರಾರು ಜನರು ಗ್ರಾಮಕ್ಕೆ ಮರಳಿದರು. ಹೆಚ್ಚಿನವರಲ್ಲಿ ಕೋವಿಡ್ ಲಕ್ಷಣ ಕಾಣಿಸಿಕೊಂಡವು. ಉಪ ಆರೋಗ್ಯ ಕೇಂದ್ರವೂ ಬಾಗಿಲು ಮುಚ್ಚಿದ್ದರಿಂದ ಔಷಧದ ಅಂಗಡಿಯಲ್ಲಿ ಸಿಗುವ ಮಾತ್ರೆಗಳನ್ನು ಸೇವಿಸಿದ್ದಾರೆ. ಕೋವಿಡ್ ಪರೀಕ್ಷೆಗೆ ಬಹುತೇಕರು ಮುಂದೆ ಬರುತ್ತಿಲ್ಲ' ಎನ್ನುತ್ತಾರೆ ಹೊಸದುರ್ಗ ತಾಲ್ಲೂಕಿನ ಲಕ್ಕಿಹಳ್ಳಿಯ ಸಿದ್ದೇಶ್.

ಚಿತ್ರದುರ್ಗ ತಾಲ್ಲೂಕಿನ ಮದಕರಿಪುರದಲ್ಲಿ 35 ಜನರಿಗೆ ಸೋಂಕು ಕಾಣಿಸಿಕೊಂಡಿದೆ. ಪಿಳ್ಳೆಕೆರೆನಹಳ್ಳಿಯ 27 ಸೋಂಕಿತರು ಆರೋಗ್ಯ ಇಲಾಖೆಯ ನಿಗಾದಲ್ಲಿದ್ದಾರೆ. ಸೀಬಾರ, ಗೊಡಬನಾಳ್ ಗ್ರಾಮಗಳಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿದೆ. ಮನೆಯಲ್ಲೇ ಚಿಕಿತ್ಸೆ ಪಡೆಯುವುದನ್ನು ಸರ್ಕಾರ ನಿರ್ಬಂಧಿಸಿದೆ. ಇದಕ್ಕಾಗಿ ಜಿಲ್ಲೆಯಲ್ಲಿ 22 ಆರೈಕೆ ಕೇಂದ್ರಗಳನ್ನು ತೆರೆಯಲಾಗಿದೆ. ಇಲ್ಲಿ 1,300 ಜನರನ್ನು ಮಾತ್ರ ದಾಖಲಿಸಲು ಸಾಧ್ಯವಿದೆ. 4,874ಕ್ಕೂ ಹೆಚ್ಚು ಜನರು ಮನೆಯಲ್ಲೇ ಉಳಿದಿದ್ದಾರೆ.

ಸೋಂಕು ನಿಯಂತ್ರಣಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದೆ. ಸೋಂಕಿತರನ್ನು ಸಮುದಾಯದಿಂದ ಪ್ರತ್ಯೇಕಿಸಲು ಗ್ರಾಮದ ಶಾಲೆಯನ್ನೇ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಚಳ್ಳಕೆರೆ ತಾಲ್ಲೂಕಿನ ದೇವರೆಡ್ಡಿಹಳ್ಳಿಯ ಆರೈಕೆ ಕೇಂದ್ರಕ್ಕೆ ವೈದ್ಯರೇ ಬರುತ್ತಿಲ್ಲ. ಕೋವಿಡ್ ನಿಯಂತ್ರಣಕ್ಕೆ ಕೈಗೊಳ್ಳುತ್ತಿರುವ ಕ್ರಮಗಳು ಅನುಷ್ಠಾನದಲ್ಲಿ ವೈಫಲ್ಯ ಕಾಣುತ್ತಿರುವುದದಕ್ಕೆ ಇದೊಂದು ನಿದರ್ಶನ.



ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ಮುತ್ತಿಗೇರಹಳ್ಳಿ ಮ್ಯಾಸರಹಟ್ಟಿಯ ಜನರು ಕೊರೊನಮ್ಮ ದೇವಿಗೆ ಪೂಜೆ ಸಲ್ಲಿಸಿ ಕಟ್ಟೆಯ ಸುತ್ತ ಕುಳಿತಿದ್ದಾರೆ. ಚಿತ್ರ– ಸತೀಶ ಬಡಿಗೇರ

ಗರ್ಭಿಣಿಗಿಲ್ಲ ಪ್ರತ್ಯೇಕ ಚಿಕಿತ್ಸೆ

ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿಯ ಶಾಂತಮ್ಮ ಎಂಟು ತಿಂಗಳ ಗರ್ಭಿಣಿ. ಸ್ಕ್ಯಾನಿಂಗ್‌ಗೆ ಒಳಪಡಿಸುವ ಮುನ್ನ ನಡೆಸಿದ ಪರೀಕ್ಷೆಯಲ್ಲಿ ಸೋಂಕು ಪತ್ತೆಯಾಗಿದೆ. ಎನ್. ಮಹದೇವಪುರದ ಇಂದಿರಾ ಗಾಂಧಿ ವಸತಿಶಾಲೆಯಲ್ಲಿ ತೆರೆದ ಆರೈಕೆ ಕೇಂದ್ರಕ್ಕೆ ಇವರನ್ನು ದಾಖಲಿಸಲಾಗಿದೆ.

ತಾಯಿ ಶಾಂತಮ್ಮ ಕೂಡ ಮಗಳ ಆರೈಕೆಗೆ ಜೊತೆಯಲ್ಲೇ ಇದ್ದಾರೆ. ಸಾಮಾನ್ಯ ಸೋಂಕಿತರಿಗೆ ನೀಡುವ ಚಿಕಿತ್ಸೆಯೇ ಗರ್ಭಿಣಿಗೂ ಸಿಗುತ್ತಿದೆ. ಪ್ರತ್ಯೇಕ ಚಿಕಿತ್ಸೆಯ ಬಗ್ಗೆ ಇಲ್ಲಿರುವ ಶುಶ್ರೂಷಕಿಯರಿಗೂ ಅರಿವಿಲ್ಲ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿತ್ರದುರ್ಗ ಜಿಲ್ಲಾ ಕೋವಿಡ್ ಅಂಕಿ–ಅಂಶ

30,470 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,037 ▲	23,282 ▲	151 ▲

ದಿನದ ಏರಿಕೆ

ಹೊಸ ಪ್ರಕರಣ	483 ▼
ಗುಣಮುಖ	144 ▼
ಸಾವು	6 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಔಷಧದ ಕೊರತೆ

ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸುವ ಔಷಧ ಹಾಗೂ ಆಮ್ಲಜನಕದ ಸಮಸ್ಯೆ ಜಿಲ್ಲೆಯಲ್ಲಿ ಇನ್ನೂ ನೀಗಿಲ್ಲ. ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಕಾಲಕ್ಕೆ ಔಷಧ ತಲುಪದೇ ಇರುವ ಬಗ್ಗೆ ವೈದ್ಯರೇ ಕಳವಳ ವ್ಯಕ್ತಪಡಿಸುತ್ತಾರೆ.

'ಶ್ವಾಸಕೋಶಕ್ಕೆ ಉಂಟಾಗಿರುವ ಸೋಂಕನ್ನು ತಡೆಯಲು ಬಳಸುವ ಸ್ಟೆರಾಯ್ಡ್ ಹಲವು ದಿನಗಳಿಂದ ಆಸ್ಪತ್ರೆ ತಲುಪಿಲ್ಲ. ರಕ್ತ ಹೆಪ್ಪುಗಟ್ಟದಂತೆ ಸೋಂಕಿತರಿಗೆ ನೀಡುವ ಚುಚ್ಚುಮದ್ದು ಸಿಗುತ್ತಿಲ್ಲ. ಇದರಿಂದ ಸೋಂಕಿತರ ಮರಣ ಪ್ರಮಾಣ ಹೆಚ್ಚಾಗುತ್ತಿದೆ' ಎಂಬುದು ಹೊಳಲ್ಕೆರೆ ತಾಲ್ಲೂಕಿನ ಕೋವಿಡ್ ಆರೈಕೆ ಕೇಂದ್ರದ ವೈದ್ಯರ ಬೇಸರ.

ಬೆಂಗಳೂರಿನಿಂದ ಬಂದವರಿಗೆ ಆರೋಗ್ಯ ಪರೀಕ್ಷೆ ಮಾಡಿಸಿ ಪ್ರವೇಶ ನೀಡಲಾಯಿತು. ಆಂಧ್ರಪ್ರದೇಶದ ಜನರು ಗ್ರಾಮಕ್ಕೆ ಬರದಂತೆ ತಡೆಯಲು ಬೇಲಿ ಹಾಕಿದ್ದೇವೆ. ಸೋಂಕಿನಿಂದ ಮುಕ್ತರಾಗಿದ್ದೇವೆ.
ಮಹಾಂತೇಶ್, ದ್ಯಾವರನಹಳ್ಳಿ ಚಳ್ಳಕೆರೆ ತಾಲ್ಲೂಕು

ಈವರೆಗೆ 210 ಜನರಿಗೆ ಚಿಕಿತ್ಸೆ ನೀಡಲಾಗಿದೆ. ನಾಲ್ವರು ವೈದ್ಯರು, ಒಂಬತ್ತು ಶುಶ್ರೂಷಕರು ಸೇವೆ ಒದಗಿಸುತ್ತಿದ್ದೇವೆ. ಚಿಕಿತ್ಸೆಗೆ ಧಾವಿಸುವವರ ಸಂಖ್ಯೆ ಕಡಿಮೆ ಆಗುತ್ತಿದೆ.
ಡಾ.ಚಂದ್ರಮೌಳಿ
ವೈದ್ಯ ಸಮುದಾಯ ಆರೋಗ್ಯ ಕೇಂದ್ರ, ಧರ್ಮಪುರ

34 ಸೋಂಕಿತರು ಚಿಕಿತ್ಸೆಗೆ ದಾಖಲಾಗಿದ್ದಾರೆ. ಊಟ ಹಾಗೂ ವೈದ್ಯಕೀಯ ಸೌಲಭ್ಯದ ಕೊರತೆ ಉಂಟಾಗಿಲ್ಲ. ನಿತ್ಯ ಬೆಳಿಗ್ಗೆ ಯೋಗ ಮಾಡಿಸುತ್ತೇವೆ. 134 ಜನರು ಗುಣಮುಖ ಆಗಿದ್ದಾರೆ.
ರಾಧಾ, ಶುಶ್ರೂಷಕಿ ಸಮುದಾಯ ಆರೋಗ್ಯ ಕೇಂದ್ರ, ಮರಡಿಹಳ್ಳಿ

ಏದುಸಿರು ಬಿಡುತ್ತಿರುವ ಆಸ್ಪತ್ರೆಗಳು

ಒಂದನೇ ಪುಟದಿಂದ...

ಹನೂರು ತಾಲ್ಲೂಕಾಗಿ ರೂಪುಗೊಂಡು 3 ವರ್ಷವಾದರೂ ಇಲ್ಲಿನ ಜನರು ಆಸ್ಪತ್ರೆಗಾಗಿ ಪಕ್ಕದ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಸದ್ಯ, ಹನೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹೆಸರಿಗಷ್ಟೇ ಇದೆ. ತಾಲ್ಲೂಕಿನ ಬಹುತೇಕ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ವೈದ್ಯರ ಕೊರತೆ, ವೈದ್ಯಕೀಯ ಉಪಕರಣಗಳ ಕೊರತೆಗಳಿಂದ ನರಳುತ್ತಿವೆ.

ಮಧುವಿನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ವೇತನ ಹಾಗೂ ನಿರ್ವಹಣೆಗಾಗಿ ತಿಂಗಳಿಗೆ ₹ 5 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಇಷ್ಟು ಹಣ ಬಿಡುಗಡೆಯಾದರೂ, ಇದರ ಒಳಾಂಗಣ ಭೂತ ಬಂಗಲೆಯಂತಿದೆ.

ಹನೂರು ತಾಲ್ಲೂಕಿನ ಬಹುತೇಕ ಎಲ್ಲ ವೈದ್ಯರಿಗೆ ಹೆಚ್ಚುವರಿ ಜವಾಬ್ದಾರಿಗಳನ್ನು ವಹಿಸಲಾಗಿದೆ. ಹೀಗಾಗಿ, ಇವರು ಒಂದು ಕೇಂದ್ರದಲ್ಲಿ ವಾರದಲ್ಲಿ ಎರಡು ದಿನ ಸಿಕ್ಕರೆ ಹೆಚ್ಚು ಎನ್ನುವಂತಾಗಿದೆ. ಮೀಣ್ಯಂ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳೆದ 5 ವರ್ಷದಿಂದ ವೈದ್ಯರಿಲ್ಲ. 'ವೈದ್ಯರು ಇಲ್ಲ' ಎಂಬ ಮಾತು ಕೇಳಿ ಕೇಳಿ ರೋಸಿ ಹೋಗಿರುವ ತಾಲ್ಲೂಕಿನ ಜನ, ಹೋಲಿ ಕ್ರಾಸ್ ಎಂಬ ಆಸ್ಪತ್ರೆಯನ್ನೇ ನೆಚ್ಚಿಕೊಂಡಿದ್ದಾರೆ.

ಹನೂರು ತಾಲ್ಲೂಕಿನಲ್ಲಿರುವ ಈ ಬಗೆಯ ಸಮಸ್ಯೆಗಳಿಂದಾಗಿ, ಸೂಕ್ತ ಚಿಕಿತ್ಸೆಗೆ ಸಿಗದೇ ನಿತ್ಯವೂ ಇಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ.

ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯಲ್ಲಿ ಕೋವಿಡ್ ಹಾಗೂ ಕೋವಿಡ್ ಹೊರತಾದ ರೋಗಿಗಳನ್ನು ತುರ್ತು ಚಿಕಿತ್ಸಾ ಘಟಕದಲ್ಲಿ ಒಂದೇ ಬೆಡ್ ಮೇಲೆ ಮಲಗಿಸುತ್ತಾರೆ. ಕನಿಷ್ಠ ಬೆಡ್ ಮೇಲಿನ ಹೊದಿಕೆಯನ್ನೂ ಬದಲಿಸುತ್ತಿಲ್ಲ. ಒಂದೇ ಆಂಬುಲೆನ್ಸ್‌ನಲ್ಲಿ ಹಲವು ರೋಗಿಗಳನ್ನು ಕಳುಹಿಸುತ್ತಾರೆ ಎಂಬ ಆರೋಪವೂ ಇದೆ.

ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯ ಕೋವಿಡ್ ಆರೈಕೆ ಕೇಂದ್ರದಲ್ಲಿ ಮಧುಮೇಹ, ರಕ್ತದೊತ್ತಡದ ರೋಗಿಗಳಿಗೆ ತಪಾಸಣೆ ನಡೆಸುತ್ತಿಲ್ಲ. ಇದರಿಂದ ರೋಗ ಉಲ್ಬಣಗೊಂಡು ಜೀವಕ್ಕೆ ಅಪಾಯ ಒದಗುವ ಸಾಧ್ಯತೆ ಇದೆ ಎನ್ನುತ್ತಾರೆ ಕುಂದಕೆರೆ ಗ್ರಾಮದ ಸಂಪತ್.

ಜಿಲ್ಲಾಡಳಿತ ನಿರಂತರವಾದ ಸಭೆಗಳನ್ನು ಮಾಡುತ್ತಿದೆ. 'ಸಭೆಯಲ್ಲಿ ಭಾಗವಹಿಸುವುದಕ್ಕೇ ಹೆಚ್ಚಿನ ಸಮಯ ವ್ಯಯವಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸುತ್ತಾರೆ, ಹೆಸರು ಬಹಿರಂಗಪಡಿಸಲು ಬಯಸದ ವೈದ್ಯಾಧಿಕಾರಿಯೊಬ್ಬರು.



ಹನೂರು ಪ್ರಾಥಮಿಕ ಕೇಂದ್ರದಲ್ಲಿ ನಿತ್ಯ ಕೇವಲ 30 ಮಂದಿಗೆ ಮಾತ್ರ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ನೂರಾರು ಮಂದಿ ವಾಪಸ್ ತೆರಳುತ್ತಿದ್ದಾರೆ. ಕೂಡಲೇ ಇಲ್ಲೊಂದು ತಾಲ್ಲೂಕು ಆಸ್ಪತ್ರೆ ನಿರ್ಮಾಣವಾಗಬೇಕು
ಸಿದ್ದರಾಜು, ಹನೂರು

ಹುದ್ದೆ	ಮಂಜೂರಾಗಿರುವುದು	ಖಾಲಿ ಇರುವುದು
ಗ್ರೂಪ್'ಎ' ಅಧಿಕಾರಿಗಳು	132	20
ಗ್ರೂಪ್'ಬಿ' ಅಧಿಕಾರಿಗಳು	5	4
ಗ್ರೂಪ್'ಸಿ' ನೌಕರರು	915	526
ಗ್ರೂಪ್'ಡಿ' ನೌಕರರು	301	249

ಚಾಮರಾಜನಗರ ಕೊರೊನಾ ಸೋಂಕಿತರ ಅಂಕಿ ಅಂಶ (ಮೇ 4ರಿಂದ 30ರವರೆಗೆ)

13,424 ಒಟ್ಟು ಸೋಂಕಿತರು
10,890 ಗ್ರಾಮೀಣ ಪ್ರದೇಶಕ್ಕೆ ಸೇರಿದವರ ಒಟ್ಟು ಸಂಖ್ಯೆ
2,534 ನಗರ ಪ್ರದೇಶಕ್ಕೆ ಸೇರಿದವರು

ಚಾಮರಾಜನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

27,064 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,835	23,788	464

ದಿನದ ಏರಿಕೆ

ಹೊಸ ಪ್ರಕರಣ	208 ▲
ಗುಣಮುಖ	163 ▼
ಸಾವು	17 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರಗಳ ವಿವರಗಳು

60 ಪ್ರಾಥಮಿಕ ಆರೋಗ್ಯ ಕೇಂದ್ರಗಳು
3 ತಾಲ್ಲೂಕು ಆಸ್ಪತ್ರೆಗಳು
3 ಸಮುದಾಯ ಆರೋಗ್ಯ ಕೇಂದ್ರಗಳು
1 ಜಿಲ್ಲಾಸ್ಪತ್ರೆ
25 ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಕೇಂದ್ರಗಳು



ಹೊಟ್ಟೆ ನೋವು ಬಂದರೂ ನಾವು ತಮಿಳುನಾಡಿಗೆ ಹೋಗಬೇಕಿದೆ. ವಾಹನ ಸೌಲಭ್ಯ ಇಲ್ಲವೇ ಇಲ್ಲ. ಕಳೆದ 5 ವರ್ಷಗಳಿಂದ ಊರಿನಲ್ಲಿ ಒಬ್ಬ ನರ್ಸ್ ಸಹ ಇಲ್ಲ
ಯಶೋಧಾ, ಪುದೂರು. ಹನೂರು ತಾಲ್ಲೂಕು



ನಾವು ಕರ್ನಾಟಕದಲ್ಲಿ ಇಲ್ಲವೇನೋ ಅನ್ನಿಸುತ್ತಿದೆ. ಚಿಕಿತ್ಸೆಗಾಗಿ ಗರ್ಭಿಣಿಯರು ಇಲ್ಲಿಂದ ತಮಿಳುನಾಡಿಗೆ ಹೋಗಲು ಕಷ್ಟವಾಗುತ್ತಿದೆ
ಮಾದೇಶ್, ಪುದೂರು, ಹನೂರು ತಾಲ್ಲೂಕು



ಆರೈಕೆ ಕೇಂದ್ರಗಳಲ್ಲಿ ಉತ್ತಮ ವ್ಯವಸ್ಥೆ ಇದೆ. ಇಲ್ಲಿಂದ ಮನೆಗೆ ಹೋಗುವ ರೋಗಿಗಳು ಥ್ಯಾಂಕ್ಸ್ ಹೇಳಿ ಹೋಗುತ್ತಿದ್ದಾರೆ. ಇದು ನಮಗೆ ಖುಷಿ ತರಿಸಿದೆ
ಗೋಪಾಲ
ಕೊಳ್ಳೇಗಾಲ ತಾಲ್ಲೂಕು ವೈದ್ಯಾಧಿಕಾರಿ

ಚಾಮರಾಜನಗರ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

1,353 ಒಟ್ಟು ಹುದ್ದೆಗಳ ಸಂಖ್ಯೆ
799 ಖಾಲಿ ಇರುವ ಹುದ್ದೆಗಳ ಸಂಖ್ಯೆ

1,788 ಹಳ್ಳಿಗಳಿಗೆ 57 ಪಿಎಚ್‌ಸಿ!

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ 1,788 ಗ್ರಾಮಗಳಿವೆ. ಇಷ್ಟೊಂದು ಗ್ರಾಮಗಳಿಗೆ ಇರುವುದು 57 ಪ್ರಾಥಮಿಕ ಹಾಗೂ 2 ಸಮುದಾಯ ಆರೋಗ್ಯ ಕೇಂದ್ರಗಳು ಮಾತ್ರ! ವಿಸ್ತಾರವಾದ ಹಳ್ಳಿಗಳು, ದೊಡ್ಡ ಪ್ರಮಾಣದ ಜನಸಂಖ್ಯೆಯ ಅನಾರೋಗ್ಯ ನಿಭಾಯಿಸುವುದೇ ಆರೋಗ್ಯ ಕೇಂದ್ರಗಳಿಗೆ ಸವಾಲು.

ಶಿಡ್ಲಘಟ್ಟ ತಾಲ್ಲೂಕಿನ ಮೇಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ 28 ಹಳ್ಳಿಗಳು ಒಳಪಡುತ್ತವೆ. ಚಿಂತಾಮಣಿ ತಾಲ್ಲೂಕಿನ ಮುರುಗಮಲೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಗೆ 42 ಗ್ರಾಮಗಳು, ಬಾಗೇಪಲ್ಲಿ ತಾಲ್ಲೂಕು ಮಿಟ್ಟೆಮರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ 30ಕ್ಕೂ ಹೆಚ್ಚು ಹಳ್ಳಿಗಳು ಒಳಪಡುತ್ತವೆ.

ಆಂಧ್ರಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡಿರುವ ಬಾಗೇಪಲ್ಲಿ ತಾಲ್ಲೂಕಿನ ಮಾರ್ಗಾನುಕುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 57 ಹಳ್ಳಿಗಳು ಒಳಪಡುತ್ತವೆ! ಇಷ್ಟು ಹಳ್ಳಿಗಳ ಜನರ ಆರೋಗ್ಯ ಕಾಪಾಡಬೇಕಾದ ಪ್ರಾಥಮಿಕ ಆರೋಗ್ಯ ಕೇಂದ್ರವು ಸಿಬ್ಬಂದಿ ಕೊರತೆಯಿಂದ ನಲುಗಿದೆ. ಜೂಲಪಾಳ್ಯ, ಪಾತಪಾಳ್ಯ ಆರೋಗ್ಯ ಕೇಂದ್ರಗಳಲ್ಲೂ ಇದೇ ಸ್ಥಿತಿ.

ಬಾಗೇಪಲ್ಲಿ ತಾಲ್ಲೂಕಿನ ಯಲ್ಲಂಪಲ್ಲಿಗೆ 'ಪ್ರಜಾವಾಣಿ' ಪ್ರತಿನಿಧಿ ಭೇಟಿ ನೀಡಿದಾಗ ಕೋವಿಡ್ ಪರೀಕ್ಷೆ ವಿಚಾರವಾಗಿ ಯಲ್ಲಂಪಲ್ಲಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿಯೇ ಮಿಟ್ಟೆಮರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಹರ್ಷವರ್ಧನ್ ಮತ್ತು ಗ್ರಾಮಪಂಚಾಯಿತಿ ಉಪಾಧ್ಯಕ್ಷ ನಾರಾಯಣಸ್ವಾಮಿ ನಡುವೆ ವಾಗ್ವಾದ ನಡೆಯುತ್ತಿತ್ತು.

'ಒಬ್ಬರಿಗೆ ಸೋಂಕು ತಗುಲಿದೆ. ತಕ್ಷಣವೇ ಅವರ ಮನೆಯವರೆಲ್ಲರನ್ನೂ ಪರೀಕ್ಷೆಗೆ ಒಳಪಡಿಸಬೇಕು. ಇದರಿಂದ ಸೋಂಕಿನ ಪ್ರಸರಣ ತಡೆಯಬಹುದು. ಆದರೆ, ಎಲ್ಲರ ಪರೀಕ್ಷೆಗಳು ನಡೆಯುತ್ತಿಲ್ಲ. ಹೀಗಾದರೆ ಸೋಂಕು ಹೇಗೆ ನಿಯಂತ್ರಣಕ್ಕೆ ಬರುತ್ತದೆ' ಎಂದು ನಾರಾಯಣ ಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಆಗ ವೈದ್ಯರು, 'ಪ್ರತಿ ಹಳ್ಳಿಗಳಿಗೆ ಮೂರು ದಿನಕ್ಕೆ ಒಮ್ಮೆ ಭೇಟಿ ನೀಡುತ್ತಿದ್ದೇನೆ. ಒಂದು ಹಳ್ಳಿಗೆ ಬಂದು ಹೋದರೆ ಮತ್ತೆ ಆ ಹಳ್ಳಿಗೆ ಬರಲು ಎಷ್ಟು ದಿನಬೇಕು, ಯೋಚಿಸಿ. ಆಶಾ ಕಾರ್ಯಕರ್ತೆಯರು ದಿನವೂ ಭೇಟಿ ನೀಡುತ್ತಿದ್ದಾರೆ. ಇರುವವರು ಒಬ್ಬರೇ ಲ್ಯಾಬ್ ಟೆಕ್ನಿಷಿಯನ್' ಎಂದು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

'ಆಗೊಮ್ಮೆ ಈಗೊಮ್ಮೆ ಆಶಾ ಕಾರ್ಯಕರ್ತೆಯರು ಊರಿಗೆ ಬರುವರು. ಬಂದಾಗಲೆಲ್ಲ ಫೋಟೊ ತೆಗೆದುಕೊಳ್ಳುವರು. ಅದು ಬಿಟ್ಟರೆ ಬೇರೇನೂ ಆಗಿಲ್ಲ. ನಮಗೂ ವಯಸ್ಸಾಗಿದೆ. ನಮಗೇನೂ ಕೊಟ್ಟಿಲ್ಲ' ಎನ್ನುವರು ಚಿಂತಾಮಣಿ ತಾಲ್ಲೂಕು ಕೋನಪ್ಪಲ್ಲಿಯ ಗೋಪಾಲಕೃಷ್ಣ.

ಗ್ರಾಮೀಣ ಪ್ರದೇಶಗಳ ಸೋಂಕಿತರ ಬಹುತೇಕ ಮನೆಗಳಲ್ಲಿ ಪ್ರತ್ಯೇಕ ವಾಸಕ್ಕೆ ಕೊಠಡಿ ಮತ್ತು ಶೌಚಾಲಯ ಇಲ್ಲ. ಇದೂ ಸಹ ಸೋಂಕು ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಮನೆಗಳಲ್ಲಿ ಸೌಲಭ್ಯವಿಲ್ಲದಿದ್ದರೆ ಕೋವಿಡ್ ಕೇರ್ ಸೆಂಟರ್‌ಗಳಿಗೆ ಸೋಂಕಿತರನ್ನು ದಾಖಲಿಸುತ್ತಿದೆ. ಅಲ್ಲಿಗೆ ಹೋಗಲು ಒಪ್ಪದಿದ್ದರೆ ಪೊಲೀಸರನ್ನು ಬಳಸಿ ದಾಖಲಿಸಲಾಗುತ್ತಿದೆ.

ಕೋವಿಡ್ ಕೇರ್ ಸೆಂಟರ್‌ಗೆ ದಾಖಲಾಗಲು ಒಪ್ಪದೆ ಆಶಾ ಕಾರ್ಯಕರ್ತೆಯರ ಜತೆ ಜಟಾಪಟಿ ನಡೆಸಿದ, ಸೋಂಕು ಇದ್ದರೂ ಮುಕ್ತವಾಗಿ ಓಡಾಟ ನಡೆಸಿದ ಪ್ರಸಂಗಗಳು ಜಿಲ್ಲೆಯ ಹಲವು ಕಡೆಗಳಲ್ಲಿ ಜರುಗಿವೆ.

ಶಿಡ್ಲಘಟ್ಟದ ಹನುಮಂತಪುರ ಗೇಟ್ ಬಳಿಯ ಕೋವಿಡ್ ಕೇರ್ ಸೆಂಟರ್‌ನಲ್ಲಿನ ಅವ್ಯವಸ್ಥೆ ಬಗ್ಗೆ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷೆ ಲಕ್ಷ್ಮಿದೇವಮ್ಮ ವಿಡಿಯೊ ಮಾಡಿದ್ದರು. ಅದು ವೈರಲ್ ಆಗಿತ್ತು. ನಂತರ ಈ ಕೇಂದ್ರವನ್ನು 11ನೇ ಮೈಲಿಗೆ ಸ್ಥಳಾಂತರಿಸಲಾಯಿತು.

ಪ್ರತ್ಯೇಕ ವ್ಯವಸ್ಥೆಗಳು ಇಲ್ಲದಿದ್ದರೂ ಬಹಳಷ್ಟು ಸೋಂಕಿತರು ಮನೆಗಳಲ್ಲಿಯೇ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಜನರ ಮೊಂಡಾಟದಿಂದಲೂ ಸೋಂಕು ಹೆಚ್ಚಿದೆ ಎಂದು ಹೆಸರು ಹೇಳಲು ಇಚ್ಛಿಸದ ಆರೋಗ್ಯ ಇಲಾಖೆ ಸಿಬ್ಬಂದಿಯೊಬ್ಬರು ತಿಳಿಸಿದರು.

ಟಾಸ್ಕ್‌ಫೋರ್ಸ್ ಬಲ: ಕೋವಿಡ್ ತಡೆಗೆ ಗ್ರಾಮ ಮಟ್ಟದಲ್ಲಿ ರಚನೆಯಾಗಿರುವ ಟಾಸ್ಕ್‌ಫೋರ್ಸ್‌ಗಳು ಜಿಲ್ಲೆಯಲ್ಲಿ ಚುರುಕಾಗಿವೆ. ಹೋಂ ಐಸೋಲೇಷನ್, ಕೋವಿಡ್ ಕೇರ್ ಸೆಂಟರ್ ನಿರ್ವಹಣೆ, ಔಷಧಿ ವಿತರಣೆ, ಲಸಿಕೆ, ಸ್ವಚ್ಛತೆ ವಿಚಾರವಾಗಿ ಟಾಸ್ಕ್‌ಫೋರ್ಸ್‌ಗಳು ಕೆಲಸ ಮಾಡುತ್ತಿವೆ. ಜಿಲ್ಲಾಧಿಕಾರಿ ಆರ್. ಲತಾ ಹಳ್ಳಿಗಳಿಗೆ ಭೇಟಿ ನೀಡಿದಾಗ ಈ ಸಮಿತಿಗಳ ಸಭೆಯನ್ನು ಕಡ್ಡಾಯವಾಗಿ ನಡೆಸುತ್ತಿದ್ದಾರೆ. ಹಳ್ಳಿಗಳಿಗೆ, ಕೋವಿಡ್ ಕೇರ್ ಸೆಂಟರ್‌ಗಳಿಗೆ ಭೇಟಿ ನೀಡಿ ಸೋಂಕಿತರ ಆರೋಗ್ಯ ವಿಚಾರಿಸುತ್ತಿದ್ದಾರೆ.



ಶಿಡ್ಲಘಟ್ಟ ತಾಲ್ಲೂಕು ಮೇಲೂರಿನಲ್ಲಿ ಲಸಿಕೆ ಪಡೆಯಲು ಕಾದಿರುವ ಜನರು

ಜಿಲ್ಲೆಯವರೇ ಆರೋಗ್ಯ ಸಚಿವರಾಗಿದ್ದಾರೆ. ಪಂಚಾಯಿತಿಗೆ ಒಂದು ಆರೋಗ್ಯ ಕೇಂದ್ರ ಸ್ಥಾಪಿಸಬೇಕು. ಹೀಗೆ ಆದರೆ ಮಾತ್ರ ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯ ಸೌಲಭ್ಯ ದೊರೆಯುತ್ತದೆ
ಡಿ.ವಿ. ಶ್ರೀನಿವಾಸ್, ದೇವಿಕುಂಟೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನೀಗದ ಭಯ; ಬೆಂಗಳೂರಿಗರ ಲಗ್ಗೆ

ಕೋವಿಡ್ ಲಸಿಕೆ ವಿಚಾರದಲ್ಲಿ ಜಿಲ್ಲೆಯ ಗ್ರಾಮೀಣ ಜನರಲ್ಲಿ ಇಂದಿಗೂ ಭಯ ನಿವಾರಣೆಯಾಗಿಲ್ಲ. 'ನಮ್ಮ ಊರಲ್ಲಿ ಒಬ್ಬರಿಗೆ ಲಸಿಕೆ ಪಡೆದ ನಂತರ ಸೋಂಕು ಬಂದಿತು. ಲಸಿಕೆಯಿಂದಲೇ ಜ್ವರ ಬಂದಿತು ಎಂದುಕೊಂಡು ಬಹಳಷ್ಟು ಜನರು ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಶಿಡ್ಲಘಟ್ಟ ತಾಲ್ಲೂಕಿನ ಚಿನ್ನದಾಸೇನಹಳ್ಳಿಯ ದೇವರಾಜು ತಿಳಿಸಿದರು.

18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕಲು ಮುಂದಾಗುತ್ತಿದ್ದಂತೆ ಶಿಡ್ಲಘಟ್ಟ, ಗುಡಿಬಂಡೆ, ಬಾಗೇಪಲ್ಲಿಗೆ ಬೆಂಗಳೂರಿನಿಂದ ಬಂದು ಲಸಿಕೆ ಸಹ ಹಾಕಿಸಿಕೊಂಡಿದ್ದಾರೆ. ಇದಕ್ಕೆ ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ವಿಚಾರ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಆಪ್ತ ಸಹಾಯಕರವರೆಗೂ ತಲುಪಿತ್ತು.

ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುತ್ತಿದ್ದೇವೆ. 18 ವರ್ಷ ಮೇಲ್ಪಟ್ಟವರು ಬಂದು ನಮಗೆ ಏಕೆ ಲಸಿಕೆ ಕೊಡುತ್ತಿಲ್ಲ ಎಂದು ಕೇಳುತ್ತಿದ್ದಾರೆ
ದೇವರಾಜ್, ಸ್ಟಾಫ್‌ನರ್ಸ್, ಮೇಲೂರು

ಆರಂಭದಲ್ಲಿ ಲಸಿಕೆ ಬಗ್ಗೆ ಜನರಲ್ಲಿ ಭಯವಿತ್ತು. ಈಗ ಜನರೇ ಸ್ವಯಂ ಪ್ರೇರಣೆಯಿಂದ ಲಸಿಕೆ ಹಾಕಿಸಿಕೊಳ್ಳಲು ಬರುತ್ತಿದ್ದಾರೆ
ವೆಂಕಟರತ್ನಮ್ಮ
ಆಶಾ ಕಾರ್ಯಕರ್ತೆ, ಯಲ್ಲಂಪಲ್ಲಿ

ಚಿಕ್ಕಬಳ್ಳಾಪುರ ಜಿಲ್ಲಾ ಕೋವಿಡ್ ಅಂಕಿ–ಅಂಶ

38,639 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
3,581 ▼	34,738 ▲	319 ▲

ದಿನದ ಏರಿಕೆ

ಹೊಸ ಪ್ರಕರಣ	345 ▲
ಗುಣಮುಖ	478 ▲
ಸಾವು	6

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಾಕ್‌ಡೌನ್: ರೈಲ್ವೆ ಹಳಿ ಮೇಲೆ 8,700 ಜನರ ಸಾವು



ನವದೆಹಲಿ(ಪಿಟಿಐ): ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣಕ್ಕಾಗಿ 2020ರಲ್ಲಿ ರಾಷ್ಟ್ರವ್ಯಾಪಿ ಲಾಕ್‌ಡೌನ್ ಜಾರಿಗೊಳಿಸಿದ್ದರಿಂದ ಪ್ರಯಾಣಿಕರ ರೈಲುಸೇವೆಯನ್ನು ಸ್ಥಗಿತಗೊಳಿಸಿದ್ದರೂ ಸುಮಾರು 8,700ಕ್ಕೂ ಹೆಚ್ಚು ಮಂದಿ ರೈಲ್ವೆ ಹಳಿಗಳ ಮೇಲೆ ಸಾವನ್ನಪ್ಪಿದ್ದಾರೆ ಎಂದು ರೈಲ್ವೆ ಇಲಾಖೆಯು ತಿಳಿಸಿದೆ.

ಈ ಕುರಿತು ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಎನ್ನುವವರು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ರೈಲ್ವೆ ಮಂಡಳಿಗೆ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದರು.

'ರಾಜ್ಯ ಪೊಲೀಸರಿಂದ ಪಡೆದ ಮಾಹಿತಿಯ ಆಧಾರದ ಮೇಲೆ 2020ರ ಜನವರಿಯಿಂದ ಡಿಸೆಂಬರ್ ಅವಧಿಯಲ್ಲಿ ರೈಲ್ವೆ ಹಳಿಗಳಲ್ಲಿ 8,733 ಜನರು ಸಾವನ್ನಪ್ಪಿದ್ದು, 805 ಜನರು ಗಾಯಗೊಂಡಿದ್ದಾರೆ. ಸತ್ತವರಲ್ಲಿ ಬಹುತೇಕರು ವಲಸೆ ಕಾರ್ಮಿಕರಾಗಿದ್ದರು. ಲಾಕ್‌ಡೌನ್ ಕಾರಣಕ್ಕಾಗಿ ತಮ್ಮ ಊರುಗಳಿಗೆ ಹಿಂತಿರುಗುತ್ತಿದ್ದ ಈ ಕಾರ್ಮಿಕರು ರಸ್ತೆ ಮಾರ್ಗದ ಮೂಲಕ ಸಾಗುವುದಕ್ಕಿಂತ ಅಡ್ಡಾದಾರಿಯಲ್ಲಿ ರೈಲು ಮಾರ್ಗಗಳ ಮೂಲಕ ತಮ್ಮೂರಿಗೆ ಬೇಗ ತಲುಪಬಹುದೆಂದು ಭಾವಿಸಿದ್ದರು. ಹಾಗಾಗಿ, ಬಹುತೇಕ ವಲಸೆ ಕಾರ್ಮಿಕರು ರೈಲು ಮಾರ್ಗದಲ್ಲಿ ತಮ್ಮೂರಿಗೆ ಹೊರಟಿದ್ದರು' ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ರಸ್ತೆ ಮಾರ್ಗದಲ್ಲಿ ತೆರಳಿದರೆ ಲಾಕ್‌ಡೌನ್ ಮಾರ್ಗಸೂಚಿ ಉಲ್ಲಂಘಿಸಿದ್ದಕ್ಕಾಗಿ ಪೊಲೀಸರಿಗೆ ಸಿಕ್ಕಿಬೀಳುವ ಆತಂಕವೂ ಹಾಗೂ ರೈಲ್ವೆ ಮಾರ್ಗದಲ್ಲಿ ದಾರಿ ತಪ್ಪಲು ಸಾಧ್ಯವಿಲ್ಲ ಎನ್ನುವ ನಂಬಿಕೆಯೂ ಅವರಿಗಿತ್ತು. ಲಾಕ್‌ಡೌನ್ ಇರುವುದರಿಂದ ಯಾವ ರೈಲುಗಳೂ ಸಂಚರಿಸುವುದಿಲ್ಲ ಎಂದು ಈ ಕಾರ್ಮಿಕರು ಭಾವಿಸಿದ್ದರು. ಆದರೆ, ಪ್ರಯಾಣಿಕರ ರೈಲು ಸೇವೆ ಹೊರತುಪಡಿಸಿ ಇತರ ಸರಕು ರೈಲುಗಳು ಕಾರ್ಯ ನಿರ್ವಹಿಸುತ್ತಿದ್ದವು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಈ ಸಾವುಗಳು ಅಪಘಾತಗಳಿಂದ ಸಂಭವಿಸಿಲ್ಲ. ಆದರೆ, ನಿರ್ಲಕ್ಷ್ಯ ಇಲ್ಲವೇ ಅತಿಕ್ರಮಣದಿಂದಾಗಿ ಈ ಸಾವುಗಳು ಸಂಭವಿಸಿವೆ' ಎಂದು ರೈಲ್ವೆ ವಕ್ತಾರ ಡಿ.ಜೆ. ನರೇನ್ ಹೇಳಿದ್ದಾರೆ.

'2020ಕ್ಕೂ ಮುಂಚಿನ ನಾಲ್ಕು ವರ್ಷಗಳಿಗೆ ಹೋಲಿಸಿದರೆ, ಕಳೆದ ವರ್ಷದ ಸಾವು–ನೋವುಗಳು ಕಡಿಮೆ ಇವೆ. ದೇಶದಾದ್ಯಂತ ಸುಮಾರು 70 ಸಾವಿರ ಕಿ.ಮೀ. ವ್ಯಾಪ್ತಿಯಲ್ಲಿ ರೈಲು ಹಳಿಗಳಿವೆ. ಪ್ರತಿದಿನವೂ 17 ಸಾವಿರಕ್ಕೂ ಹೆಚ್ಚಿನ ರೈಲುಗಳು ಸಂಚರಿಸುತ್ತವೆ. ರೈಲ್ವೆ ಹಳಿಗಳ ಮೇಲೆ ನಡೆಯುವುದನ್ನು ತಪ್ಪಿಸಲು ರೈಲ್ವೆ ಇಲಾಖೆಯು ಎಚ್ಚರಿಕೆ ಕ್ರಮ ವಹಿಸಿದೆ. ನಾಗರಿಕರ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸಿದ್ದರೂ ರೈಲು ಹಳಿಗಳ ಮೇಲೆ ಹಲವರು ಸಾವನ್ನಪ್ಪಿರುವುದು ದುರದೃಷ್ಟಕರ ಸಂಗತಿ' ಎಂದೂ ಅವರು ತಿಳಿಸಿದ್ದಾರೆ.

'ಸೆಂಟ್ರಲ್ ವಿಸ್ತಾ': ಹೈಕೋರ್ಟ್ ತೀರ್ಪು ಪ್ರಶ್ನಿಸಿ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸೆಂಟ್ರಲ್ ವಿಸ್ತಾ' ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಗೆ ತಡೆ ನೀಡಲು ನಿರಾಕರಿಸಿ ದೆಹಲಿ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ದೇಶದಲ್ಲಿ ಕೋವಿಡ್–19 ಪಿಡುಗು ವ್ಯಾಪಿಸಿದೆ. ಇಂಥ ಸಂದರ್ಭದಲ್ಲಿ ಈ ಯೋಜನೆಯಡಿ ಕಾಮಗಾರಿ ಕೈಗೊಳ್ಳದಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮೇ 31ರಂದು ನಡೆಸಿದ್ದ ಹೈಕೋರ್ಟ್, 'ಸೆಂಟ್ರಲ್ ವಿಸ್ತಾ' ಒಂದು ಪ್ರಮುಖ ಹಾಗೂ ಅಗತ್ಯ ರಾಷ್ಟ್ರೀಯ ಯೋಜನೆ ಎಂದು ಅಭಿಪ್ರಾಯಪಟ್ಟಿತ್ತು.

ಈ ಯೋಜನೆಯಡಿ ನಿರ್ಮಾಣ ಕಾರ್ಯವನ್ನು ಮುಂದುವರಿಸಲು ಅನುಮತಿ ನೀಡಿದ್ದ ಹೈಕೋರ್ಟ್, ಕಾಮಗಾರಿ ರದ್ದತಿ ಕೋರಿದ್ದ ಅರ್ಜಿದಾರರಾದ ಅನ್ಯ ಮಲ್ಹೋತ್ರ ಹಾಗೂ ಮತ್ತೊಬ್ಬ ವ್ಯಕ್ತಿಗೆ ಒಟ್ಟು ₹ 1 ಲಕ್ಷ ದಂಡ ವಿಧಿಸಿತ್ತು.

ಈಗ ಪ್ರದೀಪಕುಮಾರ್ ಯಾದವ್ ಎಂಬುವವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. 'ಸೆಂಟ್ರಲ್ ವಿಸ್ತಾ ಯೋಜನೆಯಡಿ ಕಾಮಗಾರಿಯನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಇಲ್ಲ. ಇದೊಂದು ಪ್ರಚೋದಿತ ಅರ್ಜಿ ಎಂಬುದಾಗಿ ಹೈಕೋರ್ಟ್ ಹೇಳಿರುವುದು ಸಮರ್ಥನೀಯವಲ್ಲ' ಎಂದು ಯಾದವ್ ಅರ್ಜಿಯಲ್ಲಿ ಹೇಳಿದ್ದಾರೆ.

'ಬೃಹತ್ ನಿರ್ಮಾಣ ಕಾರ್ಯದಲ್ಲಿ ಅಪಾರ ಸಂಖ್ಯೆಯಲ್ಲಿ ಮುಗ್ಧ ಕಾರ್ಮಿಕರನ್ನು ತೊಡಗಿಸಲಾಗಿದೆ. ಕೋವಿಡ್–19 ಪಿಡುಗಿನ ಈ ಸಂದರ್ಭದಲ್ಲಿ ಈ ರೀತಿ ಮಾಡುವುದು ಅಪಾಯಕಾರಿ ಎಂಬ ಅಂಶವನ್ನು ಅರಿಯುವಲ್ಲಿ ಹೈಕೋರ್ಟ್ ವಿಫಲವಾಗಿದೆ' ಎಂದೂ ಅರ್ಜಿದಾರ ವಾದಿಸಿದ್ದಾರೆ.



ಸಂಕ್ಷಿಪ್ತ ಸುದ್ದಿ

ಎನ್‌ಎಚ್‌ಆರ್‌ಸಿ ಅಧ್ಯಕ್ಷರಾಗಿ ನ್ಯಾ. ಅರುಣ್ ಮಿಶ್ರಾ ಅಧಿಕಾರ ಸ್ವೀಕಾರ

ನವದೆಹಲಿ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ನೂತನ ಅಧ್ಯಕ್ಷರಾಗಿ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅರುಣ್ ಮಿಶ್ರಾ ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎನ್‌ಎಚ್‌ಆರ್‌ಸಿ ಅಧ್ಯಕ್ಷರಾಗಿದ್ದ ಎಚ್.ಎಲ್.ದತ್ತು ಅವರ ಅಧಿಕಾರವಧಿ 2020ರ ಡಿಸೆಂಬರ್‌ಗೆ ಕೊನೆಗೊಂಡಿತ್ತು. ಅಲ್ಲಿಂದ ಈ ಹುದ್ದೆ ಖಾಲಿ ಇತ್ತು.

ಮಿಶ್ರಾ ಅವರ ಜತೆಗೆ ಸಮಿತಿಯ ಒಬ್ಬ ಸದಸ್ಯರೂ ಬುಧವಾರ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಿಶ್ರಾ ಅವರು 2014ರ ಜುಲೈ 7ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾಗಿ, 2020ರ ಸೆಪ್ಟೆಂಬರ್‌ವರೆಗೂ ಕಾರ್ಯ ನಿರ್ವಹಿಸಿದ್ದರು.

ಗುಪ್ತಚರ ಇಲಾಖೆ: ನಿವೃತ್ತಿ ನಂತರ 'ಸೂಕ್ಷ್ಮ ವಿಚಾರ' ಹಂಚಿಕೆ ಮೇಲೆ ನಿರ್ಬಂಧ

ನವದೆಹಲಿ (ಪಿಟಿಐ): ಗುಪ್ತಚರ ಮತ್ತು ಭದ್ರತೆಗೆ ಸಂಬಂಧಿಸಿದ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು 'ಸೂಕ್ಷ್ಮ ಮಾಹಿತಿ'ಗಳನ್ನು ಪ್ರಕಟಿಸದಂತೆ ತಡೆಯುವ ಮೂಲಕ ಕೇಂದ್ರ ಸರ್ಕಾರ ಈ ಹಿಂದಿನ ತನ್ನ ನಿಯಮಗಳಿಗೆ ತಿದ್ದುಪಡಿ ತಂದಿದೆ.

ಹೊಸ ನಿಯಮಾವಳಿಗಳಲ್ಲಿ, ಆ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿ ಸಂಸ್ಥೆಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ ಎಂಬ ಷರತ್ತುಗಳನ್ನು ಸೇರಿಸಲಾಗಿದೆ. ಒಂದು ವೇಳೆ ಇಂಥ ಮಾಹಿತಿಗಳನ್ನು ಪ್ರಕಟಿಸಬೇಕೆನಿಸಿದರೆ, ಸಂಸ್ಥೆಯ ಮುಖ್ಯಸ್ಥರಿಂದ ಪೂರ್ವಾನುಮತಿ ಪಡೆಯಬೇಕು ಎಂದು ಷರತ್ತುಗಳಲ್ಲಿ ಸೇರಿಸಲಾಗಿದೆ. 2007ರಿಂದ ಜಾರಿಯಲ್ಲಿದ್ದ ಈ ಹಿಂದಿನ ನಿಯಮದಂತೆ ಸಂಸ್ಥೆಯ ಮುಖ್ಯಸ್ಥರ ಬದಲಿಗೆ ವಿಭಾಗದ ಮುಖ್ಯಸ್ಥರಿಂದ ಅನುಮತಿ ಪಡೆದರೆ ಸಾಕಾಗಿತ್ತು.

ಮೇ 31ರಂದು ಪ್ರಕಟವಾದ 'ಕೇಂದ್ರ ನಾಗರಿಕ ಸೇವೆಗಳ (ಪಿಂಚಣಿ) ತಿದ್ದುಪಡಿ ನಿಯಮಗಳು, 2021' ಅನ್ನು ಕೇಂದ್ರ ಸರ್ಕಾರ ಮಂಗಳವಾರ ಪ್ರಕಟಿಸಿದೆ.

'ಮಾದರಿ ಬಾಡಿಗೆ ಕಾಯ್ದೆ'ಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯು 'ಮಾದರಿ ಬಾಡಿಗೆ ಕಾಯ್ದೆ'ಗೆ ಅನುಮೋದನೆ ನೀಡಿದೆ.

ಮನೆಗಳನ್ನು ಬಾಡಿಗೆ ಆಧಾರದಲ್ಲಿ ನೀಡುವುದಕ್ಕೆ ಸಂಬಂಧಿಸಿದ ಕಾನೂನಿನಲ್ಲಿ ಸಮಗ್ರ ಬದಲಾವಣೆ ತರುವುದು 'ಮಾದರಿ ಬಾಡಿಗೆ ಕಾಯ್ದೆ'ಯಿಂದ ಸಾಧ್ಯವಾಗಲಿದೆ ಎಂದು ಕೇಂದ್ರ ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

'ಸದ್ಯ ಚಾಲ್ತಿಯಲ್ಲಿರುವ ಬಾಡಿಗೆ ಕಾಯ್ದೆಗೆ ಹೊಸದಾಗಿ ನಿಯಮಗಳನ್ನು ರಚಿಸಲು ಅಥವಾ ಈಗಿರುವ ನಿಯಮಗಳಿಗೆ ತಿದ್ದುಪಡಿ ತರಲು ಅನುವು ಮಾಡಿ ಕೊಡುವ ಈ ಮಾದರಿ ಬಾಡಿಗೆ ಕಾಯ್ದೆಯನ್ನು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಒದಗಿಸಲು ಸಹ ಸಂಪುಟ ಒಪ್ಪಿಗೆ ನೀಡಿತು' ಎಂದು ಪ್ರಕಟಣೆ ತಿಳಿಸಿದೆ.

ಮನೆಗಳನ್ನು ಬಾಡಿಗೆ ನೀಡುವ ವ್ಯವಸ್ಥೆಗೆ ಉದ್ಯಮ ಸ್ವರೂಪ ನೀಡುವುದು. ಈ ಉದ್ಯಮದಲ್ಲಿ ಪಾಲ್ಗೊಳ್ಳುವಂತೆ ಖಾಸಗಿ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶ ಇದೆ. ಇದರಿಂದ ವಸತಿ ಕ್ಷೇತ್ರ ಎದುರಿಸುತ್ತಿರುವ ಕೊರತೆಯನ್ನು ನೀಗಿಸಲು ಸಾಧ್ಯವಾಗಲಿದೆ ಎಂಬ ನಿರೀಕ್ಷೆ ಇದೆ ಎಂದೂ ಪ್ರಕಟಣೆ ತಿಳಿಸಿದೆ.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆ ಪರೀಕ್ಷೆ ಸಿದ್ಧತೆ ಹೇಗಿರಬೇಕು?

ಕೆ.ಎಚ್. ಮಂಜುನಾಥ್

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 3553 ಪೊಲೀಸ್ ಕಾನ್‌ಸ್ಟೇಬಲ್ (ನಾಗರಿಕ) ಹುದ್ದೆಗಳ ನೇರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕರೆಯಲಾಗಿದೆ. ಸ್ಪರ್ಧಾರ್ಥಿಗಳಿಗೆ ಈ ಪರೀಕ್ಷೆಗೆ ಯಾವ ರೀತಿ ತಯಾರಿ ನಡೆಸಬೇಕು, ಹೇಗೆ ಉತ್ತರಿಸಬೇಕು ಎಂಬ ಆತಂಕವಿರುವುದು ಸಹಜ. ಹಾಗೆಯೇ ಮೊದಲ ಬಾರಿ ಅರ್ಜಿ ಸಲ್ಲಿಸುವವರಿಗೆ ಯಾವ ಯಾವ ಪೇಪರ್‌ಗಳಿರುತ್ತವೆ ಎಂಬ ಬಗ್ಗೆಯೂ ಅರಿವಿರಬೇಕಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ವಿವರಗಳು

ಒಟ್ಟು 100 ಅಂಕಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಒಂದು ಪ್ರಶ್ನೆಗೆ 1 ಅಂಕ ನಿಗದಿ ಮಾಡಲಾಗಿದೆ. ಸರಿ ಉತ್ತರಕ್ಕೆ 1 ಅಂಕ ನೀಡಿದರೆ ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಳೆಯಲಾಗುತ್ತದೆ. ಲಿಖಿತ ಪರೀಕ್ಷೆಯಲ್ಲಿ ಶೇ 30ರಷ್ಟು ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಗಳಿಸಿರುವ ಅಭ್ಯರ್ಥಿಗಳನ್ನು ಅರ್ಹತಾ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ ಹಾಗೂ ಅರ್ಹತೆಗೆ ಪರಿಗಣಿಸುವುದಿಲ್ಲ. ಹೀಗಾಗಿ ಚೆನ್ನಾಗಿ ಸಿದ್ಧತೆ ನಡೆಸಿ ಉತ್ತಮ ಅಂಕ ಗಳಿಸಬೇಕಾದ ಅಗತ್ಯವಿದೆ.

ಈ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯ ಜ್ಞಾನ, ಇತಿಹಾಸ, ಭೂಗೋಳ, ವಿಜ್ಞಾನ, ಭಾರತದ ಸ್ವಾತಂತ್ರ್ಯ ಹೋರಾಟ, ಸಾಮಾನ್ಯ ಮಾನಸಿಕ ಸಾಮರ್ಥ್ಯ, ನೀತಿ ಶಿಕ್ಷಣ.

ಈ ಪರೀಕ್ಷೆಗೆ ಏನನ್ನು ಓದಬೇಕು?

ಈ ಪರೀಕ್ಷೆಯಲ್ಲಿ ಏನನ್ನು ಓದಬೇಕು ಎಂಬುದು ಈ ಹಿಂದೆ ಇದೇ ತರಹ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಯನ್ನು ಗಮನಿಸಿದಾಗ ಗೊತ್ತಾಗುತ್ತದೆ. ಆದ್ದರಿಂದ ಮೊದಲು ಆ ಪ್ರಶ್ನೆ ಪತ್ರಿಕೆಗಳನ್ನು ಓದಿ. ನಂತರ 8, 9, 10ನೇ ತರಗತಿಯ ಸಮಾಜವಿಜ್ಞಾನ ಮತ್ತು ವಿಜ್ಞಾನದ ಪುಸ್ತಕಗಳನ್ನು ಓದಿ. ಮನೋರಮಾ ಅಥವಾ ಯಾವುದಾದರೂ ವಾರ್ಷಿಕ (ಇಯರ್ ಬುಕ್) ಸಂಗ್ರಹ ಪುಸ್ತಕ ಓದಿ. ಭಾರತದ ಸಂವಿಧಾನಕ್ಕೆ ಪಿ.ಎಸ್. ಗಂಗಾಧರ್ ಅವರ 'ಭಾರತ ಸಂವಿಧಾನ ಮತ್ತು ರಾಜಕೀಯ'ವನ್ನು ಓದಬಹುದು. ಭಾರತ ಇತಿಹಾಸ ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಡಾ. ಸದಾಶಿವ ಅವರ ಪುಸ್ತಕಗಳು, ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಾಗಿ ಪದವಿ ಪೂರ್ವ ಶಿಕ್ಷಣ ಮಂಡಳಿ ಪ್ರಕಟಿಸಿರುವ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ಪುಸ್ತಕಗಳು, ಭಾರತದ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಓದಬೇಕು. ಮಾನಸಿಕ ಸಾಮರ್ಥ್ಯಕ್ಕೆ ಆರ್. ಎಸ್. ಅಗರವಾಲ್ ಅವರು ಬರೆದಿರುವ ರೀಸನಿಂಗ್ ಪುಸ್ತಕಗಳನ್ನು ಓದಿ. ಪ್ರಚಲಿತ ವಿದ್ಯಮಾನಕ್ಕೆ ಪ್ರತಿದಿನ ದಿನಪತ್ರಿಕೆಯನ್ನು ಓದಲು ಮರೆಯಬೇಡಿ.



> ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಮೊದಲ ಬಾರಿ ಅರ್ಜಿ ಸಲ್ಲಿಸಿದವರು ಪ್ರಶ್ನೆಪತ್ರಿಕೆ ಬಗ್ಗೆ ತಿಳಿದುಕೊಳ್ಳುವುದು ಅವಶ್ಯ.

ಪರೀಕ್ಷಾ ತಯಾರಿಗೆ ಒಂದಿಷ್ಟು ಸಲಹೆ

- ಒಂದು ಪ್ರಶ್ನೆ ಅದರ ಕೆಳಗೆ ನಾಲ್ಕು ಉತ್ತರಗಳನ್ನು ನೀಡಿರುತ್ತಾರೆ. ಆ ಉತ್ತರಗಳಲ್ಲಿಯೇ ಒಂದು ಸರಿಯಾಗಿ ಬರೆಯಬೇಕು.
- ಇದೊಂದು ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ ತರಹದ ಅಕಾಡೆಮಿಕ್ ಪರೀಕ್ಷೆಯಲ್ಲ. ಇಲ್ಲಿ ಬಾಯಿಪಾಠ ಮಾಡಿಕೊಂಡು ಹೋಗಿ ಬರೆಯುವ ಪ್ರಶ್ನೆಗಳು ಬರುವುದಿಲ್ಲ. ಆದ್ದರಿಂದ ಪ್ರತಿ ವಿಷಯವನ್ನು ಓದುವಾಗಲೂ ಹಿಂದಿನ ಪ್ರಶ್ನೆ ಪತ್ರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ವಿಷಯಗಳನ್ನು ಓದುವುದು ಒಳ್ಳೆಯದು. ಕಂಠಪಾಠಕ್ಕಿಂತ ವಿಷಯದ ತಿಳಿವಳಿಕೆಯೇ ಮುಖ್ಯ.
- ಒಂದು ನೂರು ಪ್ರಶ್ನೆಗಳನ್ನು ಒಂದೂವರೆ ಗಂಟೆಯಲ್ಲಿ ಬಿಡಿಸಬೇಕಾಗಿದೆ. ಅದಕ್ಕಾಗಿ ಸಮಯದ ಹೊಂದಾಣಿಕೆ ಮುಖ್ಯ. ಆದ್ದರಿಂದ ನಿತ್ಯ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸುವ ಮೂಲಕ ಅಭ್ಯಾಸ ಮಾಡಿ.
- ಪ್ರತಿ ದಿನ ಪರೀಕ್ಷೆ ಮುಗಿಯುವ ತನಕ ಕನಿಷ್ಠ 5-6 ಗಂಟೆಯನ್ನಾದರೂ ಓದಲು ಮೀಸಲಿಡಿ. ಅದರಲ್ಲಿ 1 ಗಂಟೆ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸಲು ಮೀಸಲಿಡುವುದು ಸೂಕ್ತ.
- ಪ್ರತಿ ನಿತ್ಯ ದಿನಪತ್ರಿಕೆ ಓದಿ. 8, 9, 10ನೇ ತರಗತಿಯ ಸಮಾಜ ವಿಜ್ಞಾನ ಮತ್ತು ವಿಜ್ಞಾನದ ಪಠ್ಯ ಪುಸ್ತಕಗಳನ್ನು ಓದಲು ಮರೆಯಬೇಡಿ. ಹಾಗೆ ಓದುವಾಗ ಬಹುಆಯ್ಕೆ ಪ್ರಶ್ನೆಗಳನ್ನು ಕಲ್ಪಿಸಿಕೊಳ್ಳುತ್ತಾ ಓದುವುದು ಉತ್ತಮ! ನೀವು ಬಹುಆಯ್ಕೆ ಪ್ರಶ್ನೆಗಳನ್ನು ಕಲ್ಪಿಸಿಕೊಳ್ಳಲು ಹಿಂದಿನ ವರ್ಷಗಳಲ್ಲಿ ಬಂದ ಪ್ರಶ್ನೆಗಳನ್ನು ಮಾದರಿಯಾಗಿಟ್ಟುಕೊಳ್ಳಿ ಹಾಗೂ ಹೊಸ ಹೊಸ ಪ್ರಶ್ನೆಗಳನ್ನು ನಿತ್ಯ ಓದುವಾಗ ಸೃಷ್ಟಿಸುತ್ತಾ ಹೋಗುವುದು ನಿಮ್ಮನ್ನು ಉತ್ತಮ ಫಲಿತಾಂಶದತ್ತ ಒಯ್ಯಬಲ್ಲದು.
- ಪ್ರತಿದಿನವೂ ಅಭ್ಯಾಸಕ್ಕಾಗಿ ಒಂದಿಷ್ಟು ಸಮಯವನ್ನು ತೆಗೆದಿಡುವುದರ ಜೊತೆಗೆ ನಿತ್ಯವೂ ನೀವು ಹಿಂದೆ ಓದಿದ ವಿಷಯವನ್ನು ಪುನರಾವರ್ತನೆ ಮಾಡುತ್ತಾ ಅಧ್ಯಯನ ಮಾಡುವುದರಿಂದ ಹಿಂದೆ ಓದಿರುವುದನ್ನು ಮರೆತು ಹೋಗದಂತೆ ತಡೆಯಬಹುದು.
- ಇದೊಂದು ಸ್ಪರ್ಧಾತ್ಮಕ ಪರೀಕ್ಷೆಯಾದ್ದರಿಂದ ಸ್ಪರ್ಧೆಯೇ ಪ್ರಧಾನವಾಗಿರುತ್ತದೆ ಮತ್ತು ಆ ಸ್ಪರ್ಧೆಯಲ್ಲಿ ಎಲ್ಲರಿಗಿಂತ ಮುಂದೆ ಇರಬೇಕಾದ ಅಗತ್ಯ ಇರುವುದರಿಂದ ತರಬೇತಿ ಕೇಂದ್ರಗಳ ಸಹಾಯವನ್ನು ಪಡೆಯಬಹುದು.

(ಲೇಖಕ: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

ಈ ಹಿಂದೆ ಪರೀಕ್ಷೆಯಲ್ಲಿ ಬಂದ ಕೆಲವು ಪ್ರಶ್ನೆಗಳು

ಇತಿಹಾಸ

1) 'ಬ್ರಿಟಿಷರ ಆಳ್ವಿಕೆಯಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ' ಭಾಗವಾಗಿದ್ದ ಪ್ರದೇಶಗಳು.......
ಎ) ಬಳ್ಳಾರಿ ಮತ್ತು ದಕ್ಷಿಣ ಕನ್ನಡ
ಬಿ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ
ಸಿ) ಮೈಸೂರು ಮತ್ತು ಕೊಡಗು
ಡಿ) ದಕ್ಷಿಣ ಕನ್ನಡ ಮತ್ತು ಕೊಡಗು
ಉತ್ತರ: ಎ

ಭಾರತೀಯ ಅರ್ಥಶಾಸ್ತ್ರ

2) ಭಾರತದಲ್ಲಿ ಅತ್ಯಂತ ಹೆಚ್ಚು ಸಿಬ್ಬಂದಿ ಹೊಂದಿರುವ ಸಾರ್ವಜನಿಕ ಉದ್ಯಮ ಯಾವುದು?
ಎ) ಬಿಇಎಂಎಲ್
ಬಿ) ಬಿಎಚ್‌ಇಎಲ್
ಸಿ) ಭಾರತೀಯ ರೈಲ್ವೆ
ಡಿ) ಮೇಲಿನ ಯಾವುದೂ ಅಲ್ಲ.
ಉತ್ತರ: ಸಿ

ಭೂಗೋಳ

3) ಖಾಸಿ ಮತ್ತು ಗ್ಯಾರೋ ಬುಡಕಟ್ಟಿನ ಜನಾಂಗವನ್ನು ಎಲ್ಲಿ ನೋಡಬಹುದು?
ಎ) ಗುಜರಾತ್ ಬಿ) ಕರ್ನಾಟಕ (ಚಾಮರಾಜನಗರ)
ಸಿ) ಮೇಘಾಲಯ ಡಿ) ಮಹಾರಾಷ್ಟ್ರ
ಉತ್ತರ:- ಸಿ

ವಿಜ್ಞಾನ

4) ಸರಿಯಾಗಿ ಹೊಂದಿಸಿ ಬರೆಯಿರಿ:-

ಪಟ್ಟಿ-1	ಪಟ್ಟಿ-2
ಎ) ರಂಜಕ	1) ಬೆಂಕಿಕಡ್ಡಿ
ಬಿ) ಗಂಧಕ	2) ಟೈರುಗಳು
ಸಿ) ಪೊಟ್ಯಾಷಿಯಂ	3) ಗೊಬ್ಬರ
ಡಿ) ಸಿಲಿಕಾನ್	4) ಗಾಜು


ಉತ್ತರ ಸಂಕೇತಗಳು
ಎ) ಎ-3 ಬಿ-2 ಸಿ-4 ಡಿ-1
ಬಿ) ಎ-4 ಬಿ-3 ಸಿ-2 ಡಿ-1
ಸಿ) ಎ-1 ಬಿ-2 ಸಿ-3 ಡಿ-4
ಡಿ) ಎ-4 ಬಿ-3 ಸಿ-1 ಡಿ-2
ಉತ್ತರ:- ಸಿ

ಭಾರತೀಯ ಸಂವಿಧಾನ

5) ಹೊಂದಿಸಿ ಬರೆಯಿರಿ:-

ಪಟ್ಟಿ-1	ಪಟ್ಟಿ-2
ಎ) 356ನೇ ವಿಧಿ	1) ನ್ಯಾಷನಲ್ ಎಮರ್ಜನ್ಸಿ
ಬಿ) 360ನೇ ವಿಧಿ	2) ರಾಜ್ಯ ತುರ್ತು ಪರಿಸ್ಥಿತಿ
ಸಿ) 352ನೇ ವಿಧಿ	3) ಹಣಕಾಸಿನ ತುರ್ತುಪರಿಸ್ಥಿತಿ
ಡಿ) 315ನೇ ವಿಧಿ	4) ಹಣಕಾಸು ಆಯೋಗ
	5) ಕೆ ಪಿ ಎಸ್ ಸಿ

ಉತ್ತರ ಸಂಕೇತಗಳು
ಎ) ಎ-5, ಬಿ-2, ಸಿ-3, ಡಿ-4
ಬಿ) ಎ-2, ಬಿ-3, ಸಿ-1, ಡಿ-5
ಸಿ) ಎ-2, ಬಿ-5, ಸಿ-1, ಡಿ-4
ಡಿ) ಎ-1, ಬಿ-2, ಸಿ-4, ಡಿ-3
ಉತ್ತರ: ಬಿ



ಪ್ರಶ್ನೋತ್ತರ ಸಾಮಾನ್ಯ ಅಧ್ಯಯನ

60. ಭಾರತದ ಜಿ.ಡಿ.ಪಿ.ಯನ್ನು ಅಳೆದ ಮೊದಲ ಭಾರತೀಯ ಯಾರು?
ಎ) ದಾದಾಬಾಯಿ ನವರೋಜಿ ಬಿ) ಡಾ. ಅಂಬೇಡ್ಕರ್
ಸಿ) ಕೆ.ಟಿ. ಶಾ ಡಿ) ಮೇಲಿನ ಯಾರೂ ಅಲ್ಲ
ಉತ್ತರ : (ಎ)
ವಿವರಣೆ : ದಾದಾಬಾಯಿ ನವರೋಜಿಯವರು ಭಾರತದ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯವನ್ನು ಅಳೆದ ಮೊದಲ ಭಾರತೀಯರು.

61. ಕೃಷ್ಣಾ ನದಿಯ ಅತೀ ದೊಡ್ಡ ಉಪನದಿ ಯಾವುದು?
ಎ) ಭೀಮಾ ಬಿ) ತುಂಗಭದ್ರಾ
ಸಿ) ಘಟಪ್ರಭ ಡಿ) ಮಲಪ್ರಭ
ಉತ್ತರ : (ಬಿ)
ವಿವರಣೆ : ಕೃಷ್ಣಾ ನದಿಯ ಮುಖ್ಯ ಉಪನದಿಗಳೆಂದರೆ: ಭೀಮಾ, ಕೊಯ್ನಾ, ಪಂಚಗಂಗಾ, ಧೂದ್‌ಗಂಗಾ, ತುಂಗಭದ್ರಾ, ಹಿರಣ್ಯಕೇಶಿ, ಘಟಪ್ರಭ, ಮಲಪ್ರಭ ಮುಂತಾದವು. ಇವುಗಳಲ್ಲಿ ತುಂಗಭದ್ರಾ ನದಿಯು ಇದರ ಅತ್ಯಂತ ಮುಖ್ಯ ಹಾಗೂ ಅತಿ ದೊಡ್ಡ ಉಪನದಿಯಾಗಿದೆ.

62. 'ಕಾರಂಜಾ ನದಿ'ಯು ಯಾವ ನದಿಯ ಉಪ ನದಿಯಾಗಿದೆ?
ಎ) ಕೃಷ್ಣಾ ನದಿ ಬಿ) ಕಬಿನಿ ನದಿ
ಸಿ) ಮಂಜ್ರಾ ನದಿ ಡಿ) ತುಂಗಭದ್ರಾ ನದಿ
ಉತ್ತರ : (ಸಿ)
ವಿವರಣೆ: ಮಂಜ್ರಾ ನದಿಯು ಕರ್ನಾಟಕದ ಅತ್ಯಂತ ಉತ್ತರ ಭಾಗದ ನೀರಾವರಿ ಯೋಜನೆಯಾಗಿದೆ. ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕು ಬ್ಯಾಲಹಳ್ಳಿಯ ಬಳಿ ಮಂಜ್ರಾ ನದಿಯ ಉಪನದಿಯಾದ ಕಾರಂಜಾ ನದಿಗೆ ಜಲಾಶಯ ನಿರ್ಮಿಸಲಾಗಿದೆ.

63. ಭಾರತ ಮತ್ತು ಅಫ್ಘಾನಿಸ್ತಾನದ ನಡುವೆ ಇರುವ ಭೂ ಗಡಿರೇಖೆ ಯಾವುದು?
ಎ) ಮ್ಯಾಕ್ ಮೋಹನ್ ರೇಖೆ ಬಿ) ರ್‍ಯಾಡ್‌ಕ್ಲಿಫ್ ರೇಖೆ
ಸಿ) ಡ್ಯುರೆಂಡ್ ರೇಖೆ ಡಿ) ಪಾಕ್ ಜಲಸಂಧಿ
ಉತ್ತರ : (ಸಿ)
ವಿವರಣೆ : ಭಾರತ ಮತ್ತು ಅಫ್ಘಾನಿಸ್ತಾನದ ನಡುವೆ ಇರುವ ಭೂ ಗಡಿರೇಖೆ ಡ್ಯುರೆಂಡ್ ರೇಖೆಯಾಗಿದೆ. ಇತರೆ ಗಡಿರೇಖೆಗಳು ಈ ಕೆಳಗಿನಂತಿವೆ.
- ಭಾರತ ಮತ್ತು ಚೀನಾ – ಮ್ಯಾಕ್ ಮೋಹನ್ ರೇಖೆ
- ಭಾರತ ಮತ್ತು ಪಾಕಿಸ್ತಾನ - ರ್‍ಯಾಡ್‌ಕ್ಲಿಫ್ ರೇಖೆ
- ಭಾರತ ಮತ್ತು ಅಫ್ಘಾನಿಸ್ತಾನ – ಡ್ಯುರೆಂಡ್ ರೇಖೆ
- ಭಾರತ ಮತ್ತು ಶ್ರೀಲಂಕಾ - ಪಾಕ್ ಜಲಸಂಧಿ

64. ಮಧ್ಯ ಹಿಮಾಲಯ ಸರಣಿಯು ಗಿರಿಧಾಮಗಳಿಗೆ ಪ್ರಸಿದ್ಧವಾಗಿದೆ. ಕೆಳಗಿನ ಯಾವ ಗಿರಿಧಾಮಗಳು ಇಲ್ಲಿ ಕಂಡು ಬರುತ್ತವೆ?
1. ರಾಣಿಖೇತ್ 2. ಮಸ್ಸೋರಿ
3. ಡಾರ್ಜಿಲಿಂಗ್ 4. ಚಕ್ರತಾ
ಉತ್ತರ ಸಂಕೇತಗಳು:
ಎ) 1 ಮತ್ತು 3 ಬಿ) 1 ಮತ್ತು 2
ಸಿ) 1, 2, 3 ಮತ್ತು 4 ಡಿ) 1 ಮತ್ತು 4
ಉತ್ತರ : (ಸಿ)
ವಿವರಣೆ : ಮಧ್ಯ ಹಿಮಾಲಯ ಸರಣಿಯು ಹಲವಾರು ಗಿರಿಧಾಮಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಯ ಅನೇಕ ಪರ್ವತ ಶಿಖರಗಳು ಹಿಮಾಚ್ಛಾದಿವಾಗಿದೆ. ಶಿಮ್ಲಾ, ರಾಣಿಖೇತ್, ಚಕ್ರತಾ, ಮಸ್ಸೋರಿ, ನೈನಿತಾಲ್, ಡಾರ್ಜಿಲಿಂಗ್ ಇಲ್ಲಿಯ ಪ್ರಸಿದ್ಧ ಗಿರಿಧಾಮಗಳು.

65. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಎಷ್ಟು ರಾಜ್ಯಗಳಿವೆ?
ಎ) 28 ಬಿ) 49 ಸಿ) 50 ಡಿ) 52
ಉತ್ತರ : (ಸಿ)
ವಿವರಣೆ : ಅಮೆರಿಕದಲ್ಲಿ 50 ರಾಜ್ಯಗಳಿವೆ, ಇದರ ರಾಜಧಾನಿ ವಾಷಿಂಗ್ಟನ್ ಡಿಸಿ. ಡಿಸಿ ಎಂದರೆ ಡಿಸ್ಟ್ರಿಕ್ಟ್ ಆಫ್ ಕೊಲಂಬಿಯಾ ಎಂದರ್ಥ. ಇದು ಪೊಟೋಮ್ಯಾಕ್ ನದಿಯ ತೀರದಲ್ಲಿದೆ. ಈ ನಗರವನ್ನು ಮೇರಿಲ್ಯಾಂಡ್ ಮತ್ತು ವರ್ಜಿನಿಯಾ ರಾಜ್ಯಗಳು ಸುತ್ತುವರೆದಿದೆ.

66. ಈ ಕೆಳಗಿನ ಯಾವ ನದಿ 'ಏಂಜಲ್ ಜಲಪಾತ' ಹೊಂದಿದೆ?
ಎ) ಅಮೆಜಾನ್ ಬಿ) ಮಿಸಿಸಿಪ್ಪಿ
ಸಿ) ಚೂರನ್ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ : (ಸಿ)
ವಿವರಣೆ : ಓರಿನೊಕೊ ನದಿಯ ಉಪನದಿಯಾದ ಚೂರನ್ ವಿಶ್ವದ ಅತ್ಯಂತ ಎತ್ತರವಾದ ಏಂಜಲ್ ಜಲಪಾತವನ್ನು (974 ಮೀ.) ಗಯಾನ ಭೂಫಲಕದಲ್ಲಿ ನಿರ್ಮಾಣ ಮಾಡಿದೆ. ಇದು ದಕ್ಷಿಣ ಅಮೆರಿಕದ ವೆನಿಜುವೆಲಾದಲ್ಲಿದೆ.

67. ಸಮಭಾಜಕ ವೃತ್ತವನ್ನು ಈ ಕೆಳಗಿನವುಗಳಲ್ಲಿ 2 ಬಾರಿ ಹಾಯ್ದು ಹೋಗುವ ನದಿ ಯಾವುದು?
ಎ) ನೈಜರ್ ನದಿ ಬಿ) ಜಾಂಬೆಜಿ ನದಿ
ಸಿ) ಕಾಂಗೊ ನದಿ ಡಿ) ಆರೆಂಜ್ ನದಿ
ಉತ್ತರ : (ಸಿ)
ವಿವರಣೆ : ಕಾಂಗೊ ನದಿ. ಇದು ಮಧ್ಯ ಆಫ್ರಿಕಾದ ಅತಿಮುಖ್ಯ ನದಿ. ಈ ನದಿಯು ಉತ್ತರದ ಜಾಂಬಿಯಾದಲ್ಲಿ ಉಗಮಿಸಿ ಸುಮಾರು 4670 ಕಿ. ಮೀ. ಉದ್ದವಾಗಿ ಪಶ್ಚಿಮದ ಕಡೆಗೆ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುವುದು. ಇದು ಸಮಭಾಜಕ ವೃತ್ತವನ್ನು 2 ಬಾರಿ ಹಾಯ್ದು ಹೋಗಿದೆ.

68. 'ಆರ್ಟಸಿಯನ್ ಬಾವಿಗಳು' ಈ ಕೆಳಗಿನ ಯಾವ ದೇಶದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ?
ಎ) ಬ್ರೆಜಿಲ್ ಬಿ) ರಷ್ಯಾ
ಸಿ) ಆಸ್ಟ್ರೇಲಿಯಾ ಡಿ) ಆಫ್ರಿಕಾ
ಉತ್ತರ : (ಸಿ)
ವಿವರಣೆ : ಕೆಲವು ಕಡೆಗಳಲ್ಲಿ ಶಿಲಾಪದರುಗಳು ಬೋಗುಣಿಯಾಕಾರದಲ್ಲಿ ರಚನೆಯಾಗಿ ಒಂದು ಪ್ರವೇಶ್ಯ ಶಿಲಾ ಪದರಿನ ಮೇಲೆ ಹಾಗೂ ಕೆಳಗೆ ಅಪ್ರವೇಶ್ಯ ಶಿಲಾಪದರುಗಳಿರುತ್ತವೆ. ಇಂತಹ ಶಿಲಾಪದರಗಳಲ್ಲಿ ಸಂಗ್ರಹವಾದ ಅಂತರ್ಜಲವು ಸ್ವಾಭಾವಿಕವಾಗಿ ಹೊರಬೀಳಲಾರದು. ಇಂತಹ ಕಡೆ ಪ್ರವೇಶ್ಯ ಶಿಲೆಯವರೆಗೆ ರಂಧ್ರವನ್ನು ಕೊರೆದಾಗ ನೀರು ಹೊರಚಿಮ್ಮುವುದು. ಇವುಗಳನ್ನು ಆರ್ಟಸಿಯನ್ ಬಾವಿಗಳೆನ್ನುವರು.

69. ಏಷ್ಯಾದ ಅತ್ಯಂತ ಆಳವಾದ ಬಿಂದು ಯಾವುದು?
ಎ) ಮರಿಯಾನಾ ಕಂದಕ ಬಿ) ಡೆಡ್ ಸೀ (ಮೃತ್ಯು ಸಮುದ್ರ)
ಸಿ) ಟಿಬೆಟ್ ಡಿ) ಇಂಡೋನೇಷ್ಯಾ
ಉತ್ತರ: (ಬಿ)
ವಿವರಣೆ: ಸಮುದ್ರ ಮಟ್ಟಕ್ಕಿಂತ 1,401 ಅಡಿ ಎತ್ತರದಲ್ಲಿರುವ ಮೃತ್ಯು ಸಮುದ್ರ ಭೂಮಿಯ ಮೇಲಿನ ಆಳವಾದ ಪ್ರದೇಶಗಳಲ್ಲಿ ಒಂದಾಗಿದೆ. ಇದರ ಮೇಲ್ಮೈ ಮತ್ತು ಕರಾವಳಿಯ ಗಡಿ ಪೂರ್ವಕ್ಕೆ ಜೋರ್ಡಾನ್ ಮತ್ತು ಪಶ್ಚಿಮಕ್ಕೆ ಇಸ್ರೇಲ್ ದೇಶಗಳಿವೆ.

(ಪ್ರಶ್ನೋತ್ತರ ಸಂಯೋಜನೆ: www.iasjnana.com ಸಂಪರ್ಕಕ್ಕೆ: 9916399276)

ಪ್ರಜಾವಾಣಿ ಉದ್ಯೋಗ ವಾರ್ತೆ

ಹಾವೇರಿಯಲ್ಲಿ ಗ್ರಾಮ ಕಾಯಕ ಮಿತ್ರ ಹುದ್ದೆಗಳು


ಹಾವೇರಿ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಕಾಯಕ ಮಿತ್ರ ಹುದ್ದೆಗಳ ಭರ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
- ಸ್ಥಳ: ಹಾವೇರಿ
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು 10ನೇ ತರಗತಿ ಉತ್ತೀರ್ಣರಾಗಿರಬೇಕು.
- ಆಯ್ಕೆ ಪಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 15, 2021
- ಹೆಚ್ಚಿನ ಮಾಹಿತಿಗೆ: haveri.nic.in

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಭುಜಗಳು

ಗಣಿತ

ಪ್ರಮೇಯ-1: ಥೇಲ್ಸ್ ಪ್ರಮೇಯ (ಮೂಲ ಸಮಾನುಪಾತ ಪ್ರಮೇಯ) ತ್ರಿಭುಜದ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳ ರೇಖೆಯು ಉಳಿದೆರೆಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ.



ದತ್ತ: ΔABC ಯಲ್ಲಿ $DE \parallel BC$.

ಸಾಧನೀಯ: $\frac{AD}{DB} = \frac{AE}{EC}$

ರಚನೆ: $DM \perp AC$ ಮತ್ತು $EN \perp AB$ ಎಳೆಯಿರಿ

ಸಾಧನೆ:

$$\frac{\Delta ADE}{\Delta DEC} = \frac{\times AD \times EN}{\frac{1}{2} \times DB \times EN}$$

$$= \frac{AD}{DB} \ldots\ldots (1)$$

$$\frac{\Delta ADE}{\Delta DEC} = \frac{\frac{1}{2} \times AE \times DM}{\frac{1}{2} \times EC \times DM}$$

$$= \frac{AE}{EC} \ldots\ldots (2)$$

BDE ಮತ್ತು DEC ಗಳು ಒಂದೇ ಪಾದ DE ಒಂದೇ ಸಮಾನಾಂತರ ರೇಖೆಗಳು DE ಮತ್ತು BC ಗಳ ನಡುವೆ ಇವೆ.

$\therefore \Delta BDE$ ಯ $\therefore \Delta DEC$ ವಿಸ್ತೀರ್ಣ

ಸಮೀಕರಣ (1) ಮತ್ತು (2) ರಿಂದ

$$\frac{AD}{DB} = \frac{AE}{EC}$$


ಥೇಲ್ಸ್ ಪ್ರಮೇಯದ ವಿಲೋಮ
ತ್ರಿಭುಜದ ಯಾವುದೇ ಎರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುವ ಸರಳರೇಖೆಯು ಆ ತ್ರಿಭುಜದ ಮೂರನೇ ಬಾಹುವಿಗೆ

ΔABC ಯಲ್ಲಿ $\frac{AX}{BX} = \frac{AY}{CY}$ ಆದರೆ $XY \parallel BC$

ಸಮಾಂತರವಾಗಿರುತ್ತದೆ.
ಥೇಲ್ಸ್ ಪ್ರಮೇಯದ ಉಪಪ್ರಮೇಯ
ತ್ರಿಭುಜದ ಒಂದು ಬಾಹುವಿಗೆ ಸಮಾನಾಂತರವಾಗಿ ಒಂದು ಸರಳರೇಖೆಯನ್ನು ಎಳೆದಾಗ ಉಂಟಾಗುವ ಚಿಕ್ಕ ತ್ರಿಭುಜದ ಬಾಹುಗಳು ದತ್ತ ತ್ರಿಭುಜದ ಬಾಹುಗಳಿಗೆ ಸಮಾನುಪಾತದಲ್ಲಿರುತ್ತವೆ.

ΔABC ಯಲ್ಲಿ $XY \parallel BC$ ಆದರೆ $\frac{AX}{AB} = \frac{AY}{AC} = \frac{XY}{BC}$

1) ΔABC ಯಲ್ಲಿ $DE \parallel BC$, AD = 1.5cm, BD = 3cm, AE = 1cm ಆದರೆ EC ಕಂಡುಹಿಡಿಯಿರಿ.



ಎಸ್ಸೆಸ್ಸೆಲ್ಸಿ

ಪರಿಹಾರ:
ಥೇಲ್ಸ್ ಪ್ರಮೇಯದ ಪ್ರಕಾರ,

$$\frac{EC}{AE} = \frac{DB}{AD}$$

$$\frac{EC}{1} = \frac{3}{1.5}$$

$$EC = \frac{3}{1.5}$$

$$EC = 2\ cm$$

(ಮುಂದುವರಿಯುವುದು)

ದ್ರಾವಣಗಳು

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ

ಉದಾಹರಣೆ: ಒಂದು ದ್ರಾವಣವು ದ್ರವ್ಯರಾಶಿಗೆ ಅನುಗುಣವಾಗಿ ನೀರಿನಲ್ಲಿ ಶೇ 10 ರಷ್ಟು ಗ್ಲುಕೋಸ್ ಎಂದು ವಿವರಿಸಿದರೆ 10 ಗ್ರಾಂ, ಗ್ಲುಕೋಸ್ 90 ಗ್ರಾಂ ನೀರಿನಲ್ಲಿ ವಿಲೀನಗೊಂಡು 100 ಗ್ರಾಂ ದ್ರಾವಣವೊಂದು ಉಂಟಾಗಿದೆ ಎಂದರ್ಥ.

2) ಶೇಕಡಾವಾರು ಗಾತ್ರ (V/v)
ಶೇಕಡವಾರು ಗಾತ್ರವನ್ನು ಹೀಗೆ ವ್ಯಾಖ್ಯಾನಿಸಬಹುದು.

$$\text{ಒಂದು ಘಟಕದ ಶೇಕಡವಾರು ಗಾತ್ರ} = \frac{\text{ಘಟಕದ ಗಾತ್ರ}}{\text{ದ್ರಾವಕದ ಒಟ್ಟು ಗಾತ್ರ}} \times 100$$

ಉದಾಹರಣೆ: ನೀರಿನಲ್ಲಿ 10% ಇಥೆನಾಲ್ ದ್ರಾವಣವೆಂದರೆ, ದ್ರಾವಣದ ಒಟ್ಟು ಗಾತ್ರವು 100 ಮಿಲಿ ಲೀಟರ್ ಆಗುವಂತೆ 10 ಮಿಲಿ ಲೀಟರ್ ಇಥೆನಾಲ್ ನೀರಿನಲ್ಲಿ ವಿಲೀನಗೊಂಡಿರುವುದು ಎಂದರ್ಥ. ದ್ರವಗಳನ್ನು ಹೊಂದಿರುವ ದ್ರಾವಣಗಳ ಸಾರತೆಯನ್ನು ಸಾಮಾನ್ಯವಾಗಿ ಈ ಮೂಲಮಾನದಿಂದ ವ್ಯಕ್ತಪಡಿಸುವರು.

3) ಶೇಕಡವಾರು ಗಾತ್ರಾನುಸಾರ ರಾಶಿ (W/v)
ಶೇಕಡವಾರು ಗಾತ್ರಾನುಸಾರ ರಾಶಿ, ಇದು ವೈದ್ಯಕೀಯ ಮತ್ತು ಔಷಧ ವಿಜ್ಞಾನದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಮತ್ತೊಂದು ಮೂಲಮಾನವಾಗಿದೆ. ಇದು 100 ಎಂಎಲ್ ದ್ರಾವಣದಲ್ಲಿ ವಿಲೀನಗೊಂಡಿರುವ ದ್ರವ್ಯದ ರಾಶಿಯಾಗಿದೆ.

4) ಪ್ರತಿ ಮಿಲಿಯನ್‌ನ ಭಾಗಗಳು
ದ್ರವ್ಯವೊಂದು ಅತ್ಯಲ್ಪ ಪ್ರಮಾಣದಲ್ಲಿದ್ದಾಗ, ಸಾರತೆಯನ್ನು ಪ್ರತಿ ಮಿಲಿಯನ್‌ನ ಭಾಗಗಳಲ್ಲಿ (ppm) ವ್ಯಕ್ತಪಡಿಸುವುದು ಅನುಕೂಲಕರವಾಗಿದೆ ಮತ್ತು ಇದನ್ನು ಹೀಗೆ ವ್ಯಾಖ್ಯಾನಿಸಬಹುದು.

$$\text{ಪ್ರತಿ ಮಿಲಿಯನ್ನಿನ ಭಾಗಗಳು} = \frac{\text{ಘಟಕ ಒಂದರ ಭಾಗಗಳ ಸಂಖ್ಯೆ}}{\text{ದ್ರಾವಣದಲ್ಲಿರುವ ಎಲ್ಲಾ ಘಟಕಗಳ ಒಟ್ಟು ಸಂಖ್ಯೆ}} \times 10^6$$

ಶೇಕಡಾವಾರು ರೀತಿಯಲ್ಲಿದ್ದ ಹಾಗೆ, ಪ್ರತಿ ಮಿಲಿಯನ್‌ನ ಭಾಗಗಳಲ್ಲಿರುವ ಸಾರತೆಯನ್ನು (ppm) ರಾಶಿ/ರಾಶಿ, ರಾಶಿ/ಗಾತ್ರ, ಗಾತ್ರ/ಗಾತ್ರ ರೀತಿಯಲ್ಲಿಯೂ ಸಹ ವ್ಯಕ್ತಪಡಿಸಬಹುದು.

ಒಂದು ಲೀಟರ್ ಸಮುದ್ರದ ನೀರು (1030 ಗ್ರಾಂ ತೂಗುವ) 6* 103g ನಷ್ಟು ವಿಲೀನಗೊಂಡಿರುವ ಆಮ್ಲಜನಕ (o2) ಹೊಂದಿರುತ್ತದೆ. ಅಷ್ಟು ಅಲ್ಪ ಪ್ರಮಾಣದ ಸಾರತೆಯನ್ನು 106g ಸಮುದ್ರದ ನೀರಿನಲ್ಲಿ 5.8 (5.8 ppm) ಆಮ್ಲಜನಕವಿರುತ್ತದೆ.

5) ಮೋಲ್ ಭಿನ್ನಾಂಶ
ಮೋಲ್‌ನ ಭಿನ್ನಾಂಶಕ್ಕೆ ಸಾಮಾನ್ಯವಾಗಿ ಉಪಯೋಗಿಸಿರುವ ಸಂಕೇತ x ಮತ್ತು ಇದರ ಬಲಭಾಗದಲ್ಲಿ ಉಪಯೋಗಿಸಿರುವ ಅಡಿ ಬರಹವು ಘಟಕವನ್ನು ಸೂಚಿಸುತ್ತದೆ. ಇದನ್ನು ಹೀಗೆ ವ್ಯಾಖ್ಯಾನಿಸಲಾಗಿದೆ.

$$\text{ಒಂದು ಘಟಕದ ಮೋಲ್ ಭಿನ್ನಾಂಶ} = \frac{\text{ಘಟಕದ ಮೋಲ್‌ಗಳ ಸಂಖ್ಯೆ}}{\text{ಎಲ್ಲಾ ಘಟಕಗಳ ಒಟ್ಟು ಮೋಲ್‌ಗಳ ಸಂಖ್ಯೆ}}$$

ಉದಾಹರಣೆ: ಒಂದು ದ್ವಿಘಟಕದ ದ್ರಾವಣದಲ್ಲಿರುವ A-ಘಟಕ ಮೋಲ್‌ಗಳ ಸಂಖ್ಯೆ ಮತ್ತು B- ಘಟಕದ ಮೋಲ್‌ಗಳ ಸಂಖ್ಯೆ ಕ್ರಮವಾಗಿ nA ಮತ್ತು nB ಗಳಾಗಿದ್ದರೆ A ಯ ಮೋಲ್ ಭಿನ್ನಾಂಶವು

$$X_A = \frac{n_A}{n_A + n_B}$$

i ಸಂಖ್ಯೆಯಷ್ಟು ಘಟಕಗಳನ್ನು ಹೊಂದಿರುವ ದ್ರಾವಣವೊಂದಕ್ಕೆ

$$X_1 = \frac{n_i}{n_1 + n_2 + n_3 + \ldots\ldots + n_i} = \frac{n_i}{\sum ni}$$

ಕೊಟ್ಟಿರುವ ದ್ರಾವಣವೊಂದರ ಎಲ್ಲಾ ಮೋಲ್ ಭಿನ್ನಾಂಶಗಳ ಮೊತ್ತ 1 ಎಂದು ತೋರಿಸಬಹುದಾಗಿದೆ.

$$x1 + x2 + \ldots\ldots\ldots + x1 = 1$$

ದ್ರಾವಣದ ಸಾರತೆಯ ಜೊತೆಯಲ್ಲಿ ಆವೀಕರಣದ ಒತ್ತಡಗಳಂತಹ ದ್ರಾವಣಗಳ ಕೆಲವು ಭೌತ ಗುಣಲಕ್ಷಣಗಳನ್ನು ಸಂಬಂಧಿಕರಿಸಲು ಮೋಲ್ ಭಿನ್ನಾಂಶ ಮೂಲಮಾನವು ಅತ್ಯುಪಯುಕ್ತವಾಗಿದೆ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸಂತೋಷದಿಂದ ಇರುವುದು, ಸಂತೋಷದಿಂದ ಒಡಗೂಡಿದ ಕುಟುಂಬವನ್ನು ಹೊಂದುವುದು ಮತ್ತು ಅಂತಿಮವಾಗಿ ಸಂತೋಷದಾಯಕ ಜಗತ್ತನ್ನು ಹೊಂದುವುದು ನಮ್ಮ ಮೂಲಭೂತ ಹಕ್ಕು. ಅದೇ ನಮ್ಮ ಗುರಿಯಾಗಿರಬೇಕು. **–ದಲೈಲಾಮ**

ಕೆಪಿಎಸ್‌ಸಿ ನೇಮಕಾತಿ ಅಕ್ರಮಕ್ಕೆ ರಕ್ಷಣೆ ಬೇಡ

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) 2011ರಲ್ಲಿ ನಡೆಸಿದ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಆಯೋಗದ ಅಂದಿನ ಅಧ್ಯಕ್ಷ ಮತ್ತು ಸದಸ್ಯರ ವಿರುದ್ಧ ವಿಚಾರಣೆಗೆ (ಪ್ರಾಸಿಕ್ಯೂಷನ್) ಅನುಮತಿ ನೀಡದೇ ಇರುವ ರಾಜ್ಯ ಸಚಿವ ಸಂಪುಟದ ನಿರ್ಧಾರ ಯಾವುದೇ ದೃಷ್ಟಿಯಿಂದಲೂ ಸರಿಯಲ್ಲ. ಇದು ಭ್ರಷ್ಟಾಚಾರಿಗಳಿಗೆ, ಸ್ವಜನಪಕ್ಷಪಾತ ನಡೆಸಿದವರಿಗೆ ನೀಡುವ ರಕ್ಷಣೆ ಎನ್ನದೆ ಬೇರೆ ವಿಧಿಯಿಲ್ಲ. ಅಕ್ರಮಗಳ ಕೂಟವಾಗಿರುವ ಕೆಪಿಎಸ್‌ಸಿಯನ್ನು ಸರಿದಾರಿಗೆ ತರುವ ಜವಾಬ್ದಾರಿ ಹೊತ್ತಿರುವ ರಾಜ್ಯ ಸರ್ಕಾರವು ಹೊಣೆಗಾರಿಕೆಯನ್ನು ಮರೆತು ಅಕ್ರಮದಲ್ಲಿ ಭಾಗಿಯಾಗಿದ್ದವರನ್ನು ರಕ್ಷಿಸಲು ಮುಂದಾಗಿರುವುದು ಸರ್ವಥಾ ಸಲ್ಲ. ಸಿಐಡಿ ತನಿಖೆ ನಡೆಸಿ ಅಕ್ರಮಗಳನ್ನು ಬಯಲಿಗೆಳೆದಿದೆ. ಯಾವ ಯಾವ ಹಂತದಲ್ಲಿ ಅಕ್ರಮಗಳಾಗಿವೆ ಎನ್ನುವುದನ್ನು ಬಿಚ್ಚಿಟ್ಟಿದೆ. ಇದರ ಆಧಾರದಲ್ಲಿಯೇ ರಾಜ್ಯ ಸರ್ಕಾರವು 2011ನೇ ಸಾಲಿನ ನೇಮಕಾತಿ ಅಧಿಸೂಚನೆಯನ್ನು ರದ್ದು ಮಾಡಿದೆ. ಅಧಿಸೂಚನೆ ರದ್ದು ಮಾಡಿರುವುದನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿವೆ. 2011ರ ನ.3ರಂದು ಕೆಪಿಎಸ್‌ಸಿಯು 362 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿತ್ತು. ಪರೀಕ್ಷೆಗಳನ್ನು ನಡೆಸಿ, 2014ರ ಮಾರ್ಚ್ 22ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಅಭ್ಯರ್ಥಿಯೊಬ್ಬರು ಅಂದಿನ ಅಡ್ವೊಕೇಟ್ ಜನರಲ್‌ಗೆ (ಎ.ಜಿ) ಪತ್ರ ಬರೆದಿದ್ದರು. ಎ.ಜಿ. ಶಿಫಾರಸಿನಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತ್ತು. ನಂತರ 2014ರ ಜೂನ್ 27ರಂದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಕ್ರಮಗಳ ತನಿಖೆಯ ಹೊಣೆಯನ್ನು ಸಿಐಡಿಗೆ ವಹಿಸಿತ್ತು. ತನಿಖೆ ನಡೆಸಿದ ಸಿಐಡಿ ಮಧ್ಯಂತರ ವರದಿ ನೀಡಿದ ಆಧಾರದಲ್ಲಿ ಅಂದಿನ ಸರ್ಕಾರ ನೇಮಕಾತಿ ಅಧಿಸೂಚನೆಯನ್ನು ವಾಪಸು ಪಡೆದಿತ್ತು. ಇದರ ವಿರುದ್ಧ ಕೆಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಹೋಗಿದ್ದರು. ಸರ್ಕಾರದ ಆದೇಶವನ್ನು ರದ್ದು ಮಾಡಿದ ಕೆಎಟಿ, ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಪತ್ರ ಕೊಡುವಂತೆ ಸೂಚಿಸಿತ್ತು. ಆದರೆ ಕೆಎಟಿ ಆದೇಶವನ್ನು ಹೈಕೋರ್ಟ್ ರದ್ದು ಮಾಡಿತ್ತು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿ ಹಿಡಿದಿತ್ತು. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷ ಗೋನಾಳ್ ಭೀಮಪ್ಪ, ಸದಸ್ಯರಾದ ಮಂಗಳಾ ಶ್ರೀಧರ್, ಎಸ್.ಆರ್.ರಂಗಮೂರ್ತಿ, ಎನ್.ಮಹದೇವ್, ಎಚ್.ವಿ.ಪಾರ್ಶ್ವನಾಥ್, ಎಸ್. ದಯಾಶಂಕರ್, ಎಚ್.ಡಿ.ಪಾಟೀಲ್, ಬಿ.ಎಸ್. ಕೃಷ್ಣಪ್ರಸಾದ್, ಎನ್.ರಾಮಕೃಷ್ಣ ಮತ್ತು ಬಿ.ಪಿ. ಕನಿರಾಮ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ– 1988ರ ಸೆಕ್ಷನ್ 19(1) ಅನ್ವಯ ಪ್ರಕರಣ ದಾಖಲಿಸಿ ಪ್ರಾಸಿಕ್ಯೂಷನ್‌ಗೆ ಸಿಐಡಿ ಅನುಮತಿ ಕೇಳಿತ್ತು. ರಾಜ್ಯ ಸರ್ಕಾರ ಈಗ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿಲ್ಲ.



ಕೆಪಿಎಸ್‌ಸಿ ಅಕ್ರಮಗಳನ್ನು ಬಯಲು ಮಾಡಿರುವ ಸಿಐಡಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕು. ಅಕ್ರಮಗಳಲ್ಲಿ ಭಾಗಿಯಾದವರ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕು

ಕೆಪಿಎಸ್‌ಸಿ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿರುವುದು ಇದು ಮೊದಲೇನೂ ಅಲ್ಲ. 2011ನೇ ಸಾಲಿಗಿಂತ ಮೊದಲೂ ಅಕ್ರಮಗಳು ನಡೆದಿದ್ದವು. ನಂತರ ನಡೆದ ನೇಮಕಾತಿಗಳಲ್ಲಿಯೂ ಅಕ್ರಮಗಳು ನಡೆದಿವೆ. ಅದಕ್ಕಾಗಿ 2011ನೇ ಸಾಲಿನ ಅಭ್ಯರ್ಥಿಗಳನ್ನು ಮಾತ್ರ ಬಲಿಪಶು ಮಾಡುವುದು ಬೇಡ ಎಂದು ಕೆಲವು ರಾಜಕಾರಣಿಗಳು ವಾದಿಸುತ್ತಿದ್ದಾರೆ. ಇದರಲ್ಲಿ ಯಾವ ಅರ್ಥವೂ ಇಲ್ಲ. 2011ನೇ ಸಾಲಿನ ನೇಮಕಾತಿ ಅಧಿಸೂಚನೆ ರದ್ದಾಗಿರುವುದರಿಂದ ಕೆಲವು ಅಭ್ಯರ್ಥಿಗಳಿಗೆ ನಿರಾಶೆಯಾಗಿರುವುದು ನಿಜ. ಆದರೆ ಅದನ್ನೇ ಮುಂದಿಟ್ಟು ಅಕ್ರಮಗಳನ್ನು ಒಪ್ಪಿಕೊಳ್ಳುವುದು ಮತ್ತು ಅಕ್ರಮ ಮಾಡಿದವರಿಗೆ ಯಾವುದೇ ಶಿಕ್ಷೆಯಾಗದಂತೆ ನೋಡಿಕೊಳ್ಳುವುದು ಮಹಾಅಪರಾಧ. ಕೆಪಿಎಸ್‌ಸಿಯಲ್ಲಿ ಅಕ್ರಮಗಳು ನಡೆಯದಂತೆ ನಮ್ಮ ಆಡಳಿತಗಾರರು ನೋಡಿಕೊಳ್ಳಬೇಕು. ಅದು ಅವರ ಸಂವಿಧಾನಬದ್ಧ ಜವಾಬ್ದಾರಿ ಕೂಡ. ಅಕ್ರಮಗಳ ಕೂಪವಾಗಿರುವ ಮತ್ತು 'ಮ್ಯಾರೇಜ್ ಬ್ಯೂರೊ' ಆಗಿ ಪರಿವರ್ತನೆಯಾಗಿರುವ ಕೆಪಿಎಸ್‌ಸಿಗೆ ಕಾಯಕಲ್ಪ ನೀಡುವ ಕಡೆಗೆ ಆದ್ಯತೆ ನೀಡಬೇಕೇ ವಿನಾ ಅಕ್ರಮಗಳನ್ನು ಸಮರ್ಥಿಸಿಕೊಳ್ಳುವ ಕೆಲಸ ಮಾಡಬಾರದು. ಕೆಪಿಎಸ್‌ಸಿ ಶುದ್ಧಗೊಳಿಸಿ ಅದರ ನೇಮಕಾತಿಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸುವುದು ಸರ್ಕಾರದ ಆದ್ಯ ಕರ್ತವ್ಯ. ನೇಮಕಾತಿಯನ್ನು ರದ್ದು ಮಾಡಿ, ಕೆಪಿಎಸ್‌ಸಿ ಸುಧಾರಿಸುವುದಕ್ಕಾಗಿ ಪಿ.ಸಿ.ಹೋಟಾ ಸಮಿತಿ ರಚನೆಗೆ ಕಾರಣರಾದ ಸಿದ್ದರಾಮಯ್ಯ ಅವರೇ ಈಗ ಅಕ್ರಮದ ಪರವಾಗಿ ಮಾತನಾಡುತ್ತಿರುವುದು ಅತ್ಯಂತ ವಿಷಾದನೀಯ. ಅಕ್ರಮ ಮಾಡಿರುವ ಅಭ್ಯರ್ಥಿಗಳು ಹಾಗೂ ಕೆಪಿಎಸ್‌ಸಿ ಸದಸ್ಯರನ್ನು ಸಮರ್ಥನೆ ಮಾಡಿಕೊಳ್ಳಲು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಈ ಮೂರೂ ಪಕ್ಷಗಳ ಮುಖಂಡರು ಮುಂದಾಗಿರುವುದು ದುರಂತ. ಜನಹಿತದ ಕೆಲಸಗಳಿಗೆ ಸಂಬಂಧಪಟ್ಟಂತೆ ಒಬ್ಬರ ಮೇಲೆ ಒಬ್ಬರು ಕೆಸರೆರಚುವ ರಾಜಕಾರಣಿಗಳು ಅಕ್ರಮ ಸಮರ್ಥನೆಗೆ ಮಾತ್ರ ಒಂದಾಗಿರುವುದು ವಿಪರ್ಯಾಸ. ಹೈಕೋರ್ಟ್, ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ನಡೆದುಕೊಳ್ಳಬೇಕು. ಕೆಪಿಎಸ್‌ಸಿ ಅಕ್ರಮಗಳನ್ನು ಬಯಲು ಮಾಡಿರುವ ಸಿಐಡಿಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡಿ ಅಂದಿನ ಅಧ್ಯಕ್ಷ ಮತ್ತು ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬೇಕು. ತಪ್ಪು ಮಾಡಿದವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಅದು ರಾಜ್ಯ ಸರ್ಕಾರದ ಬಹುಮುಖ್ಯ ಕರ್ತವ್ಯ.

ದಿನದ ಟ್ವೀಟ್

ಅಗತ್ಯ ವ್ಯವಸ್ಥೆ ಮಾಡಿ



ಕೋವಿಡ್‌ನಿಂದ ಮೃತಪಟ್ಟ, ವಾರಸುದಾರರಿಲ್ಲದ ಮೃತದೇಹಗಳ ಅಸ್ಥಿ ವಿಸರ್ಜನೆ ಕಾರ್ಯವನ್ನು ನೆರವೇರಿಸುವ ಮೂಲಕ ಸಚಿವ ಆರ್.ಅಶೋಕ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಹಾಗೇ ಸ್ವಲ್ಪ ಬೆಡ್, ಆಕ್ಸಿಜನ್ ಮತ್ತು ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ರೆ ಜನ ನಿಮ್ಮನ್ನ ನೆನೆಯುತ್ತಾರೆ.

ನಟರಾಜ ದೊಮ್ಮತಮರಿ, ನಾಗರಿಕ

25 ವರ್ಷಗಳ ಹಿಂದೆ

ಸೋಮವಾರ, 3-6-1996

• ಸಂಯುಕ್ತ ರಂಗ ಸಂಪುಟ ಸೇರಲು ಸಿಪಿಐ ನಿರ್ಧಾರ

ನವದೆಹಲಿ, ಜೂನ್ 2 (ಪಿಟಿಐ)– ಭಾರತೀಯ ಕಮ್ಯುನಿಸ್ಟ್ ಪಕ್ಷವು ಎಚ್.ಡಿ. ದೇವೇಗೌಡ ನೇತೃತ್ವದ ಸಂಯುಕ್ತ ರಂಗ ಸರ್ಕಾರವನ್ನು ಸೇರಲಿದೆ. ಇದರಿಂದ ದೇಶದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಎಡಪಕ್ಷವೊಂದು ಕೇಂದ್ರದ ಅಧಿಕಾರದಲ್ಲಿ ಭಾಗಿಯಾದಂತಾಗಿದೆ.

ಇಂದು ಮುಕ್ತಾಯಗೊಂಡ ಪಕ್ಷದ ರಾಷ್ಟ್ರೀಯ ಮಂಡಳಿಯ ಎರಡು ದಿನಗಳ ಸಭೆಯಲ್ಲಿ ಬಹುಮತದಿಂದ ಈ ನಿರ್ಣಯವನ್ನು ಕೈಗೊಳ್ಳಲಾಯಿತು ಎಂದು ಪಕ್ಷದ ಉಪ ಪ್ರಧಾನ ಕಾರ್ಯದರ್ಶಿ ಎ.ಬಿ. ಬರ್ಧನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• ಬುಧವಾರ ರಾಜ್ಯ ಸಂಪುಟ ರಚನೆ

ಬೆಂಗಳೂರು, ಜೂನ್ 2– ರಾಜ್ಯದ ನೂತನ ಸಚಿವ ಸಂಪುಟ ರಚನೆ ಬುಧವಾರ ಆಗಲಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

'ಮಾಜಿ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಅವರ ನಿಧನದಿಂದ ರಾಷ್ಟ್ರದಲ್ಲಿ ಏಳು ದಿನಗಳ ಶೋಕಾಚರಣೆ ಇರುವುದರಿಂದ ನೂತನ ಸಚಿವ ಸಂಪುಟ ರಚನೆಗೆ ಅಡ್ಡಿಗಳೇನಾದರೂ ಇವೆಯೇ ಎಂಬುದನ್ನು ಪರಿಶೀಲಿಸಲಾಗಿದೆ. ಆಡಂಬರ ಇಲ್ಲದೆ ಸರಳವಾಗಿ ಈ ಕಾರ್ಯವನ್ನು ನಡೆಸಬಹುದಾಗಿದೆ' ಎಂದು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಗುರುವಾರ, 3-6-1971

• ರಾಜ್ಯಹಿತ ಅಲಕ್ಷಿಸಿ 'ಏಕಪಕ್ಷೀಯ ಹಾಗೂ ಸರ್ವಾಧಿಕಾರಿ' ವರ್ತನೆ

ನವದೆಹಲಿ, ಜೂನ್ 2– ಮೈಸೂರಿನಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ಮೇಲೆ ರಾಜ್ಯಪಾಲ ಶ್ರೀ ಧರ್ಮವೀರ ಅವರು ರಾಜ್ಯದ ಜನತೆಯ ಹಿತಗಳ ವಿರುದ್ಧ 'ಏಕಪಕ್ಷೀಯವಾಗಿ ಹಾಗೂ ಸರ್ವಾಧಿಕಾರಿಯಂತೆ' ಕಾರ್ಯ ನಿರ್ವಹಿಸುತ್ತಿದ್ದಾರೆಂದು ದೂರುವ ಮನವಿ ಪತ್ರವೊಂದನ್ನು ಮೈಸೂರಿನ ಸಂಸತ್ ಸದಸ್ಯರು ಇಂದು ಪ್ರಧಾನ ಮಂತ್ರಿಗೆ ಸಲ್ಲಿಸಿದರು.

ವಿವಿಧ ಸಮಿತಿ ಮತ್ತು ಸಂಸ್ಥೆಗಳಿಗೆ ನೇಮಕ ಮಾಡುವಾಗಲೂ ರಾಜ್ಯಪಾಲರು ಪಕ್ಷೀಯ ಆಧಾರದ ಮೇಲೆ ವರ್ತಿಸುತ್ತಿದ್ದಾರೆಂದೂ ಮನವಿಯಲ್ಲಿ ಆಪಾದಿಸಲಾಗಿದೆ.

• ಬಿಹಾರ: ತ್ರಿಸದಸ್ಯ ಸಂಪುಟ ಪ್ರಮಾಣ ಸ್ವೀಕಾರ 'ಸ್ವಚ್ಛ' ಆಳ್ವಿಕೆ ಭರವಸೆ

ಪಟ್ನಾ, ಜೂನ್ 2– ಶ್ರೀ ಭೋಲಾ ಪಾಸ್ವಾನ್ ಶಾಸ್ತ್ರಿ ಅವರ ನಾಯಕತ್ವದಲ್ಲಿ ಪ್ರಗತಿಶೀಲ ವಿಧಾಯಕ ದಳದ ಮೂರು ಜನ ಸದಸ್ಯರ ಸಂಪುಟವೊಂದು ಇಂದು ಬೆಳಿಗ್ಗೆ 11 ಗಂಟೆಗೆ ಇಲ್ಲಿ ರಾಜಭವನದಲ್ಲಿ ರಾಜ್ಯಪಾಲ ಶ್ರೀ ದೇವಕಾಂತ ಬರೂವಾ ಅವರ ಸಮ್ಮುಖದಲ್ಲಿ ಸರಳ ಸಮಾರಂಭವೊಂದರಲ್ಲಿ ಪ್ರಮಾಣವಚನ ಸ್ವೀಕರಿಸಿತು.

ಕೃಷಿಯೇತರ ಗ್ರಾಮೀಣ ಉತ್ಪನ್ನಗಳಿಗೆ ಕಿಮ್ಮತ್ತು ಬಂದಾಗ ಕೃಷಿರಂಗದ ಸಬಲೀಕರಣ ಸಾಧ್ಯ

ಆರ್ಥಿಕ ಮರುರಚನೆ: ಬೇಕು ಪರಿಕಲ್ಪನೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಕೊರೊನೋತ್ತರ ಜಗತ್ತು ಈಗ ಇರುವ ಹಾಗೆ ಇರುವುದಿಲ್ಲ. ಆರ್ಥಿಕತೆಯ ಮೇಲೆ ಅದರ ಪ್ರಭಾವ ಖಂಡಿತ ಇರುತ್ತದೆ. ಈಗಾಗಲೇ ಅದು ಅನುಭವಕ್ಕೆ ಬರುತ್ತಿದೆ. ಅದರ ನಿರ್ವಹಣೆಗೆ ಸೂಕ್ತ ಆರ್ಥಿಕ ನೀತಿ ಬೇಕಾಗುತ್ತದೆ.

ನಮ್ಮ ಬಳಿ ಹೆಚ್ಚು ಪ್ರಚಲಿತವಾಗಿರುವ ಆರ್ಥಿಕತೆಯ ಮಾದರಿಗಳು ಮೂರು ರೀತಿಯವು. ಸರ್ಕಾರವೇ ಆರ್ಥಿಕತೆಯನ್ನು ನಿರ್ವಹಿಸುವ ಸಮಾಜವಾದಿ ಮಾದರಿ. ಎರಡನೆಯದು, ಖಾಸಗಿ ಒಡೆತನವೇ ಪ್ರಧಾನವಾಗಿರುವ ಬಂಡವಾಳವಾದಿ ಮಾದರಿ. ಮೂರನೆಯದು, ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವ ಹೊಂದಿರುವ, ಆದರೆ ಸರ್ಕಾರದ ಜವಾಬ್ದಾರಿ ಜಾಸ್ತಿ ಇರುವ ಜವಾಹರಲಾಲ್ ನೆಹರೂ ಅವರು ರೂಪಿಸಿದ ಮಿಶ್ರ ಅರ್ಥವ್ಯವಸ್ಥೆಯ ಮಾದರಿ. ಈ ಮಾದರಿಯನ್ನು ಪಿ.ವಿ.ನರಸಿಂಹ ರಾವ್-ಮನಮೋಹನ್ ಸಿಂಗ್ ಆರ್ಥಿಕ ನೀತಿಯು ಬಹುಮಟ್ಟಿಗೆ ಬಂಡವಾಳವಾದಿ ಮಾದರಿಯ ಆರ್ಥಿಕತೆಯಾಗಿ ರೂಪಿಸಿತು. ಆದರೆ ಬದಲಾಗಿರುವ ಸನ್ನಿವೇಶದಲ್ಲಿ ಬಂಡವಾಳವಾದಿ ಮಾದರಿಯು ಯಥಾರೀತಿಯಲ್ಲಿ ಮುಂದುವರಿಯುವುದು ಕಷ್ಟವಾಗುತ್ತದೆ. ಏಕೆಂದರೆ ಕೊರೊನಾದಿಂದ ಆಗಿರುವ ಹಾನಿಗಳು ಅಂತರ ರಾಷ್ಟ್ರೀಯವಾದವುಗಳು. ಭಾರತದೊಂದಿಗೆ ಆರ್ಥಿಕ ಸಂಬಂಧಗಳು ಹೆಚ್ಚಾಗಿರುವ ರಾಷ್ಟ್ರಗಳು ತಳೆಯುವ ಆರ್ಥಿಕ ಧೋರಣೆಗಳಿಗೆ ಹೊಂದಿಕೊಳ್ಳುವ ಹಾಗೆ ಆರ್ಥಿಕ ಪರಿಕಲ್ಪನೆಗಳನ್ನು ರಚಿಸಬೇಕಾಗುತ್ತದೆ. ಆಗ ಇಡೀ ರಾಷ್ಟ್ರವನ್ನು ಸಮಗ್ರವಾಗಿ ಪ್ರತಿನಿಧಿಸುವ ಒಕ್ಕೂಟ ಸರ್ಕಾರವು ಆರ್ಥಿಕ ಪರಿಕಲ್ಪನೆಗಳ ರೂಪಿಸುವಿಕೆಯ ನಾಯಕತ್ವವನ್ನು ಪಡೆದುಕೊಳ್ಳಬೇಕಾಗುತ್ತದೆ.

ಕುಸಿದ ಅಥವಾ ಕುಸಿಯುತ್ತಿರುವ ಆರ್ಥಿಕತೆಯಲ್ಲಿ ಬಂಡವಾಳವಾದವು ಯಶಸ್ವಿಯಾಗುವುದಿಲ್ಲ ಎನ್ನಲು ವಿಶ್ವದ ಮಹಾನ್ ಬಂಡವಾಳವಾದಿ ಆರ್ಥಿಕತೆಯಾದ ಅಮೆರಿಕದ ಅನುಭವಗಳಿವೆ. 1928ರ ಜಾಗತಿಕ ಆರ್ಥಿಕ ಮುಗ್ಗಟ್ಟು ಸಂಭವಿಸಿದಾಗ ಅಧ್ಯಕ್ಷ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಅವರು ಸಮಾಜವಾದಿ ನಿರ್ಧಾರಗಳನ್ನು ತೆಗೆದುಕೊಂಡರು. ಹತ್ತು ವರ್ಷಗಳ ಅವಧಿಯ ಸಮಾಜವಾದಿ ಕಾರ್ಯಕ್ರಮಗಳ ನಂತರ ಅಲ್ಲಿನ ಆರ್ಥಿಕತೆ ಸ್ಥಿರತೆಗೆ ಬಂತು. ಮತ್ತೆ ಬಂಡವಾಳವಾದಿ ಆರ್ಥಿಕತೆಯನ್ನು ಜಾರಿಗೆ ತರಲಾಯಿತು. ಆರ್ಥಿಕತೆ ಹದಗೆಟ್ಟಾಗ ಯಾವ ಆರ್ಥಿಕತೆಯೂ ಬಂಡವಾಳವಾದಿ ಉಪಕ್ರಮಗಳ ಮೂಲಕವೇ ಮೇಲೆದ್ದ ಉದಾಹರಣೆಗಳಿಲ್ಲ. ಆದರೆ ಈಗ ಜಾಗತಿಕ ಸಂಸ್ಕೃತಿಯೇ ಒಂದು ಮಿಶ್ರ ಸಂಸ್ಕೃತಿಯಾಗಿರುವ ಹಾಗೆ ಆರ್ಥಿಕ ರಚನೆಗಳೂ ಮಿಶ್ರ ಮಾದರಿಯವೇ ಆಗುವುದು ಅವಶ್ಯಕವಾಗಿದೆ.

ಮಿಶ್ರ ಆರ್ಥಿಕತೆಯಾದಾಗಲೂ ನೆಹರೂ ಅವರ ಕಾಲಮಾನದ ಆರ್ಥಿಕತೆಯ ಪರಿಕಲ್ಪನೆಗಳೇ ಈಗ ಉಪಯುಕ್ತವಾಗಲಾರವು. ಅಂದಿನ ಜನಸಂಖ್ಯೆ ಮತ್ತು ಸಂಪನ್ಮೂಲಗಳ ಸ್ವರೂಪ ಇಂದಿಗಿಂತ ಭಿನ್ನವಾಗಿದ್ದವು. ಅಂದಿನ ಕಾಲದಲ್ಲಿ ಉತ್ಪಾದನಾ ಘಟಕಗಳು ಇರಲಿಲ್ಲ. ಆದ್ದರಿಂದ ಘಟಕಗಳ ಸ್ಥಾಪನೆಯಾಗುವ ತನಕ ನಿರ್ವಹಣೆಯ ಜವಾಬ್ದಾರಿ ಇರಲಿಲ್ಲ. ಘಟಕ ಸ್ಥಾಪನೆಯಾದ ಕೂಡಲೇ ಉತ್ಪಾದನೆಯೂ ಪ್ರಾರಂಭವಾಯಿತು. ಹೀಗೆ ಅದು ಬೆಳೆಯುತ್ತಾ ಬಂದ ಆರ್ಥಿಕತೆಯಾಗಿತ್ತು. ಈಗಿನ ಸಮಸ್ಯೆ ಅದಲ್ಲ.

ಕಾರ್ಯನಿರ್ವಹಿಸದೆ ಇರುವ ಮತ್ತು ಮುಂದೆಯೂ ತಕ್ಷಣವೇ ಕಾರ್ಯನಿರ್ವಹಿಸಲು ಆಗದ ಉತ್ಪಾದನಾ ಘಟಕಗಳ ನಿರ್ವಹಣಾ ವೆಚ್ಚವೇ ಬಹುದೊಡ್ಡ ಹೊರೆಯಾಗುತ್ತದೆ. ಎಂದಾದರೂ ಈ ಘಟಕಗಳೆಲ್ಲ ಪೂರ್ಣ ಪ್ರಮಾಣದಲ್ಲಿ ಮರು ಉತ್ಪಾದನೆಗೆ ತೊಡಗುತ್ತವೆ. ಆದರೆ ಅವುಗಳ ಉತ್ಪಾದನೆಗೆ ಮಾರುಕಟ್ಟೆ ಉಳಿಯುತ್ತದೆ ಎಂಬ ಖಾತರಿ ಇಲ್ಲ. ಏಕೆಂದರೆ ಕೊರೊನಾದ ಪರಿಣಾಮವಾಗಿ ಜನರ ಆದಾಯ ಮತ್ತು ಅಭಿರುಚಿ ಬದಲಾಗುತ್ತವೆ. ಆಗ ಬದಲಾದ ಬೇಡಿಕೆಯ ಸ್ವರೂಪಕ್ಕೆ ಅನುಗುಣವಾಗಿ ಆರ್ಥಿಕ ಘಟಕಗಳನ್ನು ಮರುವಿನ್ಯಾಸಗೊಳಿಸಬೇಕಾಗುತ್ತದೆ. ಆಗ ಕೆಲವೊಂದು ಉತ್ಪಾದನಾ ತಂತ್ರಗಳು ಮತ್ತು ಉತ್ಪಾದನಾ ಯಂತ್ರಗಳು ಬದಲಾಗಲೇಬೇಕು. ತಂತ್ರಗಳು ಬದಲಾದಾಗ ಕೆಲವು ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಾರೆ. ಕೆಲವರು ಉದ್ಯೋಗ ಪಡೆಯುತ್ತಾರೆ. ಯಂತ್ರಗಳು ಬದಲಾದಾಗ ಹಳೆಯ ಯಂತ್ರಗಳು ನಷ್ಟವಾಗಿ, ಹೊಸ ಯಂತ್ರಗಳು ಬರುವುದರಿಂದ ಹಣಕಾಸಿನ ಒತ್ತಡ ಉಂಟಾಗುತ್ತದೆ. ಅದರಿಂದಾಗಿ ಉತ್ಪಾದನಾ ವೆಚ್ಚ ಜಾಸ್ತಿಯಾಗುತ್ತದೆ. ಅದರ ಪರಿಣಾಮ ಬೆಲೆ ಏರಿಕೆ. ಬೆಲೆ ಏರಿಕೆಯನ್ನು ತಡೆದುಕೊಳ್ಳುವ ಹಾಗೆ ವೇತನ ಏರಿಕೆಯಾಗಬೇಕು ಅಥವಾ ದುರ್ಬಲ ಉತ್ಪಾದನಾ ಘಟಕಗಳನ್ನು ಸರ್ಕಾರ ತಾನು ಖರೀದಿಸಿ ಲಾಭದಾಯಕವಾಗುವ ಹಾಗೆ ಮಾಡಬೇಕಾಗುತ್ತದೆ.

ಈ ಸನ್ನಿವೇಶವನ್ನು ನಿರ್ವಹಿಸಲು ಆರ್ಥಿಕತೆಯನ್ನು ಮೂರು ಸ್ವರೂಪಗಳಲ್ಲಿ ರೂಪಿಸಿಕೊಳ್ಳಬೇಕು. ಒಂದು, ಜಾಗತೀಕರಣ ಒಡಂಬಡಿಕೆಗೆ ಅನುಗುಣವಾಗಿ ಅಂತರರಾಷ್ಟ್ರೀಯ ಬಂಡವಾಳವಾದಿ ಮಾದರಿಯದು. ಎರಡನೆಯದು, ನೆಹರೂ ಅವರ ಪರಿಕಲ್ಪನೆಯ ಮಿಶ್ರ ಆರ್ಥಿಕತೆ. ಇದು ಮಧ್ಯಮ ಹಂತದ್ದು. ಮೂರನೆಯದು ತಳಮಟ್ಟದ್ದು. ಇಲ್ಲಿಗೆ ಗಾಂಧೀಜಿಯವರ ಆರ್ಥಿಕ ಪರಿಕಲ್ಪನೆಗಳನ್ನು ಸಹಕಾರಿ ಸಂಘಗಳ ರೂಪದಲ್ಲಿ ತರಬೇಕು. ಸಾಮಾನ್ಯವಾಗಿ ಸಹಕಾರಿ ಸಂಘಗಳು ಮಾರುಕಟ್ಟೆಯ ಸಮಸ್ಯೆಗಳಿಂದಾಗಿ ಸೋಲುತ್ತವೆ ಎಂಬುದನ್ನು ಗಮನಿಸಬೇಕು. ಈ ಸಮಸ್ಯೆಯನ್ನು ನಿವಾರಿಸಲು ಗ್ರಾಮ ಮತ್ತು ಸಣ್ಣ ಪೇಟೆ ಹಾಗೂ ಜಿಲ್ಲಾ ಕೇಂದ್ರಗಳ ನಡುವೆ ಪಂಚಾಯತ್ ರಾಜ್ ವ್ಯವಸ್ಥೆಯ ಅಧೀನದಲ್ಲಿ ವ್ಯವಸ್ಥೆಯನ್ನು ಸಂಘಟಿಸಬೇಕು. ಅದರ ನಿರ್ವಹಣಾ ಕ್ರಮದ ಉದಾಹರಣೆಯನ್ನು ಈ ಕೆಳಗಿನಂತೆ ಹೇಳಬಹುದು:



ಹೋಟೆಲ್ ಮ್ಯಾನೇಜ್‌ಮೆಂಟ್ ಪದವಿ ಪಡೆದು ಬಂದಾಗ ಹೋಟೆಲು ಮಾಣಿ ಎಂಬ ಅಗೌರವದ ಸಂಬೋಧನೆ ಹೊರಟು ಹೋಗಿ, ಅದು ವಿದ್ಯಾವಂತರು ಕೈಗೊಳ್ಳಬಹುದಾದ ಗೌರವಾನ್ವಿತ ಉದ್ಯೋಗವಾಯಿತು. ಇಂದಿನ ಸನ್ನಿವೇಶದಲ್ಲಿ ಜಿಲ್ಲಾ ಮಟ್ಟದಲ್ಲಿ ಕೃಷಿ ಉದ್ಯೋಗಗಳನ್ನು ಕಲಿಸುವ ಡಿಪ್ಲೊಮಾ ಕೋರ್ಸ್‌ನ ರೀತಿಯ ಕೋರ್ಸ್ ಶುರು ಮಾಡಬೇಕು. ಅಲ್ಲಿ ಅಭ್ಯಾಸ ಮಾಡಿ ಬಂದಾಗ ಕೃಷಿ ಕಾರ್ಮಿಕರ ಅಶಿಸ್ತು ಕಡಿಮೆಯಾಗುತ್ತದೆ. ಉದ್ಯೋಗ ಗೌರವಾನ್ವಿತವಾಗುತ್ತದೆ. ಹೀಗೆ ಕಲಿತವರು ಗ್ರಾಮ ಪಂಚಾಯಿತಿಯಲ್ಲಿ ಹೆಸರು ನೋಂದಾಯಿಸಬೇಕು. ಕೃಷಿಕರು ತಮಗೆ ಬೇಕಾಗುವ ಕೆಲಸಗಾರರನ್ನು ಪಂಚಾಯಿತಿಯ ಮೂಲಕ ಪಡೆಯುವಂತೆ ಆಗಬೇಕು. ಆಗ ಗ್ರಾಮ ಪಂಚಾಯಿತಿ ಕೂಡ ಸಶಕ್ತ ಆಗುತ್ತದೆ. ಆರ್ಥಿಕತೆಯ ತಳಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ.

ಎರಡನೆಯದು ಉತ್ಪಾದನಾ ಘಟಕಗಳು. ಭಾರತದ ಬಳಿ ಈಗಲೂ ಸ್ವಂತ ಕೌಶಲದ ಉತ್ಪಾದನೆಗಳಿವೆ. ಗ್ರಾಮದಲ್ಲಿ ಉತ್ಪಾದನೆ, ತಾಲ್ಲೂಕು ಮತ್ತು ಜಿಲ್ಲಾ ಮಾರುಕಟ್ಟೆ ಇರಬೇಕು. ಜಿಲ್ಲಾ ಮಾರುಕಟ್ಟೆಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಒಯ್ಯುವ ವಿಚಾರ ಬಂದಾಗ ಬಹುರಾಷ್ಟ್ರೀಯ ಕಂಪನಿಗಳಿಗೆ ಸಂಪರ್ಕ ಕಲ್ಪಿಸಬೇಕು. ಈಗ ಬಂದಿರುವ ನೂತನ ಕೃಷಿ ಕಾಯ್ದೆಯಲ್ಲಿ ಏನು ಬೆಳೆಯಬೇಕೆಂದು ರೈತರಿಗೆ ಸೂಚಿಸಲು ಕಂಪನಿಗಳಿಗೆ ಅವಕಾಶವಿದೆ. ಕೃಷಿಯ ವಿಚಾರಕ್ಕೆ ಕಂಪನಿಗಳು ಸೂಚಿಸಿದಂತೆ ಬೆಳೆಯುವುದು ಸೂಕ್ತವಲ್ಲ. ಆದರೆ ಸೂಚನೆ ಆಧಾರಿತ ಉತ್ಪಾದನೆಯು ಕೃಷಿಯೇತರ ಗ್ರಾಮೀಣ ಉತ್ಪಾದನೆಗಳ ವಿಚಾರದಲ್ಲಿ ಯಶಸ್ವಿಯಾಗುತ್ತದೆ. ಆಗ ಕೃಷಿರಂಗ ತಾನೇ ತಾನಾಗಿ ಸಬಲೀಕರಣವಾಗುತ್ತದೆ. ಆರ್ಥಿಕತೆಯ ತಳಮಟ್ಟದಲ್ಲಿ ಚಟುವಟಿಕೆಗಳು ಜಾಸ್ತಿಯಾಗಿ ಆರ್ಥಿಕತೆಗೆ ಮೇಲ್ಮುಖಿಯಾದ ಚಲನೆ ಸಿಗುತ್ತದೆ.

ಮಧ್ಯದ ಹಂತದಲ್ಲಿ ಆ ಕಡೆ ಈ ಕಡೆ ಎರಡನ್ನೂ ಉಸ್ತುವಾರಿ ಮಾಡಲು ನೆಹರೂ ಅವರ ಪರಿಕಲ್ಪನೆಯ ಮಾದರಿಯ ಆರ್ಥಿಕ ರಚನೆಗಳಿರಬೇಕು. ಈ ಹಂತದಲ್ಲಿ ಮಾರುಕಟ್ಟೆಯ ಮೇಲೆ ಸರ್ಕಾರ ನಿಯಂತ್ರಣವನ್ನು ತಂದುಕೊಳ್ಳಬೇಕಾಗುತ್ತದೆ. ಆಗ ಸರ್ಕಾರದ ವರಮಾನ ಮೂಲದ ಸಮಸ್ಯೆಯನ್ನು ನಿರ್ವಹಿಸಲು ಬರುತ್ತದೆ. ಪ್ರಸ್ತುತ ತಮಿಳುನಾಡು, ತೆಲಂಗಾಣ ಮುಂತಾದೆಡೆ ಜನರಿಗೆ ಕೊಡುಗೆಗಳ ಮೂಲಕ ಪರಿಸ್ಥಿತಿಯ ನಿಭಾವಣೆಗೆ ಆದ್ಯತೆ ಕಾಣಿಸುತ್ತಿದೆ. ಆದರೆ ಕೇರಳದಲ್ಲಿ ಮಾತ್ರ ಮಾರುಕಟ್ಟೆಯ ಮೇಲೆ ಸರ್ಕಾರ ನಿಯಂತ್ರಣ ತೆಗೆದುಕೊಳ್ಳುತ್ತಿರುವುದು ಕಾಣಿಸುತ್ತಿದೆ.

ಸದ್ಯಕ್ಕೆ ಒಕ್ಕೂಟ ಸರ್ಕಾರವು ರಾಜ್ಯಗಳ ನಡುವೆ ಸಂಪರ್ಕ ರೂಪದಲ್ಲಿ ಆರ್ಥಿಕ ನಿರ್ವಹಣೆಯನ್ನು ಮಾಡುತ್ತಿದೆ. ಬಹುಶಃ ಇನ್ನೊಂದು ಆರು ತಿಂಗಳಲ್ಲಿ ಒಕ್ಕೂಟ ಸರ್ಕಾರವು ಸೂಕ್ತ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳೊಂದಿಗೆ ಮಧ್ಯಪ್ರವೇಶಿಸಲೇಬೇಕಾದ ಪರಿಸ್ಥಿತಿ ಬರಲಿದೆ. ರಾಜ್ಯಗಳ ನಡುವಿನ ಅಸಮತೋಲನವನ್ನು ಸಂತುಲಿತ ಸ್ಥಿತಿಗೆ ತಂದು ಭಾರತೀಯ ಒಕ್ಕೂಟವನ್ನು ನಡೆಸಿಕೊಂಡು ಹೋಗಲು ಸಮರ್ಪಕ ಆರ್ಥಿಕ ಪರಿಕಲ್ಪನೆಗಳನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಬೇಕಾಗುತ್ತದೆ.

ಚುರುಮುರಿ



ಸಿಂಗಲ್ ಸ್ಕೀಮ್

• ಮಣ್ಣೆರಾಜು

ಚಟ್ನಹಳ್ಳಿಯಲ್ಲಿ ಕೋವಿಡ್ ಉಲ್ಬಣವಾಗಿತ್ತು. ಪರಿಶೀಲನೆಗೆ ಶಾಸಕರು ಬಂದಿದ್ದರು.

'ಎಲ್ಲರೂ ಮಾಸ್ಕ್ ಧರಿಸಿ, ಮನೆಯಿಂದ ಹೊರಬರಬೇಡಿ, ಸೋಂಕಿತರು ಮನೆಯಲ್ಲಿರಬೇಡಿ, ಕೋವಿಡ್ ಕೇರ್ ಸೆಂಟರ್ ಸೇರಿಕೊಳ್ಳಿ' ಎಂದು ಜನಜಾಗೃತಿ ಮೂಡಿಸಿದರು.

'ನಾವೇನೋ ಮನೆಯಲ್ಲಿರುತ್ತೇವೆ, ಮಕ್ಕಳನ್ನು ದನ ಕಟ್ಟಿದಂತೆ ಮನೆಯಲ್ಲಿ ಕಟ್ಟಿಹಾಕಲಾಗುತ್ತಾ ಸಾರ್? ಪ್ರೈಮರಿ ಶಾಲೆ ಮಕ್ಕಳು ಸ್ಕೂಲ್ ಮುಖ ನೋಡಿ ವರ್ಷ ಆಯ್ತು' ಅಂದ ಒಬ್ಬ.

'ಕೊರೊನಾ ಕಾಲದಲ್ಲಿ ಶಿಕ್ಷಕರೇ ಮಕ್ಕಳ ಮನೆಗೆ ಬಂದು ಪಾಠ ಹೇಳುವ ವ್ಯವಸ್ಥೆ ಜಾರಿಗೆ ತನ್ನಿ' ಎಂದ ಇನ್ನೊಬ್ಬ.

'ಸದ್ಯಕ್ಕೆ ಮುಚ್ಚಿರುವ ಶಾಲೆಯನ್ನು ತೆರೆಯುತ್ತೇವೆ' ಅಂದ್ರು ಶಾಸಕರು.

'ಸ್ಕೂಲ್ ಶುರು ಮಾಡ್ತೀರಾ ಸಾರ್?'

'ಅಲ್ಲ, ಸ್ಕೂಲನ್ನು ಕೋವಿಡ್ ಕೇರ್ ಸೆಂಟರ್ ಮಾಡಿ ಸೋಂಕಿತರಿಗೆ ಅಡ್ಮಿಷನ್ ಕೊಡ್ತೀವಿ, ಅಲ್ಲಿ ಕೊರೊನಾ ಪಾಠ ಹೇಳ್ತೀವಿ'.

'ಶಿಕ್ಷಣ ಇಲಾಖೆಗೆ ಕೊರೊನಾ ಪಾಠ ಹೇಳುವ ಕೆಲಸ ವಹಿಸ್ತೀರಾ?'

'ಕೊರೊನಾ ಕಂಟ್ರೋಲಿಗೆ ಬರೋವರೆಗೂ ಎಲ್ಲಾ ಇಲಾಖೆಗಳನ್ನು ಕೋವಿಡ್ ಕಾರ್ಯಕ್ಕೆ ಬಳಸಿಕೊಳ್ತೀವಿ. ಆರೋಗ್ಯ ಇಲಾಖೆ ಇಂಜೆಕ್ಷನ್, ಮಾತ್ರೆ ಕೊಡುತ್ತೆ, ಆಹಾರ ಇಲಾಖೆ ಆಹಾರ ವಿತರಿಸುತ್ತದೆ. ಪಶು ಇಲಾಖೆ ಸೋಂಕಿತರ ದನಕರು, ಕುರಿಮೇಕೆಗಳ ಮೇವು, ನೀರಿನ ವ್ಯವಸ್ಥೆ ಮಾಡುತ್ತೆ, ಕೃಷಿ ಇಲಾಖೆ ಸೋಂಕಿತರ ಖಾಲಿ ಹೊಲದಲ್ಲಿ ಕೃಷಿ ಮಾಡುತ್ತೆ...'

'ಅಬಕಾರಿ ಇಲಾಖೆ ಎಣ್ಣೆ ಹಂಚುವುದಾ ಸಾರ್?'

'ಇಲ್ಲ, ಸ್ಯಾನಿಟೈಸರ್ ಹಂಚುತ್ತದೆ, ಕುಡಿಯಲು ಅಲ್ಲ, ಕೈ ತೊಳೆದುಕೊಳ್ಳಲು...' ರೇಗಿದರು ಶಾಸಕರು.

'ಹೀಗಾದರೆ ಇಲಾಖೆಗಳ ಮೂಲ ಯೋಜನೆಗಳು ಮೂಲೆಗುಂಪಾಗುತ್ತವೆ ಸಾರ್?'

'ಹೆಲ್ತ್ ಎಮರ್ಜೆನ್ಸಿ ಅಂತ ಎಲ್ಲಾ ಇಲಾಖೆಗಳ ಅನುದಾನ, ಸಿಬ್ಬಂದಿ ಬಳಸಿಕೊಂಡು ಕೋವಿಡ್ ಕಂಟ್ರೋಲ್ ಮಾಡುವ ಸಿಂಗಲ್ ಸ್ಕೀಂ ಜಾರಿಗೆ ತಂದಿದ್ದೇವೆ...' ಎನ್ನುತ್ತಾ ಶಾಸಕರು ಕಾರು ಹತ್ತಿ ಹೊರಟರು.

ಸಂಗತ

ಇರಲಿ ಚಿತ್ತ, ಉದ್ಯೋಗ ರಕ್ಷಣೆಯತ್ತ

ಮಾಡು ಇಲ್ಲವೇ ಮಡಿ ಎಂಬಂತಹ ಸಂದರ್ಭ ಸೃಷ್ಟಿಯಾಗಿದೆ ಇಂದು. ಉದ್ಯೋಗ ಸೃಷ್ಟಿ ಮಾಡಿ. ಅದುವೇ ನಮ್ಮ ಕೈಗಾರಿಕಾ ನೀತಿಯಾಗಲಿ

• ಪ್ರಸನ್ನ

ಮಾನ್ಯ ಬಿ.ಎಸ್. ಯಡಿಯೂರಪ್ಪನವರೇ,

ದೇಶವು ಮಹಾಮಾರಿ ಪಿಡುಗೊಂದನ್ನು ನಿರ್ವಹಿಸಲು ಹರಸಾಹಸ ಪಡುತ್ತಿದೆ. ತಾವೂ ಕರ್ನಾಟಕದ ಜನತೆಯನ್ನು ರಕ್ಷಿಸಿಕೊಳ್ಳಲು ಸಾಹಸಪಡುತ್ತಿದ್ದೀರಿ. ನಾವೆಲ್ಲರೂ ತಮ್ಮೀ ಪ್ರಯತ್ನದಲ್ಲಿ ಜೊತೆಗಿದ್ದೇವೆ. ಆದರೆ ಕೊರೊನಾ ಮಹಾಮಾರಿಗಿಂತ ಭಯಾನಕವಾದ ಪಿಡುಗೊಂದನ್ನು ನಾವು ಸಮಾಜದ ಒಡಲಲ್ಲಿಟ್ಟುಕೊಂಡು ಸಲಹುತ್ತಿದ್ದೇವೆ. ಅದುವೇ ಉದ್ಯೋಗ ನಾಶ; ಅದರಲ್ಲೂ ಗ್ರಾಮೀಣ ಉದ್ಯೋಗಗಳ ನಾಶವಾಗಿದೆ; ಅದರಲ್ಲೂ ಶ್ರಮದ ಉದ್ಯೋಗಗಳ ನಾಶವಾಗಿದೆ.

ತಮಗಿದರ ಅರಿವಿಲ್ಲ ಎಂಬ ಉದ್ಧಟತನದಿಂದ ಆಡುತ್ತಿರುವ ಮಾತಲ್ಲವಿದು. ಅರಿವಿದೆ. ಆದರೆ ಒಂದು ಪ್ರತ್ಯೇಕಿತ ಸಮಸ್ಯೆಯತ್ತ ನಮ್ಮೆಲ್ಲ ಗಮನವನ್ನೂ ಕೇಂದ್ರೀಕರಿಸಿ ಕಾರ್ಯಪ್ರವೃತ್ತರಾದಾಗ, ಯುದ್ಧ ಹೂಡುವ ರೀತಿಯಲ್ಲಿ ಕಾರ್ಯಪ್ರವೃತ್ತರಾದಾಗ, ಅತಿರೇಕಕ್ಕೆ ಒಳಗಾಗುವ ಅಪಾಯವಿರುತ್ತದೆ; ಸಮಾಜದ ಸಮಗ್ರ ಹಿತವನ್ನು ಮರೆತು ಉದ್ವಿಗ್ನತೆಯಿಂದ ಕಾರ್ಯನಿರ್ವಹಿಸುವ ಅಪಾಯವಿರುತ್ತದೆ; ಯುದ್ಧ ಕಲೆಯನ್ನು ಬಳಕೆ ಮಾಡುವ ಬದಲು ಯುದ್ಧೋನ್ಮಾದಕ್ಕೆ ಬಲಿಯಾಗುವ ಅಪಾಯವಿರುತ್ತದೆ; ಉದ್ಯೋಗ, ಆಹಾರ, ಆರೋಗ್ಯ, ನೆಲ, ಜಲ ಎಲ್ಲವನ್ನೂ ಕಡೆಗಣಿಸಿ ಕೆಲಸ ಮಾಡುವ ಅಪಾಯವಿರುತ್ತದೆ. ಪ್ರತ್ಯೇಕಿತವಾದ ಜ್ಞಾನ, ಪ್ರತ್ಯೇಕಿತವಾದ ತಾತ್ವಿಕತೆ, ಪ್ರತ್ಯೇಕಿತವಾದ ಅಭಿವೃದ್ಧಿಮಾದರಿಗಳನ್ನು ಆರಾಧಿಸತೊಡಗಿದ್ದೇವೆ ನಾವು.

ಕೋವಿಡ್ ನಿರ್ವಹಣೆಯನ್ನೇ ತೆಗೆದುಕೊಳ್ಳಿ. ಎಲ್ಲವನ್ನೂ ಈ ತಜ್ಞರ ಕೈಗೊಪ್ಪಿಸಿ ಕುಳಿತಿದ್ದೇವೆ ನಾವು. ಇವರು ಕೋವಿಡ್ ತಜ್ಞರು ಎಂಬ ಬಗ್ಗೆ ಅನುಮಾನವಿಲ್ಲ ನನಗೆ. ಇವರು ಪ್ರತ್ಯೇಕಿತ ತಜ್ಞರು ಎಂದಷ್ಟೆ ಹೇಳುತ್ತಿದ್ದೇನೆ. ಬಡತನ, ಗ್ರಾಮೀಣ ಪರಿಸ್ಥಿತಿ, ಉದ್ಯೋಗ ಪರಿಸ್ಥಿತಿ ಇವರಿಗೆ ತಿಳಿಯದು. ಸದರಿ ಪಿಡುಗನ್ನೇ ಗಮನಿಸೋಣ. ಇದು ಬಂದದ್ದು ಮಹಾನಗರಗಳಿಗೆ. ಅಪಾರ ಜನದಟ್ಟಣೆ, ಹಣದಟ್ಟಣೆ, ಅಧಿಕಾರದಟ್ಟಣೆ, ಅಹಂಕಾರದಟ್ಟಣೆ ಇರುವ ಮಹಾನಗರಗಳಿಗೆ ರೋಗ ಬಡಿದಿದೆ. ಮಕ್ಕಳ ಕತೆಗಳಲ್ಲಿ ರಾಕ್ಷಸನ ಜೀವವು ಏಳುಸಮುದ್ರದಾಚೆ ಏಳುಕೋಟೆಯೊಳಗೆ ಪಂಜರದಲ್ಲಿ ಬಂಧಿತವಾಗಿರುವ ಗಿಳಿಯಲ್ಲಿರುವಂತೆ, ನಗರಗಳ ದಟ್ಟಣೆಯಲ್ಲಿಯೇ ಅಡಗಿರಬಹುದಲ್ಲವೇ ಕೋವಿಡ್ ಮರ್ಮ? ಉತ್ತಮ ಬದುಕಿನ ಆಸೆ ಹೊತ್ತು ಮಹಾನಗರ ಸೇರಿದ, ಆದರೆ ಈಗ ಅಲ್ಲಿಯೇ ಬಂಧಿತವಾಗಿರುವ ನಗರಜೀವಿಯೇ ಕೋವಿಡ್‌ಮಾರಿಯನ್ನು ಒಡಲಲ್ಲಿರಿಸಿಕೊಂಡಿರುವ ಸುಂದರ ಗಿಳಿ ಇರಬಹುದಲ್ಲವೇ?

ಮಾರಿಯು ತನ್ನ ಎರಡನೇ ಅಲೆಯಲ್ಲಿ ಗ್ರಾಮೀಣ ಪ್ರದೇಶಗಳಿಗೂ ಹರಡತೊಡಗಿದೆ ನಿಜ. ದಾರಿದ್ರ್ಯ ಅತಿಯಾಗಿರುವ- ಗುಳೆ ಏಳುವ, ಬೀಳುವ, ಮತ್ತೆ ಏಳುವ ಬಡಗ್ರಾಮಗಳಿಗೆ ಹರಡತೊಡಗಿದೆ. ಆದರೆ ಇಲ್ಲಿಗೆ ದಟ್ಟಣೆಯ ರೋಗ ಮೊದಲು ಪ್ರವೇಶಿಸಿತು, ದಾರಿದ್ರ್ಯದ ದಟ್ಟಣೆಯೂ ಸೇರಿದಂತೆ ಎಂಬುದನ್ನು ಮರೆಯಬಾರದು ನಾವು. ಈ ಯುದ್ಧದಲ್ಲಿ ಅತಿಹೆಚ್ಚು ಬಳಕೆಯಾಗುತ್ತಿರುವ ಲಾಕ್‌ಡೌನ್ ಎಂಬ ಮಹಾ ಅಸ್ತ್ರದ ಬಗ್ಗೆ ಯೋಚಿಸಿ, ಇದೊಂದು ತಾತ್ಕಾಲಿಕ ಪರಿಹಾರ. ಇದೇ ರೀತಿ ಕೃತಕ ಆಮ್ಲಜನಕ, ಕೃತಕ ಸ್ಟೆರಾಯ್ಡ್, ಕೃತಕ ಸ್ಯಾನಿಟೈಸರ್ ಕೂಡ ತಾತ್ಕಾಲಿಕ ಪರಿಹಾರವೇ. ಪೊಲೀಸರ ಅತಿಯಾದ ಬಳಕೆ, ಸುಗ್ರೀವಾಜ್ಞೆಗಳ ಅತಿಯಾದ ಬಳಕೆ, ಕೇಂದ್ರೀಕೃತ ಅಧಿಕಾರದ ಅತಿಯಾದ ಬಳಕೆ ಕೂಡ. ದುರಂತವೆಂದರೆ, ದೀರ್ಘಕಾಲೀನ ಪರಿಹಾರಗಳನ್ನು ಮರೆತು ತಾತ್ಕಾಲಿಕ ಪರಿಹಾರಗಳನ್ನೇ ಬೇಕಾಬಿಟ್ಟಿಯಾಗಿ ಬಳಸತೊಡಗಿದ್ದೇವೆ. ಇತ್ತೀಚಿನ ದಶಕಗಳಲ್ಲಿ ಹೆಚ್ಚೂ ಕಡಿಮೆ ಎಲ್ಲ ಪಕ್ಷಗಳ ಎಲ್ಲ ಸಿದ್ಧಾಂತಗಳೂ ಇದನ್ನೇ ಮಾಡಿಕೊಂಡು ಬಂದಿವೆ. ಆದರೆ ಒಂದು ತಪ್ಪನ್ನು ಎಲ್ಲರೂ ಮಾಡುತ್ತಿದ್ದೇವೆ ಎಂದ ಮಾತ್ರಕ್ಕೆ ಅದು ಸರಿಯಾಗುತ್ತದೆಯೇ? ಹಾಗೆಂದೇ, ನಿಮ್ಮ ಲಕ್ಷ್ಯ ಉದ್ಯೋಗಗಳ ರಕ್ಷಣೆಯತ್ತ ಇರಬೇಕು.



ಉದ್ಯೋಗ ರಕ್ಷಣೆ ಎಂದೆ, ಉದ್ಯೋಗ ಸೃಷ್ಟಿ ಎನ್ನಲಿಲ್ಲ. ಸಹಜ ಉದ್ಯೋಗಗಳು (ನ್ಯಾಚುರಲ್ ಲೈವ್‌ಲಿಹುಡ್ಸ್) ಸಹಜವಾಗಿ ಹರಡಿಕೊಂಡಿರುತ್ತವೆ, ದಟ್ಟಣೆಗೆ ಅವಕಾಶವನ್ನೇ ನೀಡುವುದಿಲ್ಲ ಅವು. ಹೇಗೆ ಪ್ರಕೃತಿಯಲ್ಲಿ ಹುಲಿಗಳ ಸಂತಾನ ಅತಿಯಾದರೆ ಅದು ಹುಲಿಗಳನ್ನು ಸಾಯಿಸುತ್ತದೆಯೋ ಅಥವಾ ಹುಲ್ಲೆಗಳು ಅತಿಯಾಗಿರುವ ಪ್ರದೇಶಗಳಿಗೆ ಅಟ್ಟುತ್ತದೆಯೋ ಹಾಗೆಯೇ ಸಹಜ ಉದ್ಯೋಗಗಳು. ಬೆಂಗಳೂರಿನಲ್ಲಿ ದಟ್ಟೈಸಲಾರದು ಕೃಷಿ, ಕೈಮಗ್ಗ, ಚಮ್ಮಾರಿಕೆ, ಗೌಳಿಗತನ ಇತ್ಯಾದಿ. ಆದರೆ ಯಂತ್ರಗಳು ಸೃಷ್ಟಿಸಿದ್ದು, ದಟ್ಟಣೆಯನ್ನು ಬೇಡುವ ಅಸಹಜ ಉದ್ಯೋಗಗಳನ್ನು; ಲಾಭದ ದಟ್ಟಣೆಯನ್ನು ಬಯಸುವ ಉದ್ದಿಮೆಗಳನ್ನು. ಇತ್ತೀಚಿನ ದಿನಗಳಲ್ಲಿ ಲಾಭದಟ್ಟಣೆ ಬಯಸುವ ಉದ್ದಿಮೆಗಳು ಉದ್ಯೋಗಿಗಳನ್ನೇ ಬಯಸುತ್ತಿಲ್ಲ. ಯಂತ್ರೋದ್ಯಮವು ಬೆರಳೆಣಿಕೆಯ ಅಂಬಾನಿ, ಅದಾನಿಗಳ ಜೇಬನ್ನು ತುಂಬುತ್ತಿದೆ ಮಾತ್ರ.

ನೀವು ರೈತ ಕುಟುಂಬದಿಂದ ಬಂದವರು. ಸಿದ್ದರಾಮಯ್ಯನವರು ಕುರಿಗಾಹಿ ಕುಟುಂಬದಿಂದ ಬಂದವರು. ನರೇಂದ್ರ ಮೋದಿಯವರು ಗಾಣಿಗ ಕುಟುಂಬದಿಂದ, ಪಿಣರಾಯಿ ವಿಜಯನ್ ಅವರು ಸಣ್ಣ ರೈತ ಕುಟುಂಬದಿಂದ, ಲಾಲೂ ಪ್ರಸಾದ್ ಗೌಳಿಗ ಕುಟುಂಬದಿಂದ ಬಂದವರು. ಇವುಗಳಾವುವೂ ಜಾತಿಗಳಲ್ಲ ವೃತ್ತಿಗಳು. ದುರಂತವೆಂದರೆ, ಈ ಎಲ್ಲ ವೃತ್ತಿಗಳನ್ನೂ ನಾಶ ಮಾಡಿ ಜಾತಿ ಪ್ರಾಬಲ್ಯ ಮೆರೆಯುತ್ತಿದ್ದೇವೆ ನಾವು. ಮಾಡು ಇಲ್ಲವೇ ಮಡಿ ಎಂಬಂತಹ ಸಂದರ್ಭ ಸೃಷ್ಟಿಯಾಗಿದೆ ಇಂದು. ಉದ್ಯೋಗ ಸೃಷ್ಟಿ ಮಾಡಿ. ಅದುವೇ ನಮ್ಮ ಕೈಗಾರಿಕಾ ನೀತಿಯಾಗಲಿ.

ಲೇಖಕ: ನಾಟಕಕಾರ ಹಾಗೂ ಸಂಸ್ಥಾಪಕ, ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರಿ ಸಂಘ, ಭೀಮನಕೋಣೆ, ಸಾಗರ ತಾಲ್ಲೂಕು

ವಾಚಕರ ವಾಣಿ

ಹಣದುಬ್ಬರ ನಿಯಂತ್ರಣ ಅವಶ್ಯಕ

ಕೊರೊನಾ ಸೋಂಕಿನಿಂದ ದೇಶದೆಲ್ಲೆಡೆ ಅನಾರೋಗ್ಯ, ಲಾಕ್‌ಡೌನ್, ನಿರುದ್ಯೋಗ, ವೇತನ ಕುಸಿತ, ಬೇಡಿಕೆಯಲ್ಲಿನ ಕೊರತೆ, ತಗ್ಗಿದ ಹೂಡಿಕೆಯಂತಹ ಕಾರಣಗಳಿಂದ ಎಲ್ಲಾ ಬಗೆಯ ಆರ್ಥಿಕ ಚಟುವಟಿಕೆಗಳು ಕುಸಿಯುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರವು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸುವುದರ ಜೊತೆಗೆ ಸರ್ಕಾರಿ ಹೂಡಿಕೆಯನ್ನು ಹೆಚ್ಚಿಸಲು ಗಮನ ನೀಡಬೇಕು. ಅಲ್ಲದೆ, ದೇಶದಲ್ಲಿ ಹಣದ ಚಲಾವಣೆಗೆ ಕೇಂದ್ರ ಬ್ಯಾಂಕ್ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ದಿನದಿಂದ ದಿನಕ್ಕೆ ಏರುತ್ತಿರುವ ತೈಲ ಬೆಲೆಯು ಆರ್ಥಿಕತೆಯಲ್ಲಿ ಅಗತ್ಯ ಸರಕುಗಳ ಬೆಲೆ ಹೆಚ್ಚಿಸುವುದರೊಂದಿಗೆ ಹಣದುಬ್ಬರವನ್ನು ಸೃಷ್ಟಿಸುತ್ತಿದೆ. ಇದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ತಗ್ಗಿಸುತ್ತದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೈಲ ಬೆಲೆಯಲ್ಲಿ ಸ್ಥಿರತೆಯನ್ನು ತರದೇ ಹೋದರೆ ಆರ್ಥಿಕ ಪುನಶ್ಚೇತನಕ್ಕೆ ಹಣದುಬ್ಬರ ದೊಡ್ಡ ಮಾರಕವಾಗುತ್ತದೆ.

ನಿರ್ಮಲ ನಾಗೇಶ್, ಮುರುಡೇಶ್ವರ

ವಯೋಮಿತಿ ಸಡಿಲಿಸಿ, ನ್ಯಾಯ ಒದಗಿಸಿ

ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ಎಲ್ಲ ಸರ್ಕಾರಿ ಉದ್ಯೋಗ ನೇಮಕಾತಿಯನ್ನು ಸರ್ಕಾರ ತಡೆಹಿಡಿದಿದೆ ಹಾಗೂ ಹೊಸ ನೇಮಕಾತಿ ಆದೇಶಗಳನ್ನು ಹೊರಡಿಸಿಲ್ಲ. ಹೀಗಾಗಿ ವಯೋಮಿತಿ ಮೀರುವ ಅಭ್ಯರ್ಥಿಗಳಿಗೆ ಮುಂದಿನ ನೇಮಕಾತಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ತಪ್ಪುತ್ತದೆ. ಹೀಗಾಗಿ ಇಂತಹ ಅಭ್ಯರ್ಥಿಗಳಿಗೆ ಮುಂದೆ ನಡೆಯುವ ಸರ್ಕಾರಿ ಉದ್ಯೋಗ ನೇಮಕಾತಿಗಳಲ್ಲಿ ಅರ್ಜಿ ಸಲ್ಲಿಸಲು ವಯೋಮಿತಿ ಹೆಚ್ಚಿಸಿ ನ್ಯಾಯ ಒದಗಿಸಬೇಕು.

ಸದಾಶಿವ ಎಂ. ಮುರಗೋಡ, ರಾಮದುರ್ಗ, ಬೆಳಗಾವಿ

ಪ್ಯಾಕೇಜ್ ಬೇಡ, ಉದ್ಯೋಗ ಖಾತರಿ ನೀಡಿ

ಕೊರೊನಾದಿಂದ ಉದ್ಯೋಗವಿಲ್ಲದೆ ನಲುಗಿರುವ 'ಬಡವರಿಗೆ ಉದ್ಯೋಗ ಕೊಡಿ' ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಿದೆ (ಪ್ರ.ವಾ., ಜೂನ್ 2). ಸರ್ಕಾರದ ಮಹತ್ವಾಕಾಂಕ್ಷೆಯ ಉದ್ಯೋಗ ಖಾತರಿ ಯೋಜನೆಯು ಅರ್ಹರನ್ನು ತಲುಪದೆ ಸದ್ದಿಲ್ಲದೆ ನೆಲ ಕಚ್ಚುತ್ತಿದೆ. ಬಹುತೇಕ ಕೂಲಿ ಕಾರ್ಮಿಕರಿಗೆ ಈ ಯೋಜನೆಯಿಂದ ಕೆಲಸ ಹೇಗೆ ಪಡೆಯಬೇಕೆಂಬ ಮಾಹಿತಿ ಇರುವುದಿಲ್ಲ. ಮಾಹಿತಿ ನೀಡುವ ಅಧಿಕಾರಿ ವರ್ಗ 'ನಮಗೇಕೆ ಈ ಉಸಾಬರಿ' ಎಂಬ ನಿರ್ಲಕ್ಷ್ಯ ಧೋರಣೆ ತಾಳುತ್ತಿದೆ. ಪಂಚಾಯತ್ ರಾಜ್ ಇಲಾಖೆ ಕೂಲಿ ನಿಗದಿ ಮಾಡಿ ಕೈ ತೊಳೆದುಕೊಂಡಿದೆ.

ಬಹುತೇಕ ನಗರ ಕೂಲಿಕಾರರು ಕೆಲಸವಿಲ್ಲದೆ ಹಳ್ಳಿ ಸೇರಿರುವ ಈ ಸಮಯದಲ್ಲಿ, ಸರ್ಕಾರದ ಯಾವ ಪ್ಯಾಕೇಜ್‌ನ ಅವಶ್ಯಕತೆಯೂ ಇಲ್ಲ, ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ನೀಡಿದರೆ ಸಾಕು! ಇದರಿಂದ ಬಿಕ್ಕಟ್ಟಿನ ಸಂದರ್ಭದಲ್ಲೂ ಜನ ನೆಮ್ಮದಿಯಿಂದ ಬದುಕು ನಡೆಸುತ್ತಾರೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಪ್ರಚಾರಪ್ರಿಯ ದಾನಶೂರರು!

'ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು' ಎಂಬ ಮಾತಿಗೆ ಅರ್ಥವಿಲ್ಲ. ಏಕೆಂದರೆ.... ಈಗ ಬಹುತೇಕ ದಾನಶೂರರ ಎಡಗೈಯಲ್ಲಿ ಮೊಬೈಲ್ ಫೋನ್ ಇರುತ್ತದೆ. ಬಲಗೈ ದಾನ ಕೊಡುತ್ತಿದ್ದಂತೆಯೇ ಎಡಗೈ ಆ ದೃಶ್ಯವನ್ನು ಮೊಬೈಲ್ ಫೋನಿನ ಮೂಲಕ ಸೆರೆಹಿಡಿಯುತ್ತದೆ. ನಂತರ ಆ ದೃಶ್ಯಗಳು ದಿನಪತ್ರಿಕೆ, ಟಿ.ವಿ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರವಾಗಿ, ದಾನ ಸ್ವೀಕರಿಸಿದವರ ಮಾನ ಬಹಿರಂಗವಾಗಿ ಹರಾಜಾಗುತ್ತದೆ. ಬಲಗೈ ಮಾಡಿದ ಪುಣ್ಯವನ್ನು ಹೀಗೆ ಎಡಗೈ ನಾಶಪಡಿಸದಿರಲಿ.

ಪಿ.ಜೆ.ರಾಘವೇಂದ್ರ, ಮೈಸೂರು

ಚಿಕಿತ್ಸೆ ಜೊತೆಗೆ ಊಟದ ಸವಿ

ಇಳಕಲ್‌ನ ಡಾ. ಕಡಪಟ್ಟಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಅನಾರೋಗ್ಯದ ನಿಮಿತ್ತ ಹೋಗಿದ್ದೆ. ಡಾ. ಮಹಾಂತೇಶ ಕಡಪಟ್ಟಿಯವರು ರೋಗಿಗಳಿಗೆ ಆಕ್ಸಿಮೀಟರ್ ಪ್ರಮಾಣವನ್ನು ದೃಢೀಕರಿಸುತ್ತಾ ಸ್ಥೈರ್ಯ ತುಂಬುತ್ತಿದ್ದರು. ಜೊತೆಗೆ ಆಸ್ಪತ್ರೆಯಲ್ಲಿ ಕೋವಿಡ್-19 ಸಮಯದಲ್ಲಿ ಉಚಿತ ಊಟದ ವ್ಯವಸ್ಥೆ ಕಂಡು ಬೆರಗಾದೆ. ನಿತ್ಯ ಹತ್ತಾರು ಹಳ್ಳಿಗಳಿಂದ ರೋಗಿಗಳು ಬರುತ್ತಾರೆ. ಈಗ ಇಳಕಲ್‌ನಲ್ಲಿ ಖಾನಾವಳಿಗಳು ತೆರೆದಿರುವುದಿಲ್ಲ. ಸಂಬಂಧಿಗಳಿದ್ದರೂ ಯಾರೂ ಬಂದು ಮೊದಲಿನ ದಿನಗಳಂತೆ ಊಟ ಕೊಟ್ಟು ಹೋಗುವುದಿಲ್ಲ. ಅವರಿಗೂ ಲಾಕ್‌ಡೌನ್, ಹಳ್ಳಿಯಿಂದ ಊಟ ತಂದು ಕೊಡಲು ವಾಹನದ ವ್ಯವಸ್ಥೆಯೂ ಇಲ್ಲ. ಹೀಗಾಗಿ ಆಸ್ಪತ್ರೆಯಲ್ಲಿಯೇ ಊಟದ ವ್ಯವಸ್ಥೆ ಮಾಡಲಾಗಿದ್ದು, ರುಚಿ ಶುಚಿಯಾದ ಊಟ ಕೊಡುತ್ತಿದ್ದಾರೆ. ಕೊರೊನಾ ನಿಯಮಗಳನ್ನು ಪಾಲಿಸುತ್ತಾ ಊಟಕ್ಕೆ ಮಾಡಿದ್ದ ವ್ಯವಸ್ಥೆ ಅಚ್ಚುಕಟ್ಟಾಗಿತ್ತು.

ದಿನಕ್ಕೆ 50– 60 ಜನರಿಗಾಗುವಷ್ಟು ಅಡುಗೆ ಮಾಡಿಸಿರುತ್ತಾರೆ ಎಂದರು ಅಲ್ಲಿದ್ದವರು. ಅಷ್ಟು ಜನರಿಗೆ ಊಟ ನೀಡುವುದು ಸುಲಭವಲ್ಲ. ಅದಕ್ಕೆ ಹೃದಯವಂತಿಕೆ ಬೇಕು. ಲಾಕ್‌ಡೌನ್‌ನಲ್ಲಿ ಊಟಕ್ಕಾಗಿ ಪರದಾಡುವುದನ್ನು ತಪ್ಪಿಸಿದ್ದರಿಂದ ರೋಗಿಗಳಲ್ಲಿ ಆತ್ಮಸ್ಥೈರ್ಯ ಬೆಳೆಯುತ್ತದೆ. ಅವರೊಂದಿಗೆ ಬರುವ ಪೋಷಕರೂ ಊಟಕ್ಕಾಗಿ ಅಲೆಯದೆ ಒಂದೇ ಕಡೆ ಇದ್ದು ಲಾಕ್‌ಡೌನ್ ನಿಯಮವನ್ನು ಪಾಲಿಸಿದಂತೆಯೂ ಆಗುತ್ತದೆ. ವೈದ್ಯರ ಇಂತಹ ಕಳಕಳಿ ಕಂಡು ನಾನೂ ಹೊಟ್ಟೆ ತುಂಬಿಸಿಕೊಂಡೆ. ಡಾ. ಮಹಾಂತೇಶ ಅವರಿಗೂ ಅವರ ಪತ್ನಿ ಡಾ. ಶೋಭಾರಾಣಿಯವರಿಗೂ ವೈದ್ಯಕೀಯ ಸೇವೆಯ ಜೊತೆಗೆ ಕೊರೊನಾ ಸಂದರ್ಭದಲ್ಲಿ ಮಾಡುತ್ತಿರುವ ಸಮಾಜ ಸೇವೆಗೆ ಮನದಲ್ಲಿಯೇ ಕೃತಜ್ಞತೆ ಸಲ್ಲಿಸಿ ಹೊರಬಂದೆ.

ಲಲಿತಾ ಕೆ. ಹೊಸಪ್ಯಾಟಿ, ಹುನಗುಂದ

ರಾಮ! ರಾಮ!

'ಅರುಚಿಯೇ... ಅಭಿರುಚಿಯೇ?'
(ಡಾ. ದೊಡ್ಡರಂಗೇಗೌಡ, ಸಂಗತ, ಮೇ 21).
'ಅಮರ ಮಧುರ ಪ್ರೇಮ;
ನೀ ಬಾ ಬೇಗ ಚಂದಮಾಮ!'–
ನಾನು 15ನೆಯ ವಯಸ್ಸಿನಲ್ಲಿ ಕೇಳಿದ
ಈ ಚಿತ್ರಗೀತೆಯನ್ನು ಈಗಲೂ (82)
ಒಮ್ಮೊಮ್ಮೆ ಗುನುಗುತ್ತಿರುತ್ತೇನೆ:
'ಅಮರ ಮಧುರ ಪ್ರೇಮ...'
ಆದರೆ ಈಗಿನ ಸಿನಿಮಾ ಹಾಡುಗಳೊ?
ರಾಮ! ರಾಮ!

ಸಿ.ಪಿ.ಕೆ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತದಲ್ಲಿ ಸಾಮಾಜಿಕ ಮಾಧ್ಯಮ ಬಳಕೆದಾರರ ಸಂಖ್ಯೆ (ಅಂದಾಜು)

ವಾಟ್ಸ್‌ಆ್ಯಪ್ ಬಳಕೆದಾರರು	ಯೂಟ್ಯೂಬ್ ಬಳಕೆದಾರರು	ಫೇಸ್‌ಬುಕ್ ಬಳಕೆದಾರರು	ಇನ್‌ಸ್ಟಾಗ್ರಾಂ ಬಳಕೆದಾರರು	ಟ್ವಿಟರ್ ಬಳಕೆದಾರರು	ಕೂ ಬಳಕೆದಾರರು
53 ಕೋಟಿ	44.8 ಕೋಟಿ	41 ಕೋಟಿ	21 ಕೋಟಿ	1.75 ಕೋಟಿ	60 ಲಕ್ಷ



ಸಾಮಾಜಿಕ ಮಾಧ್ಯಮಗಳಿಗೆ ಮೂಗುದಾರ

‘ಹೊಸ ಐಟಿ ನಿಯಮ-2021’ ಎಂದೇ ಗುರುತಿಸಲಾಗುವ, ‘ಮಧ್ಯವರ್ತಿ ಸಂಸ್ಥೆಗಳ ಮಾರ್ಗಸೂಚಿ ಮತ್ತು ಡಿಜಿಟಲ್ ಮಾಧ್ಯಮಗಳಿಗೆ ನೈತಿಕ ನಿಯಮಗಳು- 2021’ ಮೇ 26ರಿಂದ ಜಾರಿಯಾಗಿವೆ. ಡಿಜಿಟಲ್ ಮಾಧ್ಯಮಗಳು, ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳನ್ನು ಗಮನದಲ್ಲಿಟ್ಟು ಫೆಬ್ರುವರಿಯಲ್ಲಿ ರೂಪಿಸಲಾಗಿದ್ದ ಈ ನಿಯಮಗಳ ಜಾರಿಗೆ ಮೂರು ತಿಂಗಳ ಕಾಲಾವಕಾಶವನ್ನು ಸಂಸ್ಥೆಗಳಿಗೆ ನೀಡಲಾಗಿತ್ತು.

50 ಲಕ್ಷಕ್ಕೂ ಹೆಚ್ಚು ನೋಂದಾಯಿತ ಬಳಕೆದಾರರನ್ನು ಹೊಂದಿರುವ ಸಂಸ್ಥೆಗಳು ಹೊಸ ಕಾನೂನುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್ ಆ್ಯಪ್, ಕೂ ಮುಂತಾದ ಜಾಲತಾಣಗಳು ಇದರ ವ್ಯಾಪ್ತಿಗೆ ಬರುತ್ತವೆ.

ಏನು ಹೇಳುತ್ತದೆ ಹೊಸ ಕಾನೂನು?

- ದೇಶದ ಸಮಗ್ರತೆ, ಭದ್ರತೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಪೋಸ್ಟ್‌ಗಳ ಮೂಲ ಯಾವುದು ಎಂದು ಪತ್ತೆ ಮಾಡಲು ಮಾಧ್ಯಮಗಳು ಸರ್ಕಾರಕ್ಕೆ ನೆರವು ನೀಡಬೇಕಾಗುತ್ತದೆ. ಜತೆಗೆ, ಕುಂದುಕೊರತೆ ನಿವಾರಣೆಯ ದೊಡ್ಡ ಜವಾಬ್ದಾರಿಯನ್ನೂ ನಿರ್ವಹಿಸಬೇಕು
- ಎಲ್ಲಾ ಸಂಸ್ಥೆಗಳು ಸ್ವಯಂ ನಿಯಂತ್ರಣದ ವಿಧಾನವನ್ನು ರೂಪಿಸಿಕೊಳ್ಳಬೇಕು
- ಪ್ರತಿ ಸಂಸ್ಥೆಯೂ ಮುಖ್ಯ ಅನುಸರಣೆ ಅಧಿಕಾರಿ, ನೋಡಲ್ ಸಂಪರ್ಕ ವ್ಯಕ್ತಿ ಮತ್ತು ನಿವಾಸಿ ಕುಂದುಕೊರತೆ ಅಧಿಕಾರಿಯನ್ನು ನೇಮಿಸಬೇಕು. ಇವರ ಮಾಹಿತಿಯನ್ನು ತಮ್ಮ ಆ್ಯಪ್, ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿ, ದೂರು ನೀಡುವ ವಿಧಾನದ ಬಗ್ಗೆಯೂ ತಿಳಿಸಬೇಕು
- ಪ್ರತಿ ಮಾಧ್ಯಮ ಸಂಸ್ಥೆಯೂ ಭಾರತದಲ್ಲಿರುವ ತನ್ನ ಕಚೇರಿಯ ವಿಳಾಸವನ್ನು ವೆಬ್‌ಸೈಟ್ ಅಥವಾ ಮೊಬೈಲ್ ಆ್ಯಪ್ ಅಥವಾ ಎರಡೂ ಕಡೆ ಪ್ರಕಟಿಸಬೇಕು
- ಪ್ರಕಟವಾದ ಯಾವುದೇ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರೆ, ದೂರು ದಾಖಲಾಗಿ 36 ಗಂಟೆಗಳೊಳಗೆ ಅದನ್ನು ತೆಗೆದುಹಾಕಬೇಕು
- ಸ್ವೀಕರಿಸಿದ ದೂರುಗಳು, ತೆಗೆದುಕೊಂಡಿರುವ ಕ್ರಮ ಹಾಗೂ ತೆಗೆದುಹಾಕಲಾಗಿರುವ ಪೋಸ್ಟ್‌ನಲ್ಲಿದ್ದ ವಿಷಯದ ಬಗ್ಗೆ ಡಿಜಿಟಲ್ ಮಾಧ್ಯಮ ಸಂಸ್ಥೆಗಳು ಪ್ರತಿ ತಿಂಗಳೂ ವರದಿ ನೀಡಬೇಕು
- ನಗ್ನತೆ, ತಿರುಚಿದ ಚಿತ್ರಗಳನ್ನು ಹೊಂದಿರುವ ಪೋಸ್ಟ್‌ಗಳ ಬಗ್ಗೆ ದೂರು ಬಂದ 24 ಗಂಟೆಗಳೊಳಗೆ ಅವುಗಳನ್ನು ತೆಗೆದುಹಾಕಬೇಕು
- ಬಳಕೆದಾರರಿಂದ ಬರುವ ದೂರಿಗೆ 24 ಗಂಟೆಯೊಳಗೆ ಪ್ರತಿಕ್ರಿಯೆ ನೀಡಬೇಕು ಮತ್ತು ದೂರು ಸ್ವೀಕರಿಸಿದ ದಿನದಿಂದ 15 ದಿನಗಳೊಳಗೆ ಕ್ರಮ ಕೈಗೊಳ್ಳಬೇಕು
- ಸರ್ಕಾರದ ಯಾವುದೇ ನೋಟಿಸ್ ಅಥವಾ ನ್ಯಾಯಾಲಯದ ತೀರ್ಪನ್ನು ತಕ್ಷಣವೇ ಜಾರಿಗೊಳಿಸಬೇಕು
- ಟ್ವಿಟರ್, ವಾಟ್ಸ್‌ಆ್ಯಪ್, ಯೂಟ್ಯೂಬ್‌ನಂಥ ಮಾಧ್ಯಮದಲ್ಲಿ ಹೊರಗಿನ ವ್ಯಕ್ತಿ ಹಾಕಿದ ಪೋಸ್ಟ್, ದತ್ತಾಂಶ ಅಥವಾ ಲಿಂಕ್‌ಗೆ ಆಯಾ ಸಂಸ್ಥೆಯನ್ನು ಹೊಣೆಗಾರನಾಗಿಸುವುದಿಲ್ಲ. ಹೊಸ ನಿಯಮಗಳ ಸೆಕ್ಷನ್ 79ರ ಅಡಿ ಈ ರಿಯಾಯಿತಿಯನ್ನು ನೀಡಲಾಗುತ್ತದೆ. ಆದರೆ, ಐಟಿ ನಿಯಮಗಳನ್ನು ಪಾಲಿಸಲು ಸಂಸ್ಥೆಯು ವಿಫಲವಾದರೆ, ಈ ರಿಯಾಯಿತಿ ತಾನಾಗಿಯೇ ರದ್ದಾಗುತ್ತದೆ ಮತ್ತು ಆಯಾ ಸಂಸ್ಥೆಯನ್ನೇ ಹೊಣೆಯಾಗಿಸಲಾಗುತ್ತದೆ

ಸುಳ್ಳು ಸುದ್ದಿ, ಅಶ್ಲೀಲ ಕಂಟೆಂಟ್‌ಗೆ ತಡೆ

ಸಾಮಾಜಿಕ ಜಾಲತಾಣ, ಆನ್‌ಲೈನ್ ಸುದ್ದಿ ಪೋರ್ಟಲ್‌ಗಳು ಸೇರಿದಂತೆ ಸುದ್ದಿ ಮತ್ತು ಪ್ರಚಲಿತ ವಿಷಯಗಳನ್ನು ಪ್ರಸಾರ ಮಾಡುವ ಎಲ್ಲಾ ವೇದಿಕೆಗಳಲ್ಲೂ ಸುಳ್ಳು ಸುದ್ದಿಗಳು ಪ್ರಸಾರವಾಗುವ ಸಾಧ್ಯತೆ ಇರುತ್ತದೆ. ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಹೊಸ ನಿಯಮಗಳು ಸುಳ್ಳು ಸುದ್ದಿಗಳು ಹರಡುವುದನ್ನು ತಡೆಯಲು ಒಂದು ವ್ಯವಸ್ಥೆಯನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳ ಮೂಲ ಕರ್ತೃ ಯಾರು ಎಂಬುದನ್ನು ಪತ್ತೆ ಮಾಡಲು ಈ ನಿಯಮಗಳು ಅವಕಾಶ ಮಾಡಿಕೊಡುತ್ತವೆ. 13 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರು ವೀಕ್ಷಿಸುವಂತಹ ಕಂಟೆಂಟ್‌ಗಳನ್ನು ಪೋಷಕರು ಲಾಕ್ ಮಾಡಲು ಅವಕಾಶ ದೊರೆಯಲಿದೆ. ಇಂತಹ ದೃಶ್ಯಗಳನ್ನು ಸಣ್ಣ ಮಕ್ಕಳು ನೋಡುವುದನ್ನು ತಪ್ಪಿಸಲು ಈ ನಿಯಮಗಳು ಅವಕಾಶ ಮಾಡಿಕೊಡುತ್ತವೆ. ಅತ್ಯಾಚಾರಕ್ಕೆ ಸಂಬಂಧಿಸಿದ ವಿಡಿಯೊ/ಚಿತ್ರಗಳು ಮತ್ತು ಮಕ್ಕಳ ಲೈಂಗಿಕ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗದಂತೆ ಸ್ವಯಂಚಾಲಿತ ವ್ಯವಸ್ಥೆಯನ್ನು ಸಾಮಾಜಿಕ ಮಾಧ್ಯಮ ಮಧ್ಯಸ್ಥ ಸಂಸ್ಥೆಗಳು ಅಭಿವೃದ್ಧಿಪಡಿಸಬೇಕು ಎಂದು ಸರ್ಕಾರ ಹೇಳಿದೆ.

ಖಾಸಗಿತನಕ್ಕೆ ಧಕ್ಕೆ, ಸರ್ಕಾರಕ್ಕೆ ಅನುಕೂಲ

ಈ ನಿಯಮಗಳಿಂದ ಜನರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ ಮತ್ತು ಇದರಿಂದ ಸರ್ಕಾರಕ್ಕೆ ಮಾತ್ರ ಅನುಕೂಲವಾಗುತ್ತದೆ ಎಂದು ತಜ್ಞರು ಹೇಳಿದ್ದಾರೆ

- ಸಾಮಾಜಿಕ ಮಾಧ್ಯಮ ಸಂಸ್ಥೆಗಳು ಸುಳ್ಳು ಸುದ್ದಿಗಳ ಸೃಷ್ಟಿಕರ್ತನನ್ನು ಪತ್ತೆ ಮಾಡಲು ಎಲ್ಲಾ ಸಂದೇಶಗಳನ್ನು ಪರಿಶೀಲಿಸಬೇಕಾಗುತ್ತದೆ. ಈಗ ಈ ಸಂದೇಶಗಳು ಮತ್ತು ದತ್ತಾಂಶಗಳು ಬಳಕೆದಾರರ ಡಿವೈಸ್‌ನಲ್ಲಿಯೇ ಸಂಗ್ರಹವಾಗುತ್ತವೆ. ಗೂಢಲಿಪಿ/ಕೋಡ್‌ನಲ್ಲಿರುವ ಈ ಸಂದೇಶವನ್ನು ಪರಿಶೀಲಿಸಲು, ಸಾಮಾಜಿಕ ಮಾಧ್ಯಮ ಮಧ್ಯಸ್ಥ ಸಂಸ್ಥೆಯು ಈ ಎಲ್ಲಾ ದತ್ತಾಂಶಗಳನ್ನು ತನ್ನ ಸರ್ವರ್‌ನಲ್ಲಿ ಸಂಗ್ರಹಿಸಬೇಕಾಗುತ್ತದೆ. ಇವುಗಳನ್ನು ಪರಿಶೀಲಿಸಲು ಡಿಸ್ಕ್ರಿಪ್ಟ್ (ಗೂಢಲಿಪಿಯನ್ನು ಲಿಪಿಯಾಗಿ ಪರಿವರ್ತಿಸಿದರೆ) ಮಾಡಿದರೆ, ಬಳಕೆದಾರರ ಖಾಸಗಿ ಸಂದೇಶ ಮತ್ತು ದತ್ತಾಂಶಗಳು ಬಹಿರಂಗವಾಗುತ್ತದೆ. ಈ ವಿವರಗಳು ಸರ್ಕಾರಕ್ಕೆ ಲಭ್ಯವಾಗುತ್ತವೆ. ಸರ್ಕಾರವು ಈ ವಿವರಗಳನ್ನು ಪಡೆದುಕೊಂಡಿದೆ ಎಂಬುದನ್ನು ಬಳಕೆದಾರರಿಗೆ ತಿಳಿಸುವ ಅವಶ್ಯಕತೆಯೇ ಇಲ್ಲ ಎಂದು ನೂತನ ನಿಯಮ ಹೇಳುತ್ತದೆ. ಇದು ಬಳಕೆದಾರರ ಅರಿವಿಲ್ಲದೇ ಅವರ ಖಾಸಗಿ ವಿವರಗಳನ್ನು ಸರ್ಕಾರ ಪಡೆದುಕೊಳ್ಳಲು ಅವಕಾಶ ಮಾಡಿಕೊಡುತ್ತದೆ
- ‘ರಾಷ್ಟ್ರೀಯ ಏಕತೆ, ಸಾರ್ವಭೌಮತೆ, ರಾಷ್ಟ್ರೀಯ ಭದ್ರತೆ, ವಿದೇಶಿ ಸಂಬಂಧ, ಕಾನೂನು ಸುವ್ಯವಸ್ಥೆ ಪಾಲನೆಗೆ ಧಕ್ಕೆ ತರುವಂತಹ ಮತ್ತು ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಹ ಕಂಟೆಂಟ್‌ಗಳಿಗೆ ಸಂಬಂಧಿಸಿದಂತೆ ಈ ನಿಯಮ ಅನ್ವಯ’ ಎಂದು ನೂತನ ನಿಯಮ ಹೇಳುತ್ತದೆ. ಆದರೆ, ಇವುಗಳಲ್ಲಿ ಬಹುತೇಕ ಅಂಶಗಳಿಗೆ ಸರಿಯಾದ ವ್ಯಾಖ್ಯಾನ ಇಲ್ಲ. ಸುಳ್ಳುಸುದ್ದಿ ಎಂದರೇನು ಎಂಬುದಕ್ಕೆ ಭಾರತದಲ್ಲಿ ಕಾನೂನುಬದ್ಧವಾದ ವ್ಯಾಖ್ಯಾನ ಇಲ್ಲ. ಸರ್ಕಾರ, ‘ಸುಳ್ಳು’ ಎಂದು ಹೇಳಿದ ಸುದ್ದಿಗಳೆಲ್ಲವೂ ಸುಳ್ಳುಸುದ್ದಿ ಎಂಬ ವರ್ಗೀಕರಣದಲ್ಲಿ ಬರುವ ಸಾಧ್ಯತೆ ಇದೆ. ಇವುಗಳನ್ನು ತೆಗೆದುಹಾಕಿ ಎಂದು ಸರ್ಕಾರವು ಆದೇಶ ನೀಡಿದರೆ ಅವುಗಳನ್ನು ತೆಗೆದುಹಾಕಬೇಕಾಗುತ್ತದೆ. ಸರ್ಕಾರವು ತನ್ನ ವಿರುದ್ಧದ ದನಿಗಳನ್ನು, ಭಿನ್ನಾಭಿಪ್ರಾಯ ಹತ್ತಿಕ್ಕಲು ಈ ನಿಯಮ ಬಳಸಿಕೊಳ್ಳುವ ಅಪಾಯವಿದೆ ಎಂದು ಪರಿಣತರು ಹೇಳುತ್ತಾರೆ
- ಆನ್‌ಲೈನ್‌ನಲ್ಲಿ ಪ್ರಸಾರವಾಗುವ ಸುದ್ದಿಗಳು ಮತ್ತು ಕಂಟೆಂಟ್‌ಗಳು ಸರ್ಕಾರದ ಸೆನ್ಸಾರ್‌ಶಿಪ್‌ಗೆ ಒಳಪಡುವ ಅಪಾಯವಿದೆ. ಆನ್‌ಲೈನ್‌ನಲ್ಲಿ ಪ್ರಕಟವಾಗುವ ಸುದ್ದಿಗಳಿಗೆ ಆಯಾ ಸಂಸ್ಥೆಗಳೇ ಸ್ವಯಂನಿಯಂತ್ರಣ ಹಾಕಿಕೊಳ್ಳಬೇಕು. ಇವುಗಳ ಮೇಲೆ ಹಲವು ಸಂಸ್ಥೆಗಳು ಒಟ್ಟುಗೂಡಿ ರಚಿಸಿಕೊಂಡ ಸ್ವಯಂ ನಿಯಂತ್ರಣ ಮಂಡಳಿ ಇರುತ್ತದೆ. ಇವುಗಳ ಮೇಲ್ವಿಚಾರಣೆಯನ್ನು ಸರ್ಕಾರದ ಮೇಲ್ವಿಚಾರಣಾ ಮಂಡಳಿ ನಡೆಸುತ್ತದೆ. ಅಂತಿಮವಾಗಿ ಸರ್ಕಾರದ ಮೇಲ್ವಿಚಾರಣಾ ಮಂಡಳಿ ಹೇಳುವ ಕಂಟೆಂಟ್‌ಗಳನ್ನು ಆನ್‌ಲೈನ್‌ನಿಂದ ತೆಗೆದುಹಾಕಬೇಕಾಗುತ್ತದೆ. ತನ್ನ ವಿರುದ್ಧದ ದನಿ ಮತ್ತು ಭಿನ್ನಾಭಿಪ್ರಾಯ ಹತ್ತಿಕ್ಕಲು ಸರ್ಕಾರವು ಇದನ್ನು ಬಳಸಿಕೊಳ್ಳಲು ಅವಕಾಶವಿದೆ. ಇದೇ ಈ ನಿಯಮಗಳ ಅತ್ಯಂತ ದೊಡ್ಡ ಅಪಾಯ ಎಂಬ ಕಳವಳ ವ್ಯಕ್ತವಾಗಿದೆ

ಸಂಸ್ಥೆಗಳಿಗೆ ಬಿಸಿ ತುಪ್ಪ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮಾಹಿತಿ ತಂತ್ರಜ್ಞಾನ ಹೊಸ ನಿಯಮಗಳು ಸಾಮಾಜಿಕ ಜಾಲತಾಣ ಸಂಸ್ಥೆಗಳ ನಿದ್ದೆಗೆಡಿಸಿವೆ. ಅವುಗಳನ್ನು ನಿರಾಕರಿಸುವಂತೆಯೂ ಇಲ್ಲ, ಅನುಸರಿಸುವಂತೆಯೂ ಇಲ್ಲ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ.

ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಆ್ಯಪ್ ಮೊದಲಾದ ವೇದಿಕೆಗಳಲ್ಲಿ ಬಳಕೆದಾರರು ಪೋಸ್ಟ್ ಮಾಡುವ ಯಾವುದೇ ‘ಮಾಹಿತಿಯ ಮೂಲ’ವನ್ನು ಸರ್ಕಾರ ಕೇಳಿದರೆ ಒದಗಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಇದಕ್ಕೆ ವಾಟ್ಸ್‌ಆ್ಯಪ್ ಭಾರಿ ಆಕ್ಷೇಪ ವ್ಯಕ್ತಪಡಿಸಿದ್ದು, ಇದನ್ನು ಪ್ರಶ್ನಿಸಿ ಕೋರ್ಟ್‌ನಲ್ಲಿ ದಾವೆಯನ್ನೂ ಹೂಡಿದೆ.

ಸಂದೇಶದ ಮೂಲವನ್ನು ಹುಡುಕಿಕೊಟ್ಟರೆ, ಬಳಕೆದಾರರ ಖಾಸಗಿತನದ ಉಲ್ಲಂಘನೆಯಾಗುತ್ತದೆ ಎಂಬುದು ವಾಟ್ಸ್‌ಆ್ಯಪ್ ಸೇರಿದಂತೆ ವಿವಿಧ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಆರೋಪ. ಬಳಕೆದಾರರ ಗೋಪ್ಯತೆ ತಮಗೆ ಮುಖ್ಯ ಎಂದಿರುವ ಸಂಸ್ಥೆಗಳು, ಸರ್ಕಾರದ ಈ ನಿಯಮವನ್ನು ಒಪ್ಪಿಲ್ಲ. ರಾಷ್ಟ್ರೀಯ ಭದ್ರತೆಯಂತಹ ವಿಚಾರಗಳಲ್ಲಿ ಮಾತ್ರ ಸಂದೇಶಗಳ ಮೂಲವನ್ನು ಕೇಳಲಾಗುವುದು ಎಂದು ಸರ್ಕಾರ ಸ್ಪಷ್ಟನೆ ನೀಡಿದೆ. ಆದರೆ ಒಂದೊಮ್ಮೆ ಈ ನಿಯಮಗಳನ್ನು ಪಾಲಿಸಲು ಒಪ್ಪಿಕೊಂಡರೆ, ಸರ್ಕಾರದ ಕೇಳಿದ ಎಲ್ಲ ಮಾಹಿತಿಯನ್ನು ನೀಡುವ ಅನಿವಾರ್ಯ ಸ್ಥಿತಿ ನಿರ್ಮಾಣವಾಗಲಿದೆ ಎಂಬುದು ಸಂಸ್ಥೆಗಳ ದಿಗಿಲು.

ತಮ್ಮ ವೇದಿಕೆಗಳಲ್ಲಿ ಬಳಕೆದಾರರು ಪೋಸ್ಟ್ ಮಾಡುವ ‘ಕಂಟೆಂಟ್’ ಏನೇ ಆಗಿದ್ದರೂ ಸಂಸ್ಥೆಗಳು ಅದಕ್ಕೆ ಜವಾಬ್ದಾರವಲ್ಲ ಎಂಬುದು ಈ ಹಿಂದೆ ಇದ್ದ ನಿಯಮ. ಈಗಿನ ಹೊಸ ನಿಯಮದ ಪ್ರಕಾರ, ಸಾಮಾಜಿಕ ಜಾಲತಾಣಗಳಿಗೆ ಇದ್ದ ಈ ‘ವಿನಾಯಿತಿ’ ಕಡಿತಗೊಳ್ಳಲಿದ್ದು, ತಮ್ಮ ವೇದಿಕೆಯಲ್ಲಿ ಪ್ರಕಟವಾಗುವ ಎಲ್ಲ ಸಂದೇಶ, ಮಾಹಿತಿಗಳ ಹೊಣೆಯನ್ನೂ ಸಂಸ್ಥೆಗಳೇ ಹೊರಬೇಕಾಗುತ್ತದೆ. ಈ ನಿಯಮ ಸಂಸ್ಥೆಗಳಲ್ಲಿ ಭೀತಿ ಮೂಡಿಸಿದೆ.

ಕೋರ್ಟ್ ಕಟಕಟೆ: 2021ರ ಫೆಬ್ರುವರಿ 25ರಂದು ಕೇಂದ್ರ ಸರ್ಕಾರವು ಹೊಸ ಕಾಯ್ದೆಗಳನ್ನು ಪ್ರಕಟಿಸಿ, ಜಾರಿಗೆ ಮೂರು ತಿಂಗಳ ಸಮಯ ನೀಡಿತ್ತು. ಈ ನಿಯಮಾವಳಿಗಳನ್ನು ವಿರೋಧಿಸಿ ಹಲವು ದೂರುಗಳು ನ್ಯಾಯಾಲಯದಲ್ಲಿ ದಾಖಲಾಗಿವೆ.

ಇಂಡಿಪೆಂಡೆಂಟ್ ಜರ್ನಲಿಸಂ ಫೌಂಡೇಷನ್, ಐ.ಟಿ. ಕಾಯ್ದೆಗಳನ್ನು ಪ್ರಶ್ನಿಸಿ ಕಳೆದ ಮಾರ್ಚ್‌ನಲ್ಲಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿತು. ಸಂಸ್ಥೆಯ ನಿರ್ದೇಶಕ ಮತ್ತು ದಿ ವೈರ್ ಸಂಸ್ಥಾಪಕ ಸಂಪಾದಕ ಎಂ.ಕೆ. ವೇಣು ಮತ್ತು ದಿ ನ್ಯೂಸ್ ಮಿನಿಟ್‌ನ ಸಂಪಾದಕಿ ಧನ್ಯಾ ರಾಜೇಂದ್ರನ್ ಅವರು ಅರ್ಜಿ ಸಲ್ಲಿಸಿದ್ದರು. ಮಾರ್ಚ್ 9ರಂದು ಹೈಕೋರ್ಟ್ ನೋಟಿಸ್ ನೀಡಿತು. ಮರುದಿನವೇ ಕೇರಳ ಹೈಕೋರ್ಟ್ ಸಹ ಕಾನೂನುಗಳನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ಸಂಬಂಧ ನೋಟಿಸ್ ನೀಡಿತು. ಈ ಕಾಯ್ದೆಗಳಲ್ಲಿ ತನ್ನ ವಿರುದ್ಧ ಯಾವುದೇ ಕ್ರಮ ಜರುಗಿಸದಂತೆ ಕೇಂದ್ರ ಸರ್ಕಾರವನ್ನು ನಿರ್ಬಂಧಿಸಬೇಕು ಎಂದು ಕೋರಿ ಅರ್ಜಿದಾರ ಸಂಸ್ಥೆ ‘ಲೈವ್‌ಲಾ’ ಕೋರಿತ್ತು.

ದೆಹಲಿ ಹೈಕೋರ್ಟ್‌ನಲ್ಲಿ ‘ದಿ ಕ್ವಿಂಟ್’ ಸಹ ಅರ್ಜಿ ಸಲ್ಲಿಸಿತ್ತು. ದಿ ಟ್ರುಥ್ ಪ್ರೊ ಫೌಂಡೇಷನ್ ಕರ್ನಾಟಕ ಹೈಕೋರ್ಟ್ ಮೊರೆ ಹೋಗಿತ್ತು. ಪ್ರವೀಣ್ ಅರಿಂಬ್ರತೋಡಿಯಿಲ್ ಎಂಬುವರು ಕೇರಳದಲ್ಲಿ ಮತ್ತೊಂದು ದಾವೆ ಹೂಡಿದರು. ಕಾಯ್ದೆ ಜಾರಿಯಾದ ದಿನವೇ ವಾಟ್ಸ್‌ಆ್ಯಪ್ ಸಹ ದೆಹಲಿ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿತು.

ನೋಡಲ್ ಅಧಿಕಾರಿ ನೇಮಿಸದ ಟ್ವಿಟರ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮಾಹಿತಿ ತಂತ್ರಜ್ಞಾನ ಹೊಸ ನಿಯಮಗಳ ಅನುಸಾರ ಟ್ವಿಟರ್ ಸಂಸ್ಥೆಯು ವಕೀಲ ಧರ್ಮೇಂದ್ರ ಚತುರ್ ಅವರನ್ನು ಕುಂದು ಕೊರತೆ ಪರಿಹಾರ ಅಧಿಕಾರಿಯನ್ನಾಗಿ ನೇಮಿಸಿದೆ. ಆದರೆ, ನಿಯಮ ಪಾಲನೆ ಮತ್ತು ನೋಡಲ್ ಅಧಿಕಾರಿಯ ನೇಮಕ ಆಗಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮೇ 26ರಂದು ಜಾರಿಗೆ ಬಂದ ನಿಯಮಗಳ ಪ್ರಕಾರ, ಈ ಎಲ್ಲ ಹುದ್ದೆಗಳ ನೇಮಕ ಕಡ್ಡಾಯ.



ಸಾಮಾಜಿಕ ಜಾಲತಾಣಗಳಾದ ಗೂಗಲ್, ಫೇಸ್‌ಬುಕ್, ವಾಟ್ಸ್‌ಆ್ಯಪ್, ಕೂ, ಶೇರ್‌ಚಾಟ್, ಟೆಲಿಗ್ರಾಮ್, ಲಿಂಕ್ಡ್‌ಇನ್ ಸರ್ಕಾರದ ಹೊಸ ನಿಯಮದ ಅನುಸಾರ ಕಂಪನಿಗಳಲ್ಲಿ ಮಾಡಲಾಗಿರುವ ಬದಲಾವಣೆ ಕುರಿತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ವರದಿಗಳನ್ನು ನೀಡಿವೆ.

ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಕಾರ, ಟ್ವಿಟರ್ ಹೊರತುಪಡಿಸಿ ಎಲ್ಲಾ ಸಾಮಾಜಿಕ ಜಾಲತಾಣ ಸಂಸ್ಥೆಗಳೂ ಕುಂದು ಕೊರತೆ ಪರಿಹಾರ ಅಧಿಕಾರಿ ಮತ್ತು ಮುಖ್ಯ ನಿಯಮ ಪಾಲನಾ ಅಧಿಕಾರಿಗಳನ್ನು ನೇಮಿಸಿವೆ.

ಟ್ವಿಟರ್, ವಾಟ್ಸ್‌ಆ್ಯಪ್, ಫೇಸ್‌ಬುಕ್ ಸೇರಿ ಎಲ್ಲಾ ಸಾಮಾಜಿಕ ಜಾಲತಾಣಗಳೂ ಕೇಂದ್ರ ಸರ್ಕಾರ ಫೆ.24 ರಂದು ಪ್ರಕಟಿಸಿರುವ ಸಾಮಾಜಿಕ ಜಾಲತಾಣಗಳ ಹೊಸ ನಿಯಮಗಳನ್ನು ಪಾಲಿಸಬೇಕು. ಜೊತೆಗೆ. ಆಕ್ಷೇಪಾರ್ಹ ಮಾಹಿತಿಗಳ ನಿರ್ವಹಣೆ, ಮಾಸಿಕ ನಿಯಮ ಪಾಲನಾ ವರದಿ ನಿರ್ವಹಣೆ, ಆಕ್ಷೇಪಾರ್ಹ ಮಾಹಿತಿಗಳನ್ನು ಅಳಿಸುವ ಕಾರ್ಯವಿಧಾನಗಳನ್ನು ಜಾರಿಗೆ ತರಬೇಕು.

ಈ ನಿಯಮಗಳನ್ನು ಪಾಲಿಸದ ಜಾಲತಾಣ ಸಂಸ್ಥೆಗಳು ಭಾರತದಲ್ಲಿ ಮಧ್ಯವರ್ತಿ ಸ್ಥಾನಮಾನವನ್ನು ಕಳೆದುಕೊಳ್ಳುತ್ತವೆ. ಇದರಿಂದಾಗಿ ಮೂರನೇ ವ್ಯಕ್ತಿ ಹಂಚಿಕೊಂಡ ದತ್ತಾಂಶ ಮತ್ತು ಮಾಹಿತಿಗಳಿಗೆ ಕಂಪನಿಗಳು ಹೊಣೆಯಾಗುತ್ತವೆ. ಇಂಥ ಸಂದರ್ಭಗಳಲ್ಲಿ ಸಂಸ್ಥೆಗಳ ವಿರುದ್ಧ ದೂರು ಬಂದರೆ ಕ್ರಿಮಿನಲ್ ಕ್ರಮಗಳಿಗೂ ಸಂಸ್ಥೆಗಳು ಒಳಗಾಗಬೇಕಾಗುತ್ತದೆ.

ಹೊಸ ನಿಯಮಗಳ ಅನುಸಾರ, ಪರೇಶ್ ಬಿ. ಲಾಲ್ ಅವರನ್ನು ಕುಂದು ಕೊರತೆ ಪರಿಹಾರ ಅಧಿಕಾರಿಯನ್ನಾಗಿ ವಾಟ್ಸ್‌ಆ್ಯಪ್ ನೇಮಿಸಿದೆ.



ಸರ್ಚ್ ಎಂಜಿನ್‌ಗೆ ಹೊಸ ನಿಯಮ ಅನ್ವಯಿಸದು: ಗೂಗಲ್

ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಹೊಸ ನಿಯಮಗಳು ಸರ್ಚ್ ಎಂಜಿನ್ ಆಗಿರುವ ಗೂಗಲ್‌ಗೆ ಅನ್ವಯ ಆಗುವುದಿಲ್ಲ ಎಂದು ಗೂಗಲ್ ಸಂಸ್ಥೆಯು ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ ಮೇಲ್ಮನವಿಯಲ್ಲಿ ಹೇಳಿದೆ.

‘ಆಕ್ಷೇಪಾರ್ಹವಾದ ಕಂಟೆಂಟ್’ ಅನ್ನು ಜಾಗತಿಕವಾಗಿ ಅಳಿಸಿ ಹಾಕಬೇಕು ಎಂದು ಹೈಕೋರ್ಟ್‌ನ ಏಕಸದಸ್ಯ ಪೀಠವು ಏಪ್ರಿಲ್ 20ರಂದು ಆದೇಶ ನೀಡಿತ್ತು. ಮಹಿಳೆಯೊಬ್ಬರು ನೀಡಿದ್ದ ದೂರಿನ ಆಧಾರದಲ್ಲಿ ಈ ಆದೇಶ ನೀಡಲಾಗಿತ್ತು. ಈ ಆದೇಶವನ್ನು ರದ್ದುಮಾಡಬೇಕು ಎಂದು ಗೂಗಲ್ ಕೋರಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ಪೀಠವು ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡಿದೆ. ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗಿದ್ದು, ಜುಲೈ 25ರೊಳಗೆ ಪ್ರತಿಕ್ರಿಯೆ ಸಲ್ಲಿಸಲು ಸೂಚಿಸಿದೆ.

ಗೂಗಲ್ ಮಧ್ಯಸ್ಥಿಕೆ ಸಂಸ್ಥೆ ಮಾತ್ರ, ಸಾಮಾಜಿಕ ಮಾಧ್ಯಮ ಮಧ್ಯಸ್ಥಿಕೆ ಸಂಸ್ಥೆ ಅಲ್ಲ ಎಂದು ಗೂಗಲ್ ವಾದಿಸಿದೆ. ಗೂಗಲ್ ಅನ್ನು ಸಾಮಾಜಿಕ ಮಾಧ್ಯಮ ಮಧ್ಯಸ್ಥಿಕೆ ಸಂಸ್ಥೆ ಎಂದು ತಪ್ಪಾಗಿ ಗ್ರಹಿಸಿಕೊಂಡು ಏಪ್ರಿಲ್ 20ರ ಆದೇಶ ನೀಡಲಾಗಿದೆ. ಹಾಗಾಗಿ, ಏಕಸದಸ್ಯ ಪೀಠದ ಆದೇಶಕ್ಕೆ ಮಧ್ಯಂತರ ತಡೆ ನೀಡಬೇಕು ಎಂದು ಗೂಗಲ್ ಕೋರಿದೆ. ಆದರೆ, ಮಧ್ಯಂತರ ಆದೇಶ ನೀಡಲು ಹೈಕೋರ್ಟ್ ಒಪ್ಪಿಲ್ಲ.

ಕೋರ್ಟ್‌ನ ನಿರ್ದೇಶನವನ್ನು ಪಾಲಿಸಿಲ್ಲ ಎಂಬ ಕಾರಣಕ್ಕೆ ಕೈಗೊಳ್ಳಬಹುದಾದ ಶಿಸ್ತುಕ್ರಮದಿಂದ ರಕ್ಷಣೆ ಕೊಡಬೇಕು ಎಂದು ಗೂಗಲ್ ಕೋರಿದೆ. ಏಕಸದಸ್ಯ ಪೀಠದ ಆದೇಶ ಇದ್ದರೂ ‘ಆಕ್ಷೇಪಾರ್ಹ ಕಂಟೆಂಟ್’ ಅನ್ನು ಗೂಗಲ್ ಅಳಿಸಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೋವಿಡ್ ಎರಡನೇ ಅಲೆ ದೇಶದಲ್ಲಿ ಭಾರಿ ಅನಾಹುತ ಸೃಷ್ಟಿಸಿದೆ. ಜೊತೆಗೇ ಬಂದಿರುವ ಕಪ್ಪು ಶಿಲೀಂಧ್ರ ಸೋಂಕು ಹಾಗೂ ಬಿಳಿ ಶಿಲೀಂಧ್ರ ಸೋಂಕುಗಳು ಎಲ್ಲರ ಚಿಂತೆ ಹೆಚ್ಚಿಸಿವೆ. ಶಿಲೀಂಧ್ರ ಸೋಂಕು ಚಿಕಿತ್ಸೆಗೆ ಬೇಕಾದ ಔಷಧ ಕೊರತೆ ಇದೆ. ಫಾರಂ ಕೋಳಿಗಳಿಂದ ಮನುಷ್ಯರಿಗೆ ಸೋಂಕು ಹರಡಬಹುದು. ಪಂಜಾಬ್ ಸರ್ಕಾರವು ಅಂತಹ ಕೋಳಿ ಫಾರಂ ಅನ್ನು ಗುರುತಿಸಿದೆ ಎಂದು ಹೇಳುವ ಚಿತ್ರವು ವೈರಲ್ ಆಗಿದೆ.



ಕೋಳಿಗಳಿಂದ ಸೋಂಕು ಮನುಷ್ಯರಿಗೆ ಹರಡುತ್ತದೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆ ಇಲ್ಲ ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಕಪ್ಪು ಶಿಲೀಂಧ್ರ ಸೋಂಕು ಹರಡುವ ಬಗ್ಗೆ ಸರ್ಕಾರ ಅಥವಾ ವೈದ್ಯಕೀಯ ಸಂಸ್ಥೆ ತಿಳಿಸುವ ಮಾಹಿತಿಗಳನ್ನು ಮಾತ್ರ ಹಂಚಿಕೊಳ್ಳಿ ಎಂದು ಸಲಹೆ ನೀಡಿದೆ. ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿರುವ ಪೋಸ್ಟರ್ ತಪ್ಪು ಮಾಹಿತಿಯಿಂದ ಕೂಡಿದೆ ಎಂದು ವೇದಿಕೆ ಸ್ಪಷ್ಟಪಡಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಮನುಷ್ಯರೂಪದ ದೈವ

ಕಾರಿರುಳೊಳಗಸದಿ ತಾರೆ ನೂರಿದ್ದೇನು ? |
ದಾರಿಗನ ಕಣ್ಗೆ ಬೇಕೊಂದು ಮನೆ ಬೆಳಕು ||
ದೂರದಾ ದೈವವಂತಿರಲಿ, ಮಾನುಷಸಖನ |
ಕೋರುವುದು ಬಡಜೀವ – ಮಂಕುತಿಮ್ಮ || 424 ||

ಪದ-ಅರ್ಥ: ಕಾರಿರುಳೊಳ್ = ಕಗ್ಗತ್ತಲೆಯ ರಾತ್ರಿಯಲ್ಲಿ, ಮಾನುಷಸಖನ = ಮನುಷ್ಯ ಸ್ನೇಹಿತನ ಕೋರುವುದು = ಬೇಡುವುದು.

ವಾಚ್ಯಾರ್ಥ: ಕಗ್ಗತ್ತಲೆಯ ರಾತ್ರಿಯ ಆಕಾಶದಲ್ಲಿ ನೂರು ತಾರೆಗಳಿದ್ದೇನು ಪ್ರಯೋಜನ? ದಾರಿಹೋಕನಿಗೆ ದಾರಿತೋರಲು ಮನೆಬೆಳಕು ಬೇಕು. ದೂರದಲ್ಲಿದ್ದ ದೈವವಿರಲಿ. ಆದರೆ ಮನುಷ್ಯನ ಬಡಜೀವ ಬೇಡುವುದು ಮತ್ತೊಬ್ಬ ಮನುಷ್ಯನ ಸ್ನೇಹ ಹಸ್ತ.

ವಿವರಣೆ: ಅದೊಂದು ಕಾಡಿನಲ್ಲಿ ಅಲ್ಲಿಯ ಕಾಡು ಜನಾಂಗಕ್ಕೆ ಪ್ರಯೋಜನವಾಗಲೆಂದು ಕೆಲವು ಉತ್ಸಾಹೀ ತರುಣ ವೈದ್ಯರು ಬಂದು ಆಸ್ಪತ್ರೆಯನ್ನು ತೆಗೆದರು. ಮೊದಮೊದಲು ಅಲ್ಲಿಗೆ ಬರಲು ಹಿಂಜರಿದ ಜನರು ನಂತರ ಚಿಕಿತ್ಸೆಗಾಗಿ ಬರತೊಡಗಿದರು. ಅಲ್ಲಿ ಅನೇಕ ಹೆರಿಗೆಗಳಾಗಿ, ಹುಟ್ಟಿದ ಮಕ್ಕಳು ಬದುಕುತ್ತಿರಲಿಲ್ಲ. ಅದಕ್ಕೆ ಕಾರಣ, ಆ ತಾಯಂದಿರು ಮಗುವನ್ನು ಬೆಟ್ಟದ ಮೇಲಿನ ಮಾರಮ್ಮನ ದೇವಸ್ಥಾನಕ್ಕೆ ಕರೆದೊಯ್ಯುವವರೆಗೆ ಎದೆಹಾಲು ಕುಡಿಸುತ್ತಿರಲಿಲ್ಲ, ನೀರನ್ನು ಮುಟ್ಟಿಸುತ್ತಿರಲಿಲ್ಲ. ಹೀಗಾಗಿ ಮಕ್ಕಳು ನಿರ್ಜಲೀಕರಣದಿಂದ ಸತ್ತು ಹೋಗುತ್ತಿದ್ದವು. ವೈದ್ಯರು ಪರಿಪರಿಯಾಗಿ ಬೇಡಿಕೊಂಡರೂ ಅವರು ದೈವಭಯದಿಂದ ಒಪ್ಪುತ್ತಿರಲಿಲ್ಲ. ಆಗೊಬ್ಬ ಹಿರಿಯರು ಬಂದು, ‘ತಮಗೆ ಕನಸಿನಲ್ಲಿ ದೇವಿ ಬಂದು ಆಜ್ಞೆ ಮಾಡಿದ್ದಾಳೆ. ಅದೆಂದರೆ ತಾಯಂದಿರು ಮಕ್ಕಳನ್ನು ಖಂಡಿತವಾಗಿಯೂ ಮಾರಮ್ಮನ ದೇವಸ್ಥಾನಕ್ಕೆ ಕರೆದೊಯ್ಯಲೇಬೇಕು. ಆದರೆ ಮಾರಮ್ಮ, ಮಕ್ಕಳಿಗೆ ಎದೆಹಾಲು, ನೀರು ಕುಡಿಸದ ತಾಯಂದಿರನ್ನು ನೋಡುವುದಿಲ್ಲ’ ಎಂದು ಅವರಿಗೆ ತಿಳಿಯುವಂತೆ ಹೇಳಿದರು.

ನಂತರ ಮಕ್ಕಳ ಸಾವಿನ ಸಂಖ್ಯೆ ತುಂಬ ಕಡಿಮೆಯಾಯಿತು. ಅಂದರೆ ದೈವಪ್ರೀತಿ ಇರಲಿ, ಆದರೆ ಹತ್ತಿರದ ವೈದ್ಯರ ಮಾತಿನಲ್ಲಿ ಶ್ರದ್ಧೆ ಇರಲಿ. ಅದಕ್ಕೇ ಪೂರ್ವಿಕರು ಒಂದು ಮಾತನ್ನು ಹೇಳುತ್ತಿದ್ದರು. ‘ಔಷಧಂ ಜಾಹ್ನವೀತೋಯಂ, ವೈದ್ಯೋ ನಾರಾಯಣೋ ಹರಿ’. ಗಂಗೆಯ ನೀರೇ ನಮಗೆ ಔಷಧ ಮತ್ತು ವೈದ್ಯರೇ ದೇವರ ಸ್ವರೂಪ. ಗಂಗೆಯ ನೀರಿನಲ್ಲಿ, ದೂರದಲ್ಲಿರುವ ದೇವರಲ್ಲಿ, ಆಳವಾದ ನಂಬಿಕೆ ಇರುವುದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಆದರೆ ಸಮರ್ಥನಾದ, ಸರಿಯಾದ ವೈದ್ಯನನ್ನು ಕರೆತಂದು ಚಿಕಿತ್ಸೆ ಮಾಡಿಸುವುದು ಪುರುಷ ವಿವೇಕ. ಹತ್ತಿರದ ವೈದ್ಯ, ದೂರದ ದೇವರಿಗೆ ಒಂದು ಸೇತು. ನಮ್ಮ ಹಿರಿಯರು ದೇವರು ಎಂಬುದು ಒಂದು ಅತೀಂದ್ರಿಯ ವಸ್ತು, ಅದು ಪರೀಕ್ಷೆಗೆ, ಪ್ರಮಾಣಕ್ಕೆ ನಿಲುಕದ್ದಾದ ಕಾರಣ, ಶಾಸ್ತ್ರಗಳು, ಹಿರಿಯರ ಅನುಭವ ವಾಕ್ಯಗಳಿಂದಲೇ ಅದು ಅಂತ:ರ್ದೃಷ್ಟಿಗೆ ದೊರಕುವಂಥದ್ದು ಎಂದು ಹೇಳಿದ್ದಾರೆ. ಎಲ್ಲವೂ ಆ ಶಕ್ತಿಯಿಂದಲೇ ನಡೆಯುವುದು ಸತ್ಯವೆಂದುಕೊಂಡರೂ, ನಮ್ಮ ಹೃದಯದ ಬೆಳಕನ್ನು ನಾವು ಲೋಕಜೀವನದಿಂದ, ಮನುಷ್ಯ ಸಂಪರ್ಕದಿಂದಲೇ ಪಡೆಯಬೇಕಾಗುತ್ತದೆ. ನಮಗೆ ದೇವರು ಕೂಡ ಮನುಷ್ಯರೂಪದಲ್ಲೇ ಬರಬೇಕಲ್ಲವೆ? ತಾಯಿಯಾಗಿ, ತಂದೆಯಾಗಿ, ಬಂಧುವಾಗಿ, ಗುರುವಾಗಿ, ವೈದ್ಯನಾಗಿ, ಕವಿಯಾಗಿ, ವಕೀಲನಾಗಿ, ರಾಜಕಾರಣಿಯಾಗಿ ನಮ್ಮ ಹೃದಯವನ್ನು ತಟ್ಟುವುದು ಈ ಮನುಷ್ಯ ಪರ್ಕ. ಅದಕ್ಕೆ ಈ ಕಗ್ಗ ಸುಂದರವಾಗಿ ಹೇಳುತ್ತದೆ, ಆಕಾಶದಲ್ಲಿ ಕೋಟಿ ತಾರೆಗಳಿದ್ದರೂ, ನಮಗೆ ದಾರಿ ತೋರಲು ಹತ್ತಿರದ ಬೆಳಕು ಬೇಕು. ದೂರದ ದೇವರು ಕೂಡ ನಮಗೆ ಮನುಷ್ಯರೂಪದಲ್ಲೇ ಬರಬೇಕು. ಅದಕ್ಕಾಗಿ, ಆ ಸಂಪರ್ಕಕ್ಕಾಗಿ, ಆ ಸಂಪರ್ಕ ನೀಡುವ ಆತ್ಮೀಯತೆಗಾಗಿ ಪ್ರತಿಯೊಂದು ಜೀವ ಹಂಬಲಿಸುತ್ತದೆ. ❖

ದಿನ ಭವಿಷ್ಯ

ಗುರುವಾರ ಜೂನ್ 3, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೋಹಿಣಿ ನವಮೀ ಗಂ. 58-8 (ಬೆ.ಘ್ರಾ. 5-16) ಗುರುವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 39-46 (ರಾ. 9-55) ವಿಷ್ಕಂಭ ನಾಮ ಯೋಗ ಗಂ. 0-34 ಉಪರಿ ಪ್ರೀತಿ ನಾಮ ಯೋಗ ಗಂ. 58-27 ತೈತಲ ಕರಣ ಗಂ. 27-45 ವಿಷ ಗಂ. 4-54- ಅಮೃತ ಗಂ. 19-34 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-56 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 8

ಮೇಷ: ಕ್ರಯ ವಿಕ್ರಯ, ಒಪ್ಪಂದದ ವ್ಯವಹಾರಗಳಿಂದ ಅಧಿಕ ಲಾಭದ ನಿರೀಕ್ಷೆ. ಮಿತ್ರವೃಂದದವರ ಸಹಕಾರ ದೊರೆತು ಉತ್ಸಾಹ. ವಾಹನ, ಯಂತ್ರೋಪಕರಣ ಬಳಸುವ ಕೆಲಸಗಳಲ್ಲಿ ಹೆಚ್ಚಿನ ಪ್ರಗತಿ. ಉದರ ಶೂಲೆ ಕಾಡುವ ಸಾಧ್ಯತೆ.

ವೃಷಭ: ಆತ್ಮೀಯರ ಭೇಟಿಯಿಂದಾಗಿ ಸಂತಸದ ಕ್ಷಣಗಳು. ಹೆಚ್ಚಿನ ಶ್ರಮವಿಲ್ಲದೆ ಕೆಲಸಕಾರ್ಯಗಳು ಸುಸೂತ್ರ. ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ. ವಿದ್ಯಾರ್ಥಿಗಳಿಗೆ ಬಿಡುವಿಲ್ಲದ ಕೆಲಸಗಳಿಂದಾಗಿ ಅಭ್ಯಾಸದಲ್ಲಿ ಹಿನ್ನಡೆ.

ಮಿಥುನ: ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು ದೊರೆತು ಮಾನಸಿಕ ಶಾಂತಿ. ವ್ಯಾಪಾರದಲ್ಲಿ ತೊಡಗಿದವರಿಗೆ ಲಾಭ, ವಿಶ್ವಾಸ ಪೂರ್ವಕ ಮಾತುಗಳಿಂದಾಗಿ ಗೌರವ ಲಾಭ. ಆರೋಗ್ಯದಲ್ಲಿ ವ್ಯತ್ಯಯ ತಲೆದೋರಬಹುದು.

ಕರ್ಕಾಟಕ: ಲೆಕ್ಕಾಚಾರದಲ್ಲಿ ಸ್ವಲ್ಪಮಟ್ಟಿನ ತಪ್ಪಾಗುವುದು. ಉದ್ಯೋಗದಲ್ಲಿ ಒತ್ತಡ. ಸಣ್ಣ ಮಾತಿಗೂ ಅಪಾರ್ಥದಿಂದಾಗಿ ಕಲಹ, ವ್ಯಾಪಾರಿಗಳಿಗೆ ಹಾನಿ ಸಂಭವ. ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆ.

ಸಿಂಹ: ಮನಸ್ಸಿನಲ್ಲಿ ಗೊಂದಲಮಯ ವಿಚಾರಗಳು. ಅರೆ ಬರೆ ಕೆಲಸ ಕಾರ್ಯಗಳಿಂದಾಗಿ ಖಿನ್ನರಾಗಬೇಡಿ. ವ್ಯಾಪಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಯಾದರೂ ಮನೆಯವರ ಸಹಕಾರದಿಂದ ನಷ್ಟ ಕಡಿಮೆ ಮಾಡಿಕೊಳ್ಳುವಿರಿ.

ಕನ್ಯಾ: ವ್ಯವಹಾರಗಳಲ್ಲಿ ಅನುಕೂಲ ಅಭಿವೃದ್ಧಿಯನ್ನು ಕಾಣುವಿರಿ. ಲೇವಾದೇವಿ ವ್ಯವಹಾರಸ್ಥರಿಗೆ ಲಾಭದಲ್ಲಿ ಹೆಚ್ಚಳ. ನೂತನ ವಾಹನ ಖರೀದಿಗೆ ಸೂಕ್ತ ಕಾಲವಾಗಿದೆ. ವಿದ್ಯಾರ್ಥಿಗಳಿಗೆ ಪ್ರಗತಿಯ ದಿನ.

ತುಲಾ: ಹಿರಿಯರಿಂದ ಸಹಕಾರ, ಮೇಲಾಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಸ್ಥರಿಗೆ ಲಾಭದ ನಿರೀಕ್ಷೆ. ಮನಸ್ಸಿಗೆ ಹಿತ ನೀಡುವ ಸಂದೇಶವೊಂದನ್ನು ಕೇಳಲಿದ್ದೀರಿ. ಸಂಗಾತಿಯ ಆರೋಗ್ಯದ ಕಡೆ ಲಕ್ಷ್ಯವಿರಲಿ.

ವೃಶ್ಚಿಕ: ಕುಟುಂಬ ಸದಸ್ಯರಲ್ಲಿ ವಾದ ವಿವಾದಗಳ ಸಾಧ್ಯತೆ. ವಾಹನಗಳಿಂದ ಎಚ್ಚರಿಕೆ. ಅಲ್ಪ ಶ್ರಮದಿಂದ ಕಾರ್ಯ ಸಾಧನೆಯಾಗಿ ಮಾನಸಿಕ ನೆಮ್ಮದಿ ದೊರಕುವುದು. ಸಂಜೆಯ ವೇಳೆಗೆ ಸಿಹಿ ಸುದ್ದಿಯನ್ನು ಕೇಳಲಿದ್ದೀರಿ.

ಧನು: ನಿರೀಕ್ಷೆಯಂತೆ ಎಲ್ಲ ಕೆಲಸ ಕಾರ್ಯಗಳು ಕೈಗೂಡುವುದರಿಂದ ಮಾನಸಿಕ ನೆಮ್ಮದಿ. ಕುಟುಂಬದ ಸದಸ್ಯರಲ್ಲಿ ಒಮ್ಮತದ ಅಭಿಪ್ರಾಯದಿಂದಾಗಿ ನಿರಾಳತೆ. ಪ್ರೀತಿಪಾತ್ರರ ಭೇಟಿ. ಅಹಿತಕರ ಭೋಜನದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ.

ಮಕರ: ಆರೋಗ್ಯದಲ್ಲಿ ಚೇತರಿಕೆ. ನಿಮ್ಮ ಆಸೆ ಆಕಾಂಕ್ಷೆಗಳು ಈಡೇರಿ ಮಾನಸಿಕ ಶಾಂತಿ ದೊರಕಲಿದೆ. ಹಿತೈಷಿಗಳಿಂದ ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಸಮಯೋಚಿತ ಸಹಕಾರ ದೊರೆತು ತೃಪ್ತಿಕರ ಆದಾಯದ ನಿರೀಕ್ಷೆ.

ಕುಂಭ: ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಅಡೆತಡೆಗಳು ಕಾಣಬಹುದು. ಅಪರಿಚಿತರಿಂದ ತೊಂದರೆ ತಲೆದೋರಬಹುದು. ಕುಟುಂಬದವರಿಂದಲೇ ಒತ್ತಡದ ಸನ್ನಿವೇಶ ಮೂಡುವುದು.


ಮೀನ: ಅನಾವಶ್ಯಕ ಖರ್ಚು ಉದ್ಯೋಗದಲ್ಲಿ ಹಿನ್ನಡೆ. ಮನೋಬಲದಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಅಪರೂಪದ ವ್ಯಕ್ತಿಗಳ ದರ್ಶನ ಸಾಧ್ಯತೆ.

ನಿಮ್ಮ ಜನ್ಮದಿನ 3-ಜೂನ್: ಈ ದಿನವು ಅತ್ಯಂತ ಶುಭಕರವಾಗಿದ್ದು, ಆರ್ಥಿಕವಾಗಿ ಅತ್ಯಂತ ಪ್ರಬಲರಾಗಿ ಬೆಳವಣಿಗೆ ಹೊಂದಲಿದ್ದೀರಿ. ಉದ್ಯಮ ವೊಂದನ್ನು ಸ್ಥಾಪಿಸುವ ಸಲುವಾಗಿ ಮಿತ್ರರೊಂದಿಗೆ ಸಮಾಲೋಚನೆ ನಡೆಸಲಿದ್ದೀರಿ. ಸಾಮಾಜಿಕ ಕಾರ್ಯಗಳಲ್ಲಿ ಅತ್ಯುತ್ತಮ ಗತಿಯನ್ನು ಸಾಧಿಸುವ ಯೋಗ ನಿಮ್ಮದಾಗಿದೆ.

ಪದಬಂಧ 4616 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಕಂಡು ಹಿಡಿಯುವವನು (3)
3.ಜೈಲಿನ ವಾಸ (4)
5.ಪುಢಾರಿಯ ಹತ್ತಿರವಿರುವ ಶತ್ರು (2)
6.ಬೂಟಾಟಿಕೆ ಸ್ವಭಾವದವಳು (4)
7.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
10.ಪಣದಲ್ಲಿನ ಅಳತೆ (4)
11.ಮಾರಾಟದಲ್ಲೇ ಕಣ್ಕಟ್ಟು ಇದೆಯಲ್ಲಾ! (2)
13.ತೀಕ್ಷ್ಣವಾದ ಕಿರಣಗಳಿಂದ ಕೂಡಿದವನು (4)
14.ಮುಖ್ಯ ವಿಷಯದ ನಿರ್ಣಯ (3)

ಮೇಲಿಂದ ಕೆಳಕ್ಕೆ
1.ಕಾವ್ಯದ ನವರಸಗಳಲ್ಲಿ ಒಂದಾಗಿರುವ ಅಳಲು (2)
2.ಕದಕ್ಕೆ ಉಜ್ಜುತ್ತಿರುವ ಗಲ್ಲ (3)
4.ಈಕೆ ಉಪಪತ್ನಿ (3)
5.ಸೋಜಿಗದ ಸಂಗತಿ ತಿರುವು ಮುರುವಾಗಿದೆಯಲ್ಲಾ? (3)
6.ಅಸಾಮಾನ್ಯವಾದ ವ್ಯಕ್ತಿ ತಿರುಗಿದ್ದಾನೆ (3)
8.ಹಂತಹಂತವಾಗಿ ಎಂದು ಹೀಗೆನ್ನಿ (3)
9.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
10.ಪತಿಯ ಬಳಿಯಿರುವ ಕಾಲಾಳು (3)
11.ಮಾವನಿಗೆದುರಿರುವ ಸ್ತ್ರೀ! (3)
12.ಹೊಟ್ಟೆಕಿಚ್ಚು ಈ ರೀತಿ ವ್ಯಕ್ತವಾಗಿದೆ (2)



4615ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಾಲರವಿ 3.ಮುಸಲ್ಮಾನ 5.ಪ್ರಸಾದ 7.ರಸ 9.ಅಂಕ 10.ಬಕರ 11.ಮಾಸು 12.ತಮ 14.ಮಹಡಿ 16.ವರ್ಧಮಾನ 17.ಅಕಲಂಕ

ಮೇಲಿಂದ ಕೆಳಕ್ಕೆ: 1.ಬಾಹಿರ 2.ವಿಪ್ರ 3.ಮುದ 4.ನರಕ 6.ಸಾಮೂಹಿಕವಿವಾಹ 8.ಸವಿಗನಸು 9.ಅಂಕಗಣಿತ 11.ಮಾರ್ದವ 13.ಮರುಕ 14.ಮನ 15.ಡಿಅ

ಸುಡೊಕು 5002

	9			5			2	1
3		5	2		1	7		
	1			9			3	5
5		7				1		
	6						8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5001 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

1.64 ಕೋಟಿ ಲಸಿಕೆ ಇನ್ನೂ ರಾಜ್ಯಗಳಲ್ಲಿ ಲಭ್ಯವಿದೆ: ಕೇಂದ್ರ

ನವದೆಹಲಿ (ಪಿಟಿಐ): 1.64 ಕೋಟಿಗೂ ಹೆಚ್ಚು ಕೋವಿಡ್-19 ಲಸಿಕೆ ಪ್ರಮಾಣಗಳು ಇನ್ನೂ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಲಭ್ಯವಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ.

ಕೇಂದ್ರವು ಇಲ್ಲಿಯವರೆಗೆ ಉಚಿತ ಮತ್ತು ನೇರ ರಾಜ್ಯ ಖರೀದಿ ವಿಭಾಗಗಳ ಮೂಲಕ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 23 ಕೋಟಿಗೂ ಹೆಚ್ಚು ಲಸಿಕೆ ಪ್ರಮಾಣವನ್ನು ಒದಗಿಸಿದೆ.

ಇದರಲ್ಲಿ ವ್ಯರ್ಥವಾದದ್ದು ಸೇರಿದಂತೆ ಒಟ್ಟು ಬಳಕೆಯಾಗಿರುವುದು 21,71,44,022 ಪ್ರಮಾಣವಾಗಿದೆ ಎಂದು ತಿಳಿಸಿದೆ.

'ಕೆಎಸ್‌ಆರ್‌ಟಿಸಿ' ಕೇರಳಕ್ಕೆ ಮಾತ್ರ

ಪ್ರಜಾವಾಣಿ ವಾರ್ತೆ



ತಿರುವನಂತಪುರ: ಕರ್ನಾಟಕ ಮತ್ತು ಕೇರಳ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳೆರಡೂ 'ಕೆಎಸ್‌ಆರ್‌ಟಿಸಿ' ಎಂಬ ತಮ್ಮ ಹೆಸರಿನ ಸಂಕ್ಷಿಪ್ತ ರೂಪವನ್ನು ಬಳಸಿಕೊಳ್ಳುತ್ತಿದ್ದವು. ಆದರೆ ಇನ್ನು ಮುಂದೆ 'ಕೆಎಸ್‌ಆರ್‌ಟಿಸಿ' ಎಂಬುದನ್ನು ಬಳಸಲು ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಮಾತ್ರ ಅವಕಾಶ ಇದೆ.

'ಆನ ವಂಡಿ' ಎಂಬ ಹೆಸರನ್ನು ಕೂಡ ಇನ್ನು ಮುಂದೆ ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮ ಮಾತ್ರ ಬಳಸಲಿದೆ ಎಂದು ಕೇರಳದ ಸಾರಿಗೆ ಸಚಿವ ಆಂಟನಿ ರಾಜು ಹೇಳಿದ್ದಾರೆ.

ಟ್ರೇಡ್ ಮಾರ್ಕ್ ರಿಜಿಸ್ಟ್ರಿ ಸಂಸ್ಥೆಯು ಟ್ರೇಡ್‌ಮಾರ್ಕ್ ಕಾಯ್ದೆ 1999ರ ಅನ್ವಯ ಕೆಎಸ್‌ಆರ್‌ಟಿಸಿ, ಅದರ ಲಾಂಛನ ಮತ್ತು ವ್ಯಾಪಕವಾಗಿ ಬಳಕೆಯಲ್ಲಿರುವ 'ಆನ ವಂಡಿ' ಎಂಬ ಹೆಸರನ್ನು ಕೇರಳ ರಸ್ತೆ ಸಾರಿಗೆ ನಿಗಮಕ್ಕೆ ನೀಡಿದೆ.

'ಕೆಎಸ್‌ಆರ್‌ಟಿಸಿ'ಗಾಗಿ ಕರ್ನಾಟಕ ಮತ್ತು ಕೇರಳದ ನಡುವೆ 2014ರಿಂದಲೇ ವಿವಾದ ಇದೆ. ಕೆಎಸ್‌ಆರ್‌ಟಿಸಿ ಎಂಬ ಹೆಸರನ್ನು ಬಳಸಬಾರದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೇರಳ ರಸ್ತೆ ಸಾರಿಗೆ ನಿಗಮಕ್ಕೆ ನೋಟಿಸ್ ನೀಡಿತ್ತು. ಹಾಗಾಗಿ, ಕೆಎಸ್‌ಆರ್‌ಟಿಸಿ ಪದ ಬಳಕೆಯ ಅವಕಾಶಕ್ಕಾಗಿ ಕೇರಳ ರಸ್ತೆ ಸಾರಿಗೆ ನಿಗಮವು ಟ್ರೇಡ್ ಮಾರ್ಕ್ ರಿಜಿಸ್ಟ್ರಿಗೆ ಅರ್ಜಿ ಕೊಟ್ಟಿತು. ಹಲವು ವರ್ಷಗಳ ಕಾನೂನು ಹೋರಾಟದ ಬಳಿಕ ಕೆಎಸ್‌ಆರ್‌ಟಿಸಿ ಕೇರಳಕ್ಕೆ ಸಿಕ್ಕಿದೆ ಎಂದು ಕೇರಳ ರಸ್ತೆ ಸಾರಿಗೆ ನಿಗಮವು ಹೇಳಿದೆ.

ಕೆಎಸ್‌ಆರ್‌ಟಿಸಿ ಹೆಸರನ್ನು ಬಳಸದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ನೋಟಿಸ್ ನೀಡಲಾಗುವುದು ಎಂದು ಕೇರಳ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಬಿಜು ಪ್ರಭಾಕರ್ ಹೇಳಿದ್ದಾರೆ.

ಕೇರಳ ರಸ್ತೆ ಸಾರಿಗೆ ಸಂಸ್ಥೆಯು 1965ರಲ್ಲಿ ಸೇವೆ ಆರಂಭಿಸಿತ್ತು. ಕರ್ನಾಟಕ ಸಾರಿಗೆ ಸಂಸ್ಥೆಯು 1974ರಲ್ಲಿ ಸೇವೆ ಆರಂಭಿಸಿತು. ಹೀಗಾಗಿ 'ಕೆಎಸ್‌ಆರ್‌ಟಿಸಿ' ಹೆಸರು ಕೇರಳಕ್ಕೆ ದೊರೆಯುವುದು ಎಂದು ಮೂಲಗಳು ಹೇಳಿವೆ.

'ಕಾನೂನು ಸಲಹೆ ಪಡೆದು ಮುಂದಿನ ಹೆಜ್ಜೆ'

ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳೆರಡೂ ಕೆಎಸ್‌ಆರ್‌ಟಿಸಿ ಎಂದು ಬಳಕೆ ಮಾಡುತ್ತಿರುವ ಟ್ರೇಡ್ ಮಾರ್ಕ್ ವಿಷಯಕ್ಕೆ ಸಂಬಂಧಿಸಿದಂತೆ ಏಳು ವರ್ಷಗಳಿಂದ ವ್ಯಾಜ್ಯ ನಡೆಯುತ್ತಿತ್ತು. ಕೇರಳ ಪರವಾಗಿ ಆದೇಶ ನೀಡಲಾಗಿದೆ ಎಂಬ ಮಾಹಿತಿ ಇದೆ. ಇನ್ನೂ ಅಧಿಕೃತವಾಗಿ ವಿಷಯ ಮುಟ್ಟಿಲ್ಲ. ಮೊದಲು ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಎಂಎಸ್‌ಆರ್‌ಟಿಸಿ) ಆಗಿತ್ತು. ಬಳಿಕ ಕೆಎಸ್‌ಆರ್‌ಟಿಸಿ ಎಂದು ಬದಲಿಸಿಕೊಳ್ಳಲಾಗಿದೆ. ಅದಕ್ಕೂ ಮೊದಲೇ ಕೇರಳದಲ್ಲಿ ಕೆಎಸ್‌ಆರ್‌ಟಿಸಿ ಎಂದು ಬಳಕೆಯಲ್ಲಿದ್ದ ಕಾರಣ ಅವರ ಪರವಾಗಿ ಆದೇಶ ನೀಡಿರಬಹುದು. ಅಧಿಕೃತವಾಗಿ ಆದೇಶ ತಲುಪಿದ ಬಳಿಕ ಕಾನೂನು ಅಭಿಪ್ರಾಯ ಪಡೆದುಕೊಂಡು ಮುಂದಿನ ಹೆಜ್ಜೆ ಇಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದ್ದಾರೆ.

'ಲಸಿಕೆ: ಮೇನಲ್ಲಿ ಕಳಪೆ ಸಾಧನೆಗೆ ರಾಜ್ಯಗಳೇ ಹೊಣೆ'

ಪ್ರಜಾವಾಣಿ ವಾರ್ತೆ



ನವದೆಹಲಿ: ಮೇ ತಿಂಗಳಿನಲ್ಲಿ ಕೋವಿಡ್-19 ಲಸಿಕೆ ನೀಡುವಲ್ಲಿನ ಕಳಪೆ ಸಾಧನೆಗೆ ರಾಜ್ಯಗಳೇ ಕಾರಣ ಎಂಬುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ಹೇಳಿದೆ.

'ಮೇ ತಿಂಗಳ ಅಂತ್ಯಕ್ಕೆ ರಾಜ್ಯಗಳ ಬಳಿ ಲಸಿಕೆಯ 1.6 ಕೋಟಿ ಡೋಸ್‌ಗಳಿದ್ದವು' ಎಂದು ಸಚಿವಾಲಯ ಹೇಳಿದೆ. ಆ ಮೂಲಕ, ಅಗತ್ಯ ಪ್ರಮಾಣದ ಡೋಸ್‌ಗಳನ್ನು [illegible] ರಾಜ್ಯಗಳು ನೀಡುವಲ್ಲಿ ವಿಫಲವಾಗಿವೆ ಎಂದು ಸೂಚ್ಯವಾಗಿ ಸಚಿವಾಲಯ [illegible].

'ಮೇ 1ರಿಂದ 31ರ ವರೆಗಿನ ಅವಧಿಯಲ್ಲಿ ಒಟ್ಟು 7.9 ಕೋಟಿ ಡೋಸ್‌ಗಳಷ್ಟು ಲಸಿಕೆ ಲಭ್ಯ ಇತ್ತು. ಈ ಪೈಕಿ 6.1 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ಹಾಕಲಾಗಿದೆ. ಇನ್ನೂ ಅಂದಾಜು 1.6 ಕೋಟಿ ಡೋಸ್‌ಗಳಷ್ಟು ಲಸಿಕೆ ಬಳಕೆಯಾಗದೇ ಉಳಿದಿತ್ತು' ಎಂದು ಸಚಿವಾಲಯ ತಿಳಿಸಿದೆ.

ಕೇಂದ್ರವು ಜೂನ್ ತಿಂಗಳಿಗಾಗಿ 12 ಕೋಟಿ ಡೋಸ್‌ಗಳನ್ನು ಒದಗಿಸುವುದಾಗಿ ಭರವಸೆ ನೀಡಿತ್ತು. ಆದರೆ, ಮೇ ತಿಂಗಳಲ್ಲಿ ಲಭ್ಯವಿದ್ದ 7.9 ಕೋಟಿ ಡೋಸ್‌ಗಳ ಪೈಕಿ ಅಂದಾಜು 5.8 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ಹಾಕಲಾಗಿದೆ ಎಂದು [illegible] ಹಿನ್ನೆಲೆಯಲ್ಲಿ ಸಚಿವಾಲಯ ಈ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ.

ಅಸ್ಸಾಂ: ವೈದ್ಯನ ಮೇಲೆ ಹಲ್ಲೆ; 24 ಮಂದಿ ಬಂಧನ

ಗುವಾಹಟಿ: ಕೋವಿಡ್ ಚಿಕಿತ್ಸಾ ಕೇಂದ್ರವೊಂದರಲ್ಲಿ ಯುವ ವೈದ್ಯನ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಸ್ಸಾಂ ಪೊಲೀಸರು 24 ಆರೋಪಿಗಳನ್ನು ಬಂಧಿಸಿದ್ದಾರೆ.

ಅಸ್ಸಾಂನ ಹೊಜೈ ಜಿಲ್ಲೆಯ ಒಡಾಲಿಯದ ಮಾಡೆಲ್ ಆಸ್ಪತ್ರೆಯಲ್ಲಿ ಮಂಗಳವಾರ ಮಧ್ಯಾಹ್ನ 1.30ರ ಸುಮಾರಿಗೆ ಘಟನೆ ನಡೆದಿದ್ದು, ಕೋವಿಡ್ ಸೋಂಕಿತನ ನಿಧನದ ನಂತರ ರೋಗಿಯ ಕುಟುಂಬದ ಸದಸ್ಯರು ವೈದ್ಯರನ್ನು ಥಳಿಸಿದ್ದರು.

ವೈದ್ಯರ ಮೇಲೆ ಹಲ್ಲೆ ಆರೋಪಕ್ಕೆ ಸಂಬಂಧಿಸಿದಂತೆ 24 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಹಲ್ಲೆಗೊಳಗಾದ ವೈದ್ಯರನ್ನು ಸೆಯುಜ್ ಕುಮಾರ್ ಸೇನಾಪತಿ ಎಂದು ಗುರುತಿಸಲಾಗಿದೆ.



ತೈಲ ಟ್ಯಾಂಕರ್

ಮನಾಲಿಯ ಕೋಕ್ಸರ್‌ಗೆ ತೆರಳುತ್ತಿದ್ದ ತೈಲ ಹೊತ್ತ ಟ್ಯಾಂಕರ್‌ಗಳು ಹಿಮಚ್ಛಾದಿತ ರೋಹ್ತಂಗ್ ಮಾರ್ಗದ ಮೂಲಕ ಬುಧವಾರ ಸಾಗಿದವು –ಪಿಟಿಐ ಚಿತ್ರ

ಕೋರ್ಟ್ ಮೂಕ ಪ್ರೇಕ್ಷಕನಾಗಲು ಸಾಧ್ಯವಿಲ್ಲ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೀತಿಗಳ ಪರಿಶೀಲನೆ ಅಗತ್ಯ
- ಪಿಡುಗಿನ ಹೆಸರಿನಲ್ಲಿ ಮನಬಂದಂತೆ ವರ್ತಿಸಲಾಗದು
- ಸಂವಿಧಾನದ ಮೌಲ್ಯಗಳನ್ನು ತಿರಸ್ಕರಿಸಲಾಗದು

ನವದೆಹಲಿ: ಕೇಂದ್ರ ಸರ್ಕಾರವು 18ರಿಂದ 44 ವರ್ಷ ವಯಸ್ಸಿನೊಳಗಿನವರಿಗೆ ಕೋವಿಡ್ ಲಸಿಕೆ ನೀಡಲು ರೂಪಿಸಿರುವ ನೀತಿಯ ನ್ಯಾಯಾಂಗ ಪರಿಶೀಲನೆಗೆ ಸುಪ್ರೀಂ ಕೋರ್ಟ್ ನಿರ್ಧರಿಸಿದೆ. 'ಕಾರ್ಯಾಂಗ ರೂಪಿಸಿರುವ ನೀತಿಗಳನ್ನು ನ್ಯಾಯಾಂಗವು ವಿಮರ್ಶೆಗೆ ಒಳಪಡಿಸುವುದು ಮತ್ತು ಅವುಗಳಿಗೆ ಸಾಂವಿಧಾನಿಕ ಸಮರ್ಥನೆ ನೀಡುವುದು ಅಗತ್ಯ. ಈ ಹೊಣೆಯನ್ನು ಸಂವಿಧಾನವು ನ್ಯಾಯಾಲಯಗಳಿಗೆ ವಹಿಸಿದೆ' ಎಂದಿದೆ.

'ಅಧಿಕಾರಗಳನ್ನು ಬೇರ್ಪಡಿಸಿದ ಮಾತ್ರಕ್ಕೆ ಈ ನೀತಿಗಳನ್ನು ಪರಿಶೀಲಿಸುವ ಅಧಿಕಾರವು ನ್ಯಾಯಾಂಗಗಳಿಗೆ ಇಲ್ಲದಂತಾಗುವುದಿಲ್ಲ. ಕಾರ್ಯಾಂಗದ ನೀತಿಗಳಿಂದ ಜನರ ಹಕ್ಕುಗಳ ಉಲ್ಲಂಘನೆಯಾಗುತ್ತಿದ್ದರೂ ನ್ಯಾಯಾಲಯಗಳು ಮೂಕ ಪ್ರೇಕ್ಷಕರಾಗಿರಬೇಕು ಎಂದು ನಮ್ಮ ಸಂವಿಧಾನ ಹೇಳುವುದಿಲ್ಲ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ನೇತೃತ್ವದ ಪೀಠ ಹೇಳಿದೆ.

'ವೈದ್ಯಕೀಯ ಕ್ಷೇತ್ರದ ತಜ್ಞರು ಹಾಗೂ ವಿಜ್ಞಾನಿಗಳ ಅಭಿಪ್ರಾಯಗಳ ಆಧಾರದಲ್ಲಿ ಕೋವಿಡ್-19 ನಿರ್ವಹಣಾ ನೀತಿಗಳನ್ನು ರೂಪಿಸಲಾಗಿದೆ. ಈ ವಿಚಾರದಲ್ಲಿ ನ್ಯಾಯಾಂಗದ ಹೆಚ್ಚಿನ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ. ಉತ್ತಮವಾದದ್ದೇ ಆದರೂ ತಜ್ಞರ ಸಲಹೆ ಅಥವಾ ಆಡಳಿತಾತ್ಮಕ ಅನುಭವದ ಕೊರತೆಯಲ್ಲಿ, ನ್ಯಾಯಾಂಗದ ಅತ್ಯುತ್ಸಾಹದ ಮಧ್ಯಪ್ರವೇಶದಿಂದ ಅನಪೇಕ್ಷಿತ ಪರಿಣಾಮಗಳಾಗಬಹುದು. ಇದರಿಂದ ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಳ್ಳಲು ವೈದ್ಯರು, ವಿಜ್ಞಾನಿಗಳು ಹಾಗೂ ಅಧಿಕಾರಿಗಳಿಗೆ ಅಡ್ಡಿಯಾಗಬಹುದು' ಎಂದು ಕೇಂದ್ರ ಸರ್ಕಾರ ವಾದಿಸಿತ್ತು.

ಕೇಂದ್ರದ ಈ ಅಭಿಪ್ರಾಯಕ್ಕೆ ಪ್ರತಿಕ್ರಿಯೆ ನೀಡಿದ ನ್ಯಾಯಾಲಯವು, 'ಮುಕ್ತ ನ್ಯಾಯಾಂಗ ಪ್ರಕ್ರಿಯೆಯನ್ನು ಅನುಸರಿಸಿ, ಕಾರ್ಯಾಂಗದ ಪ್ರತಿನಿಧಿಗಳ ಜತೆ ನ್ಯಾಯಾಲಯವು ಚರ್ಚಿಸುವುದು. ಈಗಿನ ನೀತಿಗಳ ಔಚಿತ್ಯದ ಬಗ್ಗೆ ಮತ್ತು ಸಂವಿಧಾನದ ಮೌಲ್ಯಗಳಿಗೆ ಅವು ಅನುಗುಣವಾಗಿವೆಯೇ ಎಂಬ ಬಗ್ಗೆ ಅಲ್ಲಿ ಪರಿಶೀಲನೆ ನಡೆಸಲಾಗುವುದು' ಎಂದಿದೆ.

'ಜಾರಿ ಮಾಡಲಾಗಿರುವ ನೀತಿಯು ಸಮಂಜಸವಾಗಿದೆಯೇ, ಮಾನದಂಡಗಳಿಗೆ ಅನುಗುಣವಾಗಿದೆಯೇ, ಎಲ್ಲರ ಜೀವನದ ಹಕ್ಕನ್ನು ರಕ್ಷಿಸುತ್ತದೆಯೇ ಎಂಬುದನ್ನು ಖಾತರಿಪಡಿಸಲು, ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಬಳಸಿಕೊಳ್ಳಲಿದೆ. ಜಗತ್ತಿನ ಎಲ್ಲಾ ನ್ಯಾಯಾಲಯಗಳು, ಸಂವಿಧಾನದ ಉದ್ದೇಶಕ್ಕೆ ಸವಾಲೆಸೆಯುವಂಥ ನೀತಿಗಳನ್ನು ಪ್ರಶ್ನಿಸಿ, ಪ್ರತಿಕ್ರಿಯೆ ನೀಡಿವೆ. ಪಿಡುಗಿನ ಹೆಸರಿನಲ್ಲಿ ತರ್ಕರಹಿತ ನೀತಿಗಳನ್ನು ರೂಪಿಸುವುದರ ವಿರುದ್ಧ ಸರ್ಕಾರಗಳನ್ನು ಎಚ್ಚರಿಸಿವೆ' ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಅಮೆರಿಕದ ನ್ಯಾಯಾಲಯವು ಸಹ ಆ ದೇಶದ ಸರ್ಕಾರದ ಕೆಲವು ನೀತಿಗಳನ್ನು ತಳ್ಳಿಹಾಕಿದ್ದನ್ನು ಉಲ್ಲೇಖಿಸಿದ ಸುಪ್ರೀಂ ಕೋರ್ಟ್, 'ಸಾರ್ವಜನಿಕ ಆರೋಗ್ಯದ ವಿಚಾರದಲ್ಲಿ ಈ ನ್ಯಾಯಾಲಯದ ಸದಸ್ಯರು ತಜ್ಞರಲ್ಲ ಎಂಬುದು ನಿಜ... ಆದರೆ ಪಿಡುಗಿನ ಸಂದರ್ಭದಲ್ಲೂ ಸಂವಿಧಾನದ ಮೌಲ್ಯಗಳನ್ನು ತಿರಸ್ಕರಿಸಲಾಗದು. ವೈದ್ಯಕೀಯ ತುರ್ತು ಸ್ಥಿತಿಯು ತಮಗೆ ಬೇಕಾದಂತೆ ವರ್ತಿಸುವ ಅಧಿಕಾರವನ್ನು ಆಡಳಿತ ನಡೆಸುವವರಿಗಾಗಲಿ, ಅಧಿಕಾರಿಗಳಿಗಾಗಲಿ ನೀಡುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಇದೇ 7ರ ಬಳಿಕವೂ ಲಾಕ್‌ಡೌನ್?

ಒಂದನೇ ಪುಟದಿಂದ

ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ಅರಣ್ಯ ಸಚಿವ ಅರವಿಂದ ಲಿಂಬಾವಳಿ, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉನ್ನತಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೃಷಿ ಕ್ಷೇತ್ರಕ್ಕೆ ಪೂರಕವಾದ ಉದ್ದಿಮೆಗಳು ಹಾಗೂ ಮಳಿಗೆಗಳು ಸೇರಿದಂತೆ ಕೆಲವು ಚಟುವಟಿಕೆಗಳಿಗೆ ಸಡಿಲಿಕೆ ಮಾಡಲು ಸಭೆಯಲ್ಲಿ ಚರ್ಚಿಸಲಾಗಿದೆ. ಅಗತ್ಯ ವಸ್ತುಗಳ ಖರೀದಿಗೆ ಸಮಯದ ಮಿತಿ ಹೆಚ್ಚಿಸುವ ಸಾಧ್ಯತೆಯ ಬಗ್ಗೆಯೂ ಚರ್ಚಿಸಲಾಗಿದೆ. ಮುಖ್ಯಮಂತ್ರಿಯವರು ಗುರುವಾರ ಮತ್ತೊಮ್ಮೆ ಕೆಲವು ಪ್ರಮುಖರ ಜತೆ ಚರ್ಚಿಸಿದ ಬಳಿಕವೇ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭ್ಯವಾಗಿದೆ.

3 ನೇ ಅಲೆ ತಡೆಗೆ ಮುಂದಿನ ವಾರ ವರದಿ

ಕೋವಿಡ್ ಮೂರನೇ ಅಲೆ ತಡೆಗಟ್ಟಲು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಇನ್ನೊಂದು ವಾರದಲ್ಲಿ ವರದಿ ಸಲ್ಲಿಸುವುದಾಗಿ ಡಾ.ದೇವಿಪ್ರಸಾದ್ ಶೆಟ್ಟಿ ನೇತೃತ್ವದ ಕಾರ್ಯಪಡೆ ತಿಳಿಸಿದೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ದೇವಿಪ್ರಸಾದ್ ಶೆಟ್ಟಿ ಈ ವಿಷಯ ತಿಳಿಸಿದರು.

ಕೋವಿಡ್ ಮೂರನೇ ಅಲೆಯನ್ನು ತಡೆಗಟ್ಟಲು ಕೈಗೊಳ್ಳಬೇಕಾಗಿರುವ ಮುಂಜಾಗರೂಕತಾ ಕ್ರಮಗಳು, ಕಲ್ಪಿಸಬೇಕಾದ ಮೂಲಸೌಕರ್ಯ ಹಾಗೂ ಚಿಕಿತ್ಸಾ ಸೌಲಭ್ಯಗಳು, ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ಔಷಧಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಕಾರ್ಯಪಡೆಯ ಶಿಫಾರಸುಗಳನ್ನು ಆಧರಿಸಿ, ಸರ್ಕಾರವು ಕ್ರಮಕೈಗೊಳ್ಳಲಿದೆ ಎಂದು ಯಡಿಯೂರಪ್ಪ ಸಭೆಯಲ್ಲಿ ತಿಳಿಸಿದರು.

ಹಳ್ಳಿಗಳಲ್ಲಿ ಕೊರೊನಾ ನಿಯಂತ್ರಣದ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಆ ಬಳಿಕ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಿದರು.

ಕಪ್ಪು ಶಿಲೀಂಧ್ರದಿಂದಾಗಿ ಸಾವಿನ ಸಂಖ್ಯೆಯ ಹೆಚ್ಚಾಗಿದ್ದು, ಅದನ್ನು ನಿಯಂತ್ರಿಸಲು ಕ್ರಮ ತಗೆದುಕೊಳ್ಳಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕೋವಿಡ್ ನಿಯಂತ್ರಿಸಬೇಕು ಎಂದೂ ಯಡಿಯೂರಪ್ಪ ತಿಳಿಸಿದರು. ಸಭೆಯಲ್ಲಿ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಆರೋಗ್ಯ ಸಚಿವ ಡಾ. ಸುಧಾಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು.

ವೈರಾಣು ಸಲಹೆಗಾರರ ಮಾತು ಒಪ್ಪಲು ಸಿದ್ಧವೇ: ಸರ್ಕಾರಕ್ಕೆ ಡಿಕೆಶಿ ಪ್ರಶ್ನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕೋವಿಡ್ ಲಸಿಕೆ ವಿತರಣೆ ವಿಚಾರದಲ್ಲಿ ಸರ್ಕಾರ ತನ್ನ ಸಲಹೆಗಾರರಾದ ವೈರಾಣು ತಜ್ಞ ಗಗನ್ ದೀಪ್ ಕಾಂಗ್ ಅವರ ಮಾತು ಒಪ್ಪಲು ಸಿದ್ಧವಿದೆಯೇ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.


'ಗಗನದೀಪ್ ಅವರು ವೆಲ್ಲೂರಿನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜಿನಲ್ಲಿ ವೈರಾಣು ವಿಜ್ಞಾನ ವಿಭಾಗದ ಪ್ರಾಧ್ಯಾಪಕರು. ರಾಜ್ಯ ಸರ್ಕಾರ ಅವರನ್ನು ಲಸಿಕೆ ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಿದೆ. ಆದರೆ, ಅವರ ಅಭಿಪ್ರಾಯಕ್ಕೂ ಸರ್ಕಾರದ ನಿರ್ಧಾರಗಳಿಗೂ ಹೊಂದಾಣಿಕೆ ಆಗುತ್ತಿಲ್ಲ' ಎಂದಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ ಅವರು ಕೋವಿಡ್ ನಿರ್ವಹಣೆ ವಿಚಾರವಾಗಿ ವ್ಯಕ್ತಪಡಿಸಿರುವ ಅಂಶಗಳನ್ನು ಉಲ್ಲೇಖಿಸಿ ಶಿವಕುಮಾರ್ ಈ ಹೇಳಿಕೆ ನೀಡಿದ್ದಾರೆ.

'ಲಸಿಕೆ ಖರೀದಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಮಾಡಬೇಕು' ಎಂದು ಸಲಹೆಗಾರರು ಅಭಿಪ್ರಾಯಪಟ್ಟಿದ್ದು, ಇದನ್ನು ಸರ್ಕಾರ ಒಪ್ಪುತ್ತದೆಯೇ? ಕೇಂದ್ರ ಸರ್ಕಾರ ಜಾಗತಿಕ ಕಂಪನಿಗಳಿಂದ ಲಸಿಕೆ ಖರೀದಿಯಲ್ಲಿ ವಿಳಂಬ ಮಾಡಿದೆ ಎಂಬುದನ್ನಾದರೂ ಸರ್ಕಾರ ಒಪ್ಪಿಕೊಳ್ಳುತ್ತದೆಯೇ' ಎಂದು ಶಿವಕುಮಾರ್ ಪ್ರಶ್ನಿಸಿದ್ದಾರೆ.

'ಜಾಗತಿಕ ಟೆಂಡರ್‌ನಿಂದ ಸಂಪನ್ಮೂಲ ವ್ಯರ್ಥ ಎಂದು ಕಾಂಗ್ ಹೇಳಿದ್ದಾರೆ. ಹಾಗಿದ್ದರೆ, ಜಾಗತಿಕ ಟೆಂಡರ್ ಮೂಲಕ ಲಸಿಕೆ ಖರೀದಿ ನಿರ್ಧಾರದಲ್ಲಿ ಸಲಹೆಗಾರರ ಅಭಿಪ್ರಾಯವನ್ನು ಸರ್ಕಾರ ಪರಿಗಣಿಸಿದೆಯೇ. ಡಿಸೆಂಬರ್ ವೇಳೆಗೆ 2 ಕೋಟಿ ಡೋಸ್ ಲಸಿಕೆ ಖರೀದಿ ಮಾಡುವುದಾಗಿ ಕೇಂದ್ರ ತಿಳಿಸಿದ್ದು, 'ಇದು ವಾಸ್ತವಾಂಶಕ್ಕೆ ದೂರವಾದದ್ದು' ಎಂದು ಕಾಂಗ್ ಅಭಿಪ್ರಾಯಪಟ್ಟಿದ್ದಾರೆ. ಜನವರಿ ತಿಂಗಳಲ್ಲಿ ಕೋವ್ಯಾಕ್ಸಿನ್ ಅಂತಿಮ ಪರೀಕ್ಷೆ ವರದಿ ಪ್ರಕಟವಾಗುವ ಮುನ್ನವೇ ಬಳಕೆಗೆ ಅನುಮತಿ ನೀಡಿದ್ದನ್ನು ಕಾಂಗ್ ಪ್ರಶ್ನಿಸಿದ್ದರು. ಜತೆಗೆ, ಕೋವ್ಯಾಕ್ಸಿನ್ ಅಂತಿಮ ಪರೀಕ್ಷಾ ವರದಿ ಪ್ರಕಟಿಸಬೇಕು ಎಂದು ಆಗ್ರಹಿಸಿದ್ದರು. ಸಲಹೆಗಾರರ ಅಭಿಪ್ರಾಯವನ್ನು ಸರ್ಕಾರ ಬೆಂಬಲಿಸುತ್ತದೆಯೇ' ಎಂದು ಶಿವಕುಮಾರ್ ಕೇಳಿದ್ದಾರೆ.

'ವೈದ್ಯಕೀಯ ವ್ಯವಸ್ಥೆ ಮೇಲೆ ಭಾರಿ ಒತ್ತಡ'



ನವದೆಹಲಿ (ಎಎಫ್‌ಪಿ): ದೇಶದಲ್ಲಿ ಕೋವಿಡ್-19 ಬಿಕ್ಕಟ್ಟಿನ ಪರಿಣಾಮ ವೈದ್ಯರು, ಮುಂಚೂಣಿ ಕಾರ್ಯಕರ್ತರ ಮೇಲೆ ಒತ್ತಡ ಸೃಷ್ಟಿಯಾಗಿದೆ. ಸಾಂಕ್ರಾಮಿಕದ ಉಲ್ಬಣವು ಅವರ ಜೀವಭಯಕ್ಕೂ ಕಾರಣವಾಗಿದೆ.

ಕಡಿಮೆ ವೇತನ, ಇಡೀ ದಿನದ ಪಾಳಿಗಳು, ಸಿಬ್ಬಂದಿ ಕೊರತೆಯಿಂದ ಇಡೀ ಆರೋಗ್ಯ ರಕ್ಷಣಾ ವ್ಯವಸ್ಥೆ ಅಸ್ತವ್ಯಸ್ತಗೊಂಡಿದೆ ಎಂದು 'ಎಎಫ್‌ಪಿ' ಸುದ್ದಿಸಂಸ್ಥೆ ವರದಿ ಮಾಡಿದೆ.

ದೇಶದಲ್ಲಿ ಏಪ್ರಿಲ್ ಬಳಿಕ ಈವರೆಗೆ ಕನಿಷ್ಠ 1,65,000 ಮಂದಿ ಕೋವಿಡ್ ಸೋಂಕಿನಿಂದ ಮೃತಪಟ್ಟಿದ್ದಾರೆ. ಇತ್ತೀಚಿನ ತಿಂಗಳುಗಳಲ್ಲಿ ದೇಶದಲ್ಲಿ ಕೋವಿಡ್ ಪರಿಸ್ಥಿತಿ ಉಲ್ಬಣಿಸಿದ್ದು, ಪ್ರತಿ ದಿನ 3,000ಕ್ಕೂ ಹೆಚ್ಚು ಮಂದಿ ಸಾವಿಗೀಡಾಗುತ್ತಿದ್ದಾರೆ. ಆರೋಗ್ಯ ವ್ಯವಸ್ಥೆ ಮೇಲೆ ವಿಪರೀತ ಒತ್ತಡ ಉಂಟಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

'ನಾವು ಅತಿಯಾಗಿ ಕೆಲಸ ಮಾಡುತ್ತಿದ್ದೇವೆ ಮತ್ತು ಒತ್ತಡಕ್ಕೆ ಒಳಗಾಗಿದ್ದೇವೆ. ತುಂಬಾ ಭಯಭೀತರಾಗಿದ್ದೇವೆ' ಎಂದು ದೆಹಲಿಯ ಡಾ. ರಾಧಾ ಜೈನ್ ಹೇಳಿದ್ದಾರೆ. ಕೋವಿಡ್‌ನಿಂದಾಗಿ ದೇಶದಲ್ಲಿ 1,200ಕ್ಕೂ ಹೆಚ್ಚು ವೈದ್ಯರು ಮೃತಪಟ್ಟಿದ್ದಾರೆ. ಕಳೆದ ಎರಡು ತಿಂಗಳ ಅವಧಿಯಲ್ಲೇ 500ಕ್ಕೂ ಹೆಚ್ಚು ವೈದ್ಯರು ಅಸುನೀಗಿದ್ದಾರೆ ಎಂದು ಭಾರತೀಯ ವೈದ್ಯಕೀಯ ಸಂಘಟನೆ ಹೇಳಿದೆ.

ಸಾಂಕ್ರಾಮಿಕವು ಭಾರತದ ಆರೋಗ್ಯ ವ್ಯವಸ್ಥೆಯಲ್ಲಿನ, ವಿಶೇಷವಾಗಿ ಸರ್ಕಾರಿ ಆಸ್ಪತ್ರೆಗಳ ದೌರ್ಬಲ್ಯಗಳನ್ನು ಬಹಿರಂಗಪಡಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರವು ಜಿಡಿಪಿಯ ಶೇ 2ಕ್ಕಿಂತಲೂ ಕಡಿಮೆ ಮೊತ್ತವನ್ನು ಆರೋಗ್ಯ ರಕ್ಷಣಾ ವ್ಯವಸ್ಥೆಗೆ ವ್ಯಯಿಸುತ್ತಿದೆ. ಇದು ವಿಶ್ವದಲ್ಲೇ ಕಡಿಮೆ ಎಂದೂ ಉಲ್ಲೇಖಿಸಲಾಗಿದೆ.

ವಿಶ್ವಬ್ಯಾಂಕ್ ವರದಿ ಪ್ರಕಾರ, ದೇಶದಲ್ಲಿ 2017ರ ವೇಳೆಗೆ ಪ್ರತಿ ಸಾವಿರ ಮಂದಿಗೆ ವೈದ್ಯರ ಸಂಖ್ಯೆ ಕೇವಲ 0.8ರಷ್ಟಿತ್ತು. ಇದು ಇರಾಕ್‌ನ ಪರಿಸ್ಥಿತಿಗೆ ಸಮನಾಗಿ ಇದೆ. ಕೋವಿಡ್‌ನಿಂದಾಗಿ ವಿಪರೀತ ಸಂಕಷ್ಟಕ್ಕೀಡಾಗಿದ್ದ ಬ್ರೆಜಿಲ್ ಮತ್ತು ಅಮೆರಿಕಗಳಲ್ಲಿ ಪ್ರತಿ ಸಾವಿರ ಮಂದಿಗೆ ಕ್ರಮವಾಗಿ 2.2 ಮತ್ತು 2.6ರಷ್ಟು ವೈದ್ಯರಿದ್ದಾರೆ.

ಗುಜರಾತ್: 12ನೇ ತರಗತಿ ಪರೀಕ್ಷೆ ರದ್ದು

ನವದೆಹಲಿ: ಕೇಂದ್ರ ಸರ್ಕಾರವು ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸುವ ನಿರ್ಧಾರ ಪ್ರಕಟಿಸಿದ ಬೆನ್ನಲ್ಲೇ ರಾಜ್ಯಗಳು ಪರೀಕ್ಷೆಯ ಕುರಿತು ತೀರ್ಮಾನ ಸ್ಪಷ್ಟಪಡಿಸಿಕೊಂಡಿವೆ. ಗುಜರಾತ್, ಉತ್ತರಾಖಂಡ ಮತ್ತು ಮಧ್ಯ ಪ್ರದೇಶದಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಹೈಯರ್ ಸೆಕೆಂಡರಿ(12ನೇ ತರಗತಿ) ಪರೀಕ್ಷೆಗಳನ್ನು ನಡೆಸದಿರಲು ಬುಧವಾರ ನಿರ್ಧರಿಸಿವೆ.

ಮಧ್ಯ ಪ್ರದೇಶ ಬೋರ್ಡ್‌ನ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಹೈಯರ್ ಸೆಕೆಂಡರಿ ಪರೀಕ್ಷೆಗಳನ್ನು ಗುಜರಾತ್ ಶಿಕ್ಷಣ ಮಂಡಳಿಯು ರದ್ದುಪಡಿಸಿದೆ ಎಂದು ಗುಜರಾತ್‌ನ ಶಿಕ್ಷಣ ಸಚಿವ ಭೂಪೇಂದ್ರ ಸಿನ್ಹ ಚುಡಾಸಮಾ ತಿಳಿಸಿದ್ದಾರೆ. 12ನೇ ತರಗತಿ ಪರೀಕ್ಷೆಗಳನ್ನು ಜುಲೈ 1ರಿಂದ ನಡೆಸಲು ಈ ಹಿಂದೆ ತೀರ್ಮಾನಿಸಲಾಗಿತ್ತು. ಕಳೆದ ವರ್ಷ ಗುಜರಾತ್‌ನಲ್ಲಿ ಮಾ. 5ರಿಂದ 17 ರವರೆಗೂ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗಿತ್ತು. 'ಈಗಿನ ಒತ್ತಡದ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವಂತೆ ಬಲವಂತ ಮಾಡುವುದು ಸರಿಯಲ್ಲ' ಎಂದು ಮಂಗಳವಾರದ ಸಭೆಯಲ್ಲಿ ಪ್ರಧಾನಿ ಹೇಳಿದ್ದರು.

ಆಕ್ರಮಣಶೀಲತೆ ಬೇಡ, ವಿನಮ್ರರಾಗಿ: ರಾಜತಾಂತ್ರಿಕರು, ಮಾಧ್ಯಮಕ್ಕೆ ಷಿ ಸಲಹೆ

ಬೀಜಿಂಗ್ (ಪಿಟಿಐ): 'ದೇಶದ ವಿದ್ಯಮಾನಗಳ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ನೀಡುವ ಸಮಯದಲ್ಲಿ ರಾಜತಾಂತ್ರಿಕರು ನಮ್ರತೆಯಿಂದ ಕೂಡಿದ, ಉತ್ತಮ ಸಂವಹನ ಕೌಶಲ ಅಳವಡಿಸಿಕೊಳ್ಳಬೇಕು. ಮಾಧ್ಯಮ ಸಹ ಇದೇ ಮಾದರಿಯನ್ನು ಅನುಸರಿಸಬೇಕು' ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹೇಳಿದ್ದಾರೆ.

ಕೋವಿಡ್-19 ಪಿಡುಗಿನ ವಿಷಯದಲ್ಲಿ ಚೀನಾ ವಿರುದ್ಧ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಸಮಾಧಾನ ಹೆಚ್ಚುತ್ತಲೇ ಇದೆ. ಇದರಿಂದಾಗಿ ತಾನು ಜಾಗತಿಕವಾಗಿ ಏಕಾಂಗಿಯಾಗುತ್ತಿರುವುದನ್ನು ಚೀನಾ ಒಪ್ಪಿಕೊಂಡಂತಿದೆ. ಇದು ಜಿನ್‌ಪಿಂಗ್ ಅವರ ಈ ಮಾತುಗಳಲ್ಲಿ ವ್ಯಕ್ತವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.


ಅಲ್ಲದೇ, ಚೀನಾ ವಿರುದ್ಧ ಕೇಳಿ ಬರುವ ಟೀಕೆ-ಆರೋಪಗಳಿಗೆ ರಾಜತಾಂತ್ರಿಕರು, ಮಾಧ್ಯಮಗಳು ಪ್ರತಿಕ್ರಿಯಿಸುವ ರೀತಿ ಬಗ್ಗೆ ತಮ್ಮ ಅಸಮಾಧಾನವನ್ನು ಜಿನ್‌ಪಿಂಗ್ ಹೊರಹಾಕಿದ್ದಾರೆ ಎಂದೂ ಕೆಲ ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಚೀನಾ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್‌ಬ್ಯುರೊ ಹಮ್ಮಿಕೊಂಡಿದ್ದ ಅಧ್ಯಯನ ಶಿಬಿರವನ್ನು ಉದ್ದೇಶಿಸಿ ಜಿನ್‌ಪಿಂಗ್ ಅವರ ಭಾಷಣವನ್ನು ಉಲ್ಲೇಖಿಸಿ ಸರ್ಕಾರಿ ಒಡೆತನದ ಪತ್ರಿಕೆ 'ಚೀನಾ ಡೈಲಿ' ವರದಿ ಮಾಡಿದೆ.

'ಚೀನಾದಲ್ಲಿ ಏನಾಗುತ್ತಿದೆ. ಕೆಲವು ವಿಷಯಗಳ ಕುರಿತು ನಮ್ಮ ನಿಲುವುಗಳೇನು ಎಂಬುದನ್ನು ತಿಳಿಸಲು ಹೊಸ ಪರಿಭಾಷೆ, ಅಭಿವ್ಯಕ್ತಿ ಮಾರ್ಗಗಳನ್ನು ಅನುಸರಿಸಬೇಕು' ಎಂದು ಹೇಳಿದರು.

'ತಜ್ಞರನ್ನು ಒಳಗೊಂಡ ಉನ್ನತ ಮಟ್ಟದ ತಂಡ ಈ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸುವುದು ಅಗತ್ಯ. ಅಂತರರಾಷ್ಟ್ರೀಯ ಸಮಾವೇಶಗಳು, ವೇದಿಕೆಗಳು, ಪ್ರಮುಖ ಮಾಧ್ಯಮಗಳನ್ನು ಬಳಸಿಕೊಂಡು ಚೀನಾದ ನಿಲುವನ್ನು ಗಟ್ಟಿಯಾಗಿ ಹೇಳಬೇಕು' ಎಂದು ಷಿ ಹೇಳಿದರು.





ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 30 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3uKxGny**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಜಯಂತಿ ಆರ್.**, 296, 5ನೇ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಕಾಲೋನಿ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು	35,000
2	**ಸುಪ್ರವೇಣಿ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್**, ಪ್ಲಾಟ್ ನಂ. 8ಸಿ1&8 ಸಿ2, 2ನೇ ಅಡ್ಡ ರಸ್ತೆ, ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್ಮೆಂಟ್ ಬೋರ್ಡ್, ಕಾಡುಗೋಡಿ, ಬೆಂಗಳೂರು	20,000
3	**ರೊನಾಲ್ಡ್ ಅನಿಲ್ ಫರ್ನಾಂಡಿಸ್**, ಸದಸ್ಯ, ಕರ್ನಾಟಕ ಲೋಕ ಸೇವಾ ಆಯೋಗ(ಕೆಪಿಎಸ್‌ಸಿ) , ಉದ್ಯೋಗ ಸೌಧ, ಬೆಂಗಳೂರು	20,000
4	**ಸಂಪತ್‌ಕುಮಾರ್ ಕೆ.ಎ.**, ಫ್ಲ್ಯಾಟ್ A402, ಆದರ್ಶ್ ಎಸ್‌ಪ್ಲಾನೆಡ್ ಅಪಾರ್ಟ್‌ಮೆಂಟ್, 12ನೇ ಎ ಮುಖ್ಯರಸ್ತೆ, 25ನೇ ಅಡ್ಡ ರಸ್ತೆ, ಎಚ್‌ಎಸ್‌ಆರ್ ಲೇಔಟ್, ಸೆಕ್ಟರ್ 7, ಬೆಂಗಳೂರು	15,000
5	**ಶಶಿಕಲಾ ಎಸ್.**, ಎನ್ವಿರಾನ್‌ಮೆಂಟ್ ಕನ್ಸಲ್ಟೆಂಟ್, ಬೆಂಗಳೂರು	10,000
6	**ಕೆ.ಆರ್. ನಾರಾಯಣ ಸೆಟ್ಟಿ**, 6 /ಸಿ, ಐ ಎ ಮುಖ್ಯರಸ್ತೆ, ಮೇಟಗಳ್ಳಿ, ಮೈಸೂರು	10,000
7	**ಮುರಳೀಧರ ಎಚ್.ಆರ್.**, ನಂ 564, 9ನೇ ಬ್ಲಾಕ್, 2ನೇ ಹಂತ, ಬಿಡಿಎ ಲೇಔಟ್, ನಾಗರಬಾವಿ, ಬೆಂಗಳೂರು	10,000
8	**ರೇಖಾ ಚಂದ್ರಶೇಖರನ್**, 101, ವಿದ್ಯಾ, 4ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು	10,000
9	**ಪ್ರಕೃತಿ ಕಾಮೇಶ್ವರಿ**, ಫ್ಲ್ಯಾಟ್ ನಂ 4, ಶ್ರೀ ಗುರುನಿವಾಸ ಅಪಾರ್ಟ್‌ಮೆಂಟ್, ನಂ 25 1ನೇ ಮುಖ್ಯರಸ್ತೆ, ಅಮರ ಜ್ಯೋತಿ ಲೇಔಟ್, ಸಂಜಯನಗರ, ಬೆಂಗಳೂರು	5,000
10	**ಅನುಪಮಾ ಹೆಗ್ಡೆ**, 003 ಎಚ್‌ಎಂ, ಕೇಂಬ್ರಿಜ್ ಸ್ಕ್ವೇರ್, 14/2 ಕೇಂಬ್ರಿಜ್ ರಸ್ತೆ, ಬೆಂಗಳೂರು	5,000
11	**ಸುಬ್ಬಲಕ್ಷ್ಮೀ ಸನತ್ ಕುಮಾರ್**, ನಂ.94/03, ಸೌತ್ ಎಂಡ್ ರಸ್ತೆ, ಬಸವನಗುಡಿ, ಬೆಂಗಳೂರು	5,000
12	**ಅಪೂರ್ವ ಆರ್.**, ಎ101, ಆದರ್ಶ್ ರಿದಮ್, 71, 3ನೇ ಮುಖ್ಯರಸ್ತೆ, ಪಾಂಡುರಂಗನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	5,000
13	**ಲೆಫ್ಟಿನೆಂಟ್ ಜನರಲ್ (ನಿವೃತ್ತ) ಎಸ್.ಸಿ.ಸರ್ದೇಶ್‌ಪಾಂಡೆ**, 1ನೇ ಮುಖ್ಯರಸ್ತೆ, ಶ್ರೀನಿವಾಸ್ ಬಿಲ್ಡಿಂಗ್, ಕಬ್ಬೂರ ರಸ್ತೆ, ಧಾರವಾಡ	5,000
14	**ಡಾ.ಮೀರಾ ವಿಜಯಕುಮಾರ್**, #453, 10ನೇ ಮುಖ್ಯರಸ್ತೆ, ಟೆಲಿಕಾಂ ಲೇಔಟ್, ಪೆನ್‌ಫೀಲ್ಡ್ ಗಾರ್ಡನ್, ಜಕ್ಕೂರು, ಬೆಂಗಳೂರು	5,000
15	**ಎನ್‌ವಿಬಿ ರೆಡ್ಡಿ**, ನಂ.427, ಕೆ.ಸಿ.ರೆಡ್ಡಿ ರಸ್ತೆ, ವಿನಾಯಕ ಲೇಔಟ್, ವರ್ತೂರು, ಬೆಂಗಳೂರು	5,000
16	**ಎಂ.ಎಸ್.ಸುನಿಲ್**, ನಂ.56/72, 3ನೇ ಅಡ್ಡರಸ್ತೆ, ಅಮರ ಜ್ಯೋತಿ ನಗರ, ನಾಗರಬಾವಿ ರಸ್ತೆ, ವಿಜಯನಗರ ಬೆಂಗಳೂರು	5,000
17	**ಕೆ.ಪದ್ಮಾಕ್ಷಿ- ಕಾವೇರಿ**, ಎಂಐಜಿ 73, ಕೆಎಚ್‌ಬಿ ಕಾಲೋನಿ, ಕಲ್ಲಹಳ್ಳಿ, ವಿನೋಬನಗರ, ಶಿವಮೊಗ್ಗ	5,000
18	**ಪ್ರೊ.ರಮೇಶ್ ಅನಂತ್ ಪ್ರಭು**, ನಂದಗೋಕುಲ, ವಿವೇಕನಗರ, ಕುಮಟಾ (ಉತ್ತರ ಕನ್ನಡ)	5,000
19	**ಅರವಿಂದ ಕೃಷ್ಣಮೂರ್ತಿ**, ಒ.330, ಗ್ರೌಂಡ್ ಫ್ಲೋರ್, ಶ್ರೀ ಕೃಷ್ಣ ನಿವಾಸ, 6 ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬಸವನಗುಡಿ, ಬೆಂಗಳೂರು	4,000
20	**ಎನ್.ಜಯಸಿಂಹ**, #560, 27ನೇ ಮುಖ್ಯರಸ್ತೆ, 2ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು	3,000
21	**ವೆಂಕಟೇಶ್.ಆರ್.ಗುಡಿ**, ಶ್ರೀ ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಹಳೆ ಸರಫ್ ಬಜಾರ್, ನಲ್ವಾಡ್ ಗಲ್ಲಿ, ಗದಗ	2,500
22	**ಸಾವಿತ್ರಿ ಶರಣಪ್ಪ ಅಂಗಡಿ**, ಎಲ್‌ಐಸಿ ಏಜೆಂಟ್, ಪೊಲೀಸ್ ಠಾಣೆ ರಸ್ತೆ, ಕೆಂಭಾವಿ, ಯಾದಗಿರಿ	2,100
23	**ಎಸ್.ಎನ್. ಶೇಷಗಿರಿ ಪ್ರಸಾದ್**, ಎಫ್ 508, 12 ನೇ ಅಡ್ಡರಸ್ತೆ, ಮೊದಲ ಹಂತ, ಭಾರತ್ ನಗರ	2,000
24	**ನವ್ಯಾ ಮುನಿರಾಜು**, ನಂ.1, ಮಾತೃ ಕೃಪಾ, 3ನೇ ಅಡ್ಡರಸ್ತೆ, ಕಾವೇರಿನಗರ, ಕತ್ರಿಗುಪ್ಪೆ, ಬಿಎಸ್‌ಕೆ 3ನೇ ಹಂತ, ಬೆಂಗಳೂರು	2,000
25	**ಪವನ್ ಆರ್**.,#71, 4ನೇ ಅಡ್ಡರಸ್ತೆ, ಮೊದಲನೇ ಮುಖ್ಯರಸ್ತೆ, ಗೋವಿನಾಯಕನಹಳ್ಳಿ, ಕುಮಾರಸ್ವಾಮಿ ಲೇಔಟ್, ಎರಡನೇ ಹಂತ, ಬೆಂಗಳೂರು	1,500
26	**ಅಶೋಕ್ ಕುಮಾರ್ ಹಲ್ಲೂರು**, ನಂ.182, ಎ2 ಬ್ಲಾಕ್, ಯಲಹಂಕ ನ್ಯೂಟೌನ್, ಬೆಂಗಳೂರು	1,001
27	**ಸಂತೋಷ್ ಕೆ.ವಿ.**, ಬೆಂಗಳೂರು	1,000
28	**ಉದಯಕುಮಾರ್ ಯು ಬಿ**, 182, 8ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, 1ನೇ ಹಂತ, ವಿಜಯನಗರ, ಮೈಸೂರು	1,000
29	**ವಿಜಯ ಕುಮಾರ್ ಕೆ.ಎಸ್.**, 323/ಎ, 7ನೇ ಮುಖ್ಯರಸ್ತೆ, 1 ನೇ ಅಡ್ಡರಸ್ತೆ, ಕೆ.ಆರ್ ಪುರಂ ಎಕ್ಸ್‌ಟೆನ್ಷನ್, ಬೆಂಗಳೂರು	1,000
30	**ಕಲಾವತಿ ಆರ್.**, 73, 4ನೇ ಅಡ್ಡರಸ್ತೆ, 2ನೇ ಹಂತ, ಆರ್‌ಎಂಎಸ್ ಕಾಲೋನಿ, ಸಂಜಯನಗರ, ಬೆಂಗಳೂರು	1,000
	ಒಟ್ಟು ಹಣ	2,02,101

ಭಾರತಿ ಅವರ ಹೌಸ್‌ಕೀಪಿಂಗ್ ಉದ್ಯಮ



ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ಆತಿಥ್ಯ ಉದ್ಯಮ ಕ್ಷೇತ್ರದಲ್ಲಿ ಇರುವ ಕೆಲವು ಕೊರತೆಗಳನ್ನು ಗಮನಿಸಿದ ಭಾರತಿ ಕಾಮತ್, ತಾವೇ ಸ್ವಂತದ್ದೊಂದು ಉದ್ಯಮ ಆರಂಭಿಸಬಹುದು ಎಂದು ತೀರ್ಮಾನಿಸಿದರು. ಅವರು 13 ವರ್ಷಗಳ ಕಾಲ ದೇಶದ ಕೆಲವು ಪ್ರತಿಷ್ಠಿತ ಹೋಟೆಲ್ ಉದ್ಯಮಗಳಲ್ಲಿ ಹೌಸ್‌ಕೀಪಿಂಗ್ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದ್ದರು. ಈ ವಿಭಾಗದಲ್ಲಿ ಹಲವು ಕೊರತೆಗಳಿರುವುದು, ತರಬೇತಿ ಹೊಂದಿದ ಮಾನವ ಸಂಪನ್ಮೂಲ ಇಲ್ಲದಿರುವುದು, ಲಿಂಗ ತಾರತಮ್ಯ ಇರುವುದು, ಗುಣಮಟ್ಟದ ಹಾಗೂ ಸಮರ್ಪಕ ಸೇವೆಗಳ ಕೊರತೆ ಇರುವುದನ್ನು ಅವರು ಗುರುತಿಸಿದ್ದರು.


ಈ ಸವಾಲುಗಳಿಗೆ ಉತ್ತರವಾಗಿ ಭಾರತಿ ಅವರು ಕೇರ್‌ವೆಲ್ ಫೆಸಿಲಿಟೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯನ್ನು ಆರಂಭಿಸಿದರು. ಕಚೇರಿಗಳ ನಿರ್ವಹಣೆ ಮತ್ತು ಸೌಲಭ್ಯಗಳ ಉಸ್ತುವಾರಿ ಕ್ಷೇತ್ರದತ್ತ ಈ ಕಂಪನಿ ಗಮನ ಹರಿಸಿತು. ಬೆಂಗಳೂರಿನಲ್ಲಿರುವ ಕಾರ್ಪೊರೇಟ್ ಕಂಪನಿಗಳಿಗೆ ವೃತ್ತಿಪರ ಹೌಸ್‌ಕೀಪಿಂಗ್ ಸೇವೆ ಒದಗಿಸುವ ಉದ್ದೇಶದೊಂದಿಗೆ ಆರಂಭವಾದ ಕಂಪನಿ ಈಗ ವಸತಿ ಮತ್ತು ವಾಣಿಜ್ಯ ಸಂಕೀರ್ಣಗಳು, ಶೈಕ್ಷಣಿಕ ಸಂಸ್ಥೆಗಳು, ಮಾಹಿತಿ ತಂತ್ರಜ್ಞಾನ ಕಂಪನಿಗಳು, ಆಸ್ಪತ್ರೆ, ಹೋಟೆಲ್ ಹಾಗೂ ಉತ್ಪಾದನಾ ಘಟಕಗಳಲ್ಲಿಯ ಸೌಲಭ್ಯ ನಿರ್ವಹಣೆಯ ಉಸ್ತುವಾರಿ ವಹಿಸಿಕೊಂಡಿದೆ.

ಕಂಪನಿಯ ಸಿಬ್ಬಂದಿಯಲ್ಲಿ ಶೇಕಡ 50ರಷ್ಟು ಮಂದಿ ಮಹಿಳೆಯರೇ. ಕಂಪನಿಯು ಸಂಖ್ಯೆಗಿಂತಲೂ ಗುಣಮಟ್ಟಕ್ಕೆ ಆದ್ಯತೆ ನೀಡುತ್ತ ಬಂದಿದೆ. ಭಾರತಿ ಅವರು ತಮ್ಮದೇ ವಹಿವಾಟು ಆರಂಭಿಸಿರುವುದಕ್ಕೆ ಒಂದು ಪ್ರೇರಣೆಯೂ ಇದೆ. ಐ.ಟಿ. ಕಂಪನಿಗಳು ಆರಂಭದಲ್ಲಿ ಹೌಸ್‌ಕೀಪಿಂಗ್‌ನಂಥ ಮಹತ್ವದ್ದಲ್ಲದ ವಿಭಾಗಗಳ ನಿರ್ವಹಣೆಯನ್ನು ಹೊರಗುತ್ತಿಗೆ ನೀಡುತ್ತಿದ್ದುದನ್ನು ಭಾರತಿ ಗಮನಿಸಿದರು. ತಮ್ಮಲ್ಲಿದ್ದ ವೃತ್ತಿಪರತೆ ಮತ್ತು ತಾವು ಹೋಟೆಲ್‌ಗಳಲ್ಲಿ ಕೆಲಸ ಮಾಡಿ ಪಡೆದ ಅನುಭವ ಇಲ್ಲಿ ನೆರವಿಗೆ ಬರಬಹುದು, ಈ ಸೇವಾ ವಲಯದಲ್ಲಿ ಒಂದಿಷ್ಟು ಬದಲಾವಣೆ ತರಲು ನೆರವಾಗಬಹುದು ಎಂದು ಅವರು ಭಾವಿಸಿದರು.

ಕೋವಿಡ್–19 ಸಾಂಕ್ರಾಮಿಕವು ಹಲವು ಉದ್ಯಮ ವಲಯಗಳ ಮೇಲೆ ಕೆಟ್ಟ ಪರಿಣಾಮ ಬೀರಿದ ರೀತಿಯಲ್ಲೇ ಭಾರತಿ ಅವರ ಕಂಪನಿಯ ಆದಾಯದ ಮೇಲೆಯೂ ದುಷ್ಪರಿಣಾಮ ಉಂಟುಮಾಡಿತು. ಆದರೆ ಕೆಲವೊಮ್ಮೆ ಬಿಕ್ಕಟ್ಟುಗಳು ಕೂಡ ಹೊಸ ಅವಕಾಶಗಳನ್ನು ತೆರೆಯುವ ಸಾಧ್ಯತೆ ಇರುತ್ತದೆ. ಕೇರ್‌ವೆಲ್ ಸಂಸ್ಥೆಯು ಸಾರ್ವಜನಿಕ ಸ್ಥಳಗಳ ನೈರ್ಮಲ್ಯತೆಗೆ ಸಿಕ್ಕ ಆದ್ಯತೆಯನ್ನು, ತನಗೆ ದೊರೆತ ಅವಕಾಶವನ್ನಾಗಿ ಬಳಸಿಕೊಂಡಿತು. ಆದಾಯ ಕೊರತೆಯನ್ನೂ ಸಿಬ್ಬಂದಿಯ ಕೊರತೆಯನ್ನೂ ಕಂಪನಿಯು ಎದುರಿಸಿತು. ಆದರೆ ತರಬೇತಿ ಹೊಂದಿದ್ದ ಮತ್ತು ಚೆನ್ನಾಗಿ ಸಿದ್ಧತೆ ಹೊಂದಿರುವ ಸಿಬ್ಬಂದಿ ಮರಳಿ ಕಂಪನಿಯ ತೆಕ್ಕೆಗೆ ಬಂದರು.

ಇತರ ಉದ್ಯಮಗಳು ಹಾಗೂ ವ್ಯಕ್ತಿಗಳಿಗೆ ನೆರವಿಗೆ ಬರಬಹುದಾದ ಆಯಾಮಗಳ ಮೇಲೆ ಹೆಚ್ಚು ಗಮನಹರಿಸುವ ಸಾಮರ್ಥ್ಯವನ್ನು ಉದ್ಯಮಿಗಳು ಹೊಂದಿರಬೇಕು ಎನ್ನುತ್ತಾರೆ ಭಾರತಿ. ಜೊತೆಗೆ ಗ್ರಾಹಕರ ಅಗತ್ಯತೆಗಳಿಗೆ ತಕ್ಕಂತೆ ತಮ್ಮ ಸೇವೆಗಳನ್ನು ಬದಲಿಸುವ ಕೌಶಲ್ಯವೂ ಅವರಲ್ಲಿರಬೇಕು. ತಮ್ಮ ಸೇವೆಗಳ ಜೊತೆ ತಂತ್ರಜ್ಞಾನವನ್ನು ಬಳಸಿಕೊಂಡರೆ ಕಂಪನಿಯೊಂದು ಅಭಿವೃದ್ಧಿ ಹೊಂದಬಹುದು ಎಂದು ಅವರು ನಂಬಿದ್ದಾರೆ.

ಉದ್ಯಮಿಗಳಿಗೆ ಭಾರತಿ ಅವರು ಹೇಳುವುದಿಷ್ಟು: 'ನಮ್ಮ ದೇಶ ಮತ್ತು ಸಂಸ್ಕೃತಿ ಮತ್ತು ಇತರ ಮಹಿಳಾ ಉದ್ಯಮಿಗಳ ಬೆಂಬಲ ನಿಮಗಿರಬೇಕಾದರೆ ನಿಮ್ಮ ಗುರಿಯತ್ತ ದಿಟ್ಟ ಹೆಜ್ಜೆ ಇಡಿ.'



ಭಾರತಿ ಕಾಮತ್

ಉತ್ಪನ್ನಗಳ ಪೌಷ್ಟಿಕಾಂಶ ಹೆಚ್ಚಿಸುವತ್ತ ಗಮನ: ನೆಸ್ಲೆ

ನವದೆಹಲಿ (ಪಿಟಿಐ): ತನ್ನ ಎಲ್ಲ ಉತ್ಪನ್ನಗಳಲ್ಲಿನ ಪೌಷ್ಟಿಕಾಂಶ ಪ್ರಮಾಣವನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ (ಎಫ್‌ಎಂಸಿಜಿ) ಉತ್ಪನ್ನಗಳ ಕಂಪನಿ ನೆಸ್ಲೆ ಹೇಳಿದೆ.

ಕಂಪನಿಯ ಪ್ರಮುಖ ಆಹಾರ ಹಾಗೂ ಪಾನೀಯ ಉತ್ಪನ್ನಗಳ ಪೈಕಿ ಶೇಕಡ 60ರಷ್ಟಕ್ಕಿಂತ ಹೆಚ್ಚಿನ ಉತ್ಪನ್ನಗಳು 'ಪೌಷ್ಟಿಕಾಂಶದ ವಿಚಾರದಲ್ಲಿ ಗುರುತಿಸಲಾಗಿರುವ ಮಟ್ಟ ತಲುಪಲು ವಿಫಲವಾಗಿವೆ' ಎಂದು ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಯು ಸೋಮವಾರ ವರದಿ ಮಾಡಿತ್ತು.

'ತಾನು ಸಿದ್ಧಪಡಿಸುವ ಆಹಾರ ಮತ್ತು ಪಾನೀಯ ಉತ್ಪನ್ನಗಳ ಪೈಕಿ ಶೇ 60ರಷ್ಟಕ್ಕಿಂತ ಹೆಚ್ಚಿನ ಉತ್ಪನ್ನಗಳು ಆರೋಗ್ಯದ ವಿಚಾರದಲ್ಲಿ ಗುರುತಿಸಲಾಗಿರುವ ಮಟ್ಟ ತಲುಪುವುದಿಲ್ಲ ಎಂದು ವಿಶ್ವದ ಅತಿದೊಡ್ಡ ಆಹಾರ ಉತ್ಪನ್ನಗಳ ಕಂಪನಿಯಾದ ನೆಸ್ಲೆ ಒಪ್ಪಿಕೊಂಡಿದೆ. ಅಲ್ಲದೆ, ತಾನು ಎಷ್ಟೇ ಸುಧಾರಣೆ ತಂದರೂ ಕೆಲವು ಉತ್ಪನ್ನಗಳು ಆರೋಗ್ಯಕರ ಆಗುವುದಿಲ್ಲ ಎಂದು ಕಂಪನಿ ಹೇಳಿದೆ' ಎಂದು ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಯು ನೆಸ್ಲೆ ಕಂಪನಿಯ ಕಡತವೊಂದನ್ನು ಉಲ್ಲೇಖಿಸಿ ವರದಿ ಮಾಡಿದೆ.

ಕಿಟ್‌ಕ್ಯಾಟ್ ಚಾಕಲೇಟ್, ಮ್ಯಾಗಿ ನೂಡಲ್ಸ್ ಹಾಗೂ ನೆಸ್ಕೆಫೆಯಂತಹ ಜನಪ್ರಿಯ ಉತ್ಪನ್ನಗಳನ್ನು ತಯಾರಿಸುವ ನೆಸ್ಲೆ ಕಂಪನಿಯು ಹೇಳಿಕೆಯೊಂದನ್ನು ಹೊರಡಿಸಿದ್ದು, 'ಜನರ ಪೌಷ್ಟಿಕಾಂಶದ ಅಗತ್ಯವನ್ನು ನಮ್ಮ ಉತ್ಪನ್ನಗಳು ಪೂರೈಸುವಂತೆ ಆಗುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ' ಎಂದು ತಿಳಿಸಿದೆ.

ಕಳೆದ ಎರಡು ದಶಕಗಳ ಅವಧಿಯಲ್ಲಿ ಕಂಪನಿಯು ತನ್ನ ಉತ್ಪನ್ನಗಳಲ್ಲಿನ ಸಕ್ಕರೆ ಹಾಗೂ ಸೋಡಿಯಂ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಿದೆ. ಕಳೆದ ಏಳು ವರ್ಷಗಳ ಅವಧಿಯಲ್ಲಿಯೇ ಶೇ 7ರಷ್ಟು ಕಡಿಮೆ ಮಾಡಲಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಮಕ್ಕಳಿಗಾಗಿ ಹಾಗೂ ಕುಟುಂಬಗಳಿಗಾಗಿ ಬಿಡುಗಡೆ ಮಾಡಿರುವ ಉತ್ಪನ್ನಗಳು ಅವರ ಬಾಹ್ಯ ಪೌಷ್ಟಿಕಾಂಶದ ಅಗತ್ಯವನ್ನು ಪೂರೈಸುವಂತೆ ಇವೆ ಎಂದು ಕಂಪನಿ ಹೇಳಿದೆ.

ಭಾರತದಲ್ಲಿ ನೆಸ್ಲೆ ಕಂಪನಿಯು ಎಂಟು ಉತ್ಪಾದನಾ ಘಟಕಗಳನ್ನು ಹೊಂದಿದೆ. 2020ರಲ್ಲಿ ಒಟ್ಟು ₹ 13 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ಕಂಪನಿ ಭಾರತದಲ್ಲಿ ಮಾರಾಟ ಮಾಡಿತ್ತು.

ಹಂತ ಹಂತವಾಗಿ ಅನ್‌ಲಾಕ್: ಫಿಕ್ಕಿ ಆಗ್ರಹ

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸ ಕೊರೊನಾ ಪ್ರಕರಣಗಳು ಕಡಿಮೆ ಆಗುತ್ತಿರುವ ಕಾರಣ, ಆರ್ಥಿಕ ಚಟುವಟಿಕೆಗಳ ಆರಂಭಕ್ಕೆ ಹಂತ ಹಂತವಾಗಿ ಅವಕಾಶ ಕಲ್ಪಿಸಬೇಕು ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಫಿಕ್ಕಿ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಯಾವುದಾದರೂ ಕೈಗಾರಿಕೆಯು ತನ್ನ ಕಾರ್ಮಿಕರನ್ನು ಇತರರ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದರೆ, ಆ ಕೈಗಾರಿಕೆಯು ಅಗತ್ಯ ಸೇವೆಗಳ ವಿಭಾಗದಲ್ಲಿ ಇರದಿದ್ದರೂ ಅದಕ್ಕೆ ಕಾರ್ಯ ನಿರ್ವಹಿಸಲು ಅವಕಾಶ ಕೊಡಬೇಕು ಎಂದು ಫಿಕ್ಕಿ ಹೇಳಿದೆ.

ನಿರ್ಬಂಧಗಳನ್ನು ಜಾರಿಗೆ ತರಲು ಬಹಳ ಕಾಲ ಕಾಯುವುದರ ಪರಿಣಾಮವಾಗಿ, ಕೋವಿಡ್ ಪ್ರಕರಣಗಳು ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಾಣಬಹುದು. ಅದು ವೈದ್ಯಕೀಯ ಮೂಲಸೌಕರ್ಯದ ಮೇಲೆ ತೀವ್ರ ಒತ್ತಡ ಸೃಷ್ಟಿಸಬಹುದು ಎಂಬುದನ್ನು ಎರಡನೆಯ ಅಲೆಯ ಉಗ್ರ ಅವತಾರವು ತೋರಿಸಿಕೊಟ್ಟಿದೆ ಎಂದು ಒಕ್ಕೂಟವು ಹೇಳಿದೆ.

'ಜೀವ ಮತ್ತು ಜೀವನೋಪಾಯದ ನಡುವೆ ಸಮತೋಲನ ಕಾಯ್ದುಕೊಂಡು, ಆರ್ಥಿಕ ಚಟುವಟಿಕೆಗಳನ್ನು ಹಂತ ಹಂತವಾಗಿ ಆರಂಭಿಸುವ ಸಲಹೆಯನ್ನು ನಾವು ಮುಂದಿಡುತ್ತಿದ್ದೇವೆ' ಎಂದು ಅದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದೆ. ಕನಿಷ್ಠ ಶೇಕಡ 60ರಷ್ಟು ಕಾರ್ಮಿಕರಿಗೆ ಒಂದು ಡೋಸ್ ಲಸಿಕೆ ಹಾಕಿಸಿರುವ ಉದ್ದಿಮೆಗಳನ್ನು ನಿರ್ಬಂಧಗಳಿಂದ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿದೆ.

ನೆರವಿಗೆ ಅಸೋಚಾಂ ಆಗ್ರಹ

ವೇತನ ಪಾವತಿಗೆ ನೆರವು, ನಿಯಮಗಳಲ್ಲಿ ತುಸು ಸಡಿಲಿಕೆ, ಸಾಲದ ಮೇಲಿನ ಬಡ್ಡಿಗೆ ಸಬ್ಸಿಡಿಯಂತಹ ನೆರವನ್ನು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳಿಗೆ ನೀಡಬೇಕು ಎಂದು ವಾಣಿಜ್ಯೋದ್ಯಮಗಳ ಸಂಘಟನೆಯಾದ ಅಸೋಚಾಂ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಕೆಲವು ರಾಜ್ಯಗಳು ಲಾಕ್‌ಡೌನ್ ನಿಯಮಗಳನ್ನು ಸಡಿಲಿಸುವ ಆಲೋಚನೆಯಲ್ಲಿ ಇವೆ. ಈ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಎಲ್ಲ ರೀತಿಯ ಬೆಂಬಲದ ಅಗತ್ಯ ಇದೆ ಎಂದು ಅಸೋಚಾಂ ಹೇಳಿದೆ. ಕಾರ್ಮಿಕರ ರಾಜ್ಯ ವಿಮಾ ನಿಗಮದಲ್ಲಿ (ಇಎಸ್‌ಐಸಿ) ಇರುವ ಹೆಚ್ಚುವರಿ ನಿಧಿಯನ್ನು ವೇತನ ನೀಡಲು ನೆರವಾಗುವುದಕ್ಕೆ ಅಥವಾ ನೌಕರ ವರ್ಗಕ್ಕೆ ಪರಿಹಾರ ಪ್ಯಾಕೇಜ್‌ಗೆ ಬಳಸಿಕೊಳ್ಳಬಹುದು ಎಂದು ಅದು ಹೇಳಿದೆ.

'ಹಣಕಾಸಿನ ಮಾನದಂಡಗಳಿಗೆ ಅತಿಯಾದ ಗಮನ ಕೊಡದೆ, ಖರ್ಚು ಮಾಡಬೇಕಿರುವ ಹಾಗೂ ಖರ್ಚುಗಳಿಗೆ ನೆರವು ನೀಡಬೇಕಿರುವ ಸಮಯ ಇದು' ಎಂದು ಸಂಘಟನೆಯು ಅಭಿಪ್ರಾಯ ವ್ಯಕ್ತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಇಸ್ರೇಲ್ ಅಧ್ಯಕ್ಷರಾಗಿ ಹರ್ಜಾಗ್ ಆಯ್ಕೆ

ಜೆರುಸಲೇಮ್: ಹಿರಿಯ ರಾಜಕಾರಣಿ ಐಸಾಕ್ ಹರ್ಜಾಗ್ ಅವರು ಇಸ್ರೇಲ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ಐಸಾಕ್ ಹರ್ಜಾಗ್

120 ಸದಸ್ಯ ಬಲದ ಇಸ್ರೇಲ್ ಸಂಸತ್‌ನಲ್ಲಿ ಗುಪ್ತ ಮತದಾನದ ಮೂಲಕ ಈ ಆಯ್ಕೆ ನಡೆಯಿತು. ಪ್ರಸ್ತುತ ಅಧ್ಯಕ್ಷರಾಗಿರುವ ರೆವೆನ್ ರಿವ್‌ಲಿನ್ ಅವರ ಅಧಿಕಾರಾವಧಿ ಮುಂದಿನ ತಿಂಗಳು ಕೊನೆಗೊಳ್ಳಲಿದೆ.

ಹರ್ಜಾಗ್ ಅವರು ಲೇಬರ್ ಪಾರ್ಟಿಯ ಮುಖ್ಯಸ್ಥರೂ ಆಗಿದ್ದರು. ಕೆಲ ಕಾಲ ವಿರೋಧ ಪಕ್ಷದ ನಾಯಕರೂ ಆಗಿದ್ದ ಅವರು, 2013ರಲ್ಲಿ ಪ್ರಧಾನಿ ಬೆಂಜಮಿನ್ ನೇತನ್ಯಾಹು ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

'ಡೆಲ್ಟಾ ರೂಪಾಂತರ' ವೈರಸ್ ಕಳವಳಕಾರಿ: ಡಬ್ಲ್ಯುಎಚ್‌ಒ

ನಿವಾ (ಎಎಫ್‌ಪಿ): ಭಾರತದಲ್ಲಿ ಮೊದಲು ಪತ್ತೆಯಾದ ಕೋವಿಡ್ -19 'ಡೆಲ್ಟಾ ರೂಪಾಂತರ' ವೈರಸ್ ಅತ್ಯಂತ 'ಕಳವಳಕಾರಿ'ಯಾದದ್ದು ಎಂದು ಪರಿಗಣಿಸಲಾಗಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ತಿಳಿಸಿದೆ.

ಇದೇವೇಳೆ, ಉಳಿದೆರಡು ತಳಿಗಳು ಅಷ್ಟು ಅಪಾಯಕಾರಿಯಲ್ಲ ಎಂದು ವಿಶ್ವ ಸಂಸ್ಥೆಯ ಆರೋಗ್ಯ ಸಂಸ್ಥೆ ಹೇಳಿದೆ.

ಭಾರತದಲ್ಲಿ ಏಕಾಏಕಿ ಕೋವಿಡ್ ಸ್ಫೋಟಕ್ಕೆ ಕಾರಣವೆಂದು ಹೇಳಲಾದ ವೈರಸ್‌ನ ಬಿ .1.617 ರೂಪಾಂತರವು ಮೂರು ವಂಶಾವಳಿಗಳಾಗಿ ವಿಂಗಡಣೆ ಆಗಿರುವುದರಿಂದ ಅದನ್ನು ಟ್ರಿಪಲ್ ರೂಪಾಂತರಗೊಂಡ ವೈರಸ್ ಎಂದು ಕರೆಯಲಾಗುತ್ತದೆ.

ಮುಂಬೈ: ಡ್ರಗ್ ಪೆಡ್ಲರ್ ಹ್ಯಾರಿಸ್ ಖಾನ್ ಬಂಧನ

ಮುಂಬೈ (ಪಿಟಿಐ): ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹಚರ ಹಾಗೂ ಡ್ರಗ್ ಪೆಡ್ಲರ್ ಪರ್ವೇಜ್ ಖಾನ್ ಅಲಿಯಾಸ್ ಚಿಂಕು ಪಠಾಣ್‌ನೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇರೆಗೆ ಡ್ರಗ್ ಪೆಡ್ಲರ್ ಹ್ಯಾರಿಸ್ ಖಾನ್‌ನನ್ನು ಮುಂಬೈನ ಮಾದಕವಸ್ತು ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

ಬಾಲಿವುಡ್‌ನ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿಗೆ ಸಂಬಂಧಿಸಿದ ಡ್ರಗ್ಸ್ ಪ್ರಕರಣದಲ್ಲಿ ಖಾನ್ ಪಾತ್ರವಿರುವ ಕುರಿತು ಎನ್‌ಸಿಬಿ ತನಿಖೆ ನಡೆಸಲಿದೆ ಎಂದು ಎನ್‌ಸಿಬಿ ಅಧಿಕಾರಿ ತಿಳಿಸಿದರು.

ಎನ್‌ಸಿಬಿ ವಲಯ ನಿರ್ದೇಶಕ ಸಮೀರ್ ವಾಂಖೆಡೆ ನೇತೃತ್ವದ ತಂಡ, ಮುಂಬೈನ ಅಂಧೇರಿ ಉಪನಗರ, ಲೋಖಂಡ್ವಾಲಾ ಮತ್ತು ಬಾಂದ್ರಾ ಸೇರಿದಂತೆ ವಿವಿಧ ಸ್ಥಳಗಳಲ್ಲಿ ದಾಳಿ ನಡೆಸಿ, ಖಾನ್‌ನನ್ನು ಮಂಗಳವಾರ ಬಂಧಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.


ಇರಾನ್‌ನ ಯುದ್ಧನೌಕೆ ಬೆಂಕಿಗೆ ಆಹುತಿ

ಟೆಹರಾನ್ (ಎಪಿ): ಇರಾನ್‌ನ ಬೃಹತ್ ಯುದ್ಧನೌಕೆ 'ಖಾರ್ಗ್' ಬೆಂಕಿಗೆ ಆಹುತಿಯಾಗಿದ್ದು, ಒಮಾನ್ ಗಲ್ಫ್ ಪ್ರದೇಶದಲ್ಲಿ ಮುಳುಗಿದೆ. ಈ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ಪರ್ಷಿಯನ್ ಕೊಲ್ಲಿಯ ಹಾರ್ಮುಜ್ ಜಲಸಂಧಿಯ ಬಳಿ ಒಮಾನ್ ಕೊಲ್ಲಿಯಲ್ಲಿ ಜಸ್ಕ್ ಬಂದರಿನ ಸಮೀಪ ಹಡಗು ಮುಳುಗಿತು. 1977ರಲ್ಲಿ ಬ್ರಿಟನ್‌ನಲ್ಲಿ ನಿರ್ಮಾಣವಾದ ಈ ಯುದ್ಧನೌಕೆ 1984ರಲ್ಲಿ ಇರಾನ್‌ಗೆ ಹಸ್ತಾಂತರಗೊಂಡಿತ್ತು. ಪ್ರಮುಖ ಸರಕು ಸಾಗಣೆ ನೌಕೆಯಾಗಿ ಹಾಗೂ ಹೆಲಿಕಾಪ್ಟರ್‌ಗಳ ಚಿಮ್ಮು ಹಲಗೆಯಾಗಿ ಇದು ಬಳಕೆಯಾಗುತ್ತಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,574
ಇಂದಿನ ಅಂತ್ಯ	15,576
▲	1.35
ದಿನದ ಗರಿಷ್ಠ	15,597

ವಿನಿಮಯ ದರ

$ ಡಾಲರ್	73.09
£ ಪೌಂಡ್	103.37
€ ಯುರೊ	89.02
¥ ಯೆನ್ (100ಕ್ಕೆ)	66.56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1430 (1410)
ಸೋಯಾ (ರಿಫೈನ್ಡ್)	₹1405 (1370)
ಸೂರ್ಯಕಾಂತಿ (ರಿಫೈನ್ಡ್)	₹1560(1650)
ಪಾಮೋಲಿನ್	₹1225 (1240)

ಸಿಲಿಂಡರ್ ಸ್ಫೋಟ, ಎಂಟು ಮಂದಿ ಸಾವು

ಗೊಂಡಾ (ಉತ್ತರ ಪ್ರದೇಶ) (ಪಿಟಿಐ): ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡದ್ದರಿಂದ ಎರಡು ಅಂತಸ್ತಿನ ಕಟ್ಟಡ ಕುಸಿದು ಮೂವರು ಮಕ್ಕಳು ಸೇರಿದಂತೆ ಎಂಟು ಮಂದಿ ಮೃತಪಟ್ಟ ಘಟನೆ ಸಮೀಪದ ಟಿಕ್ರಿ ಹಳ್ಳಿಯಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಘಟನೆಯಲ್ಲಿ ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಲಖನೌ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ನೂರುಲ್ ಹಾಸನ್ ಎಂಬುವವರಿಗೆ ಸೇರಿದ ಎರಡು ಅಂತಸ್ತಿನ ಕಟ್ಟಡದಲ್ಲಿ ಮಂಗಳವಾರ ರಾತ್ರಿ 10 ಗಂಟೆ ಸುಮಾರಿಗೆ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡಿದೆ. ಇದರಿಂದ ಕಟ್ಟಡ ಕುಸಿದಿದೆ.

ಸ್ಥಳದಲ್ಲೇ ಎಂಟು ಮಂದಿ ಮೃತಪಟ್ಟು, ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ' ಎಂದು ಜಿಲ್ಲಾಧಿಕಾರಿ ಮಾರ್ಕಂಡೇಯ ಶಾಹಿ ತಿಳಿಸಿದ್ದಾರೆ. ಮೃತರನ್ನು ನಿಸಾರ್ ಅಹ್ಮದ್ (35), ರುಬಿನಾ ಬಾನೊ (32), ಶಂಶಾದ್ (28), ಸೈರುನಿಷಾ (35), ಶಹಬಾಜ್ (14), ನೂರಿ ಸಬಾ (12), ಮೆರಾಜ್ (11) ಮತ್ತು ಮೊಹಮ್ಮದ್ ಶೋಯಾಬ್ (2) ಎಂದು ಗುರುತಿಸಲಾಗಿದೆ.

ಜೂಹಿ ಚಾವ್ಲಾ ಚಿತ್ರಗಳ ಗೀತೆ ಹಾಡಿದ ಅಪರಿಚಿತ: ಅರ್ಜಿ ವಿಚಾರಣೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: 5ಜಿ ವೈರ್‌ಲೆಸ್ ನೆಟ್‌ವರ್ಕ್ ವಿರೋಧಿಸಿ ನಟಿ ಹಾಗೂ ಪರಿಸರವಾದಿ ಜೂಹಿ ಚಾವ್ಲಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ದೆಹಲಿ ಹೈಕೋರ್ಟ್‌ನಲ್ಲಿ ಆನ್‌ಲೈನ್ ಮೂಲಕ ಬುಧವಾರ ನಡೆದಿತ್ತು. ಈ ವೇಳೆ ಅಪರಿಚಿತ ವ್ಯಕ್ತಿಯೊಬ್ಬ ಜೂಹಿ ಅವರು ನಟಿಸಿದ ಚಿತ್ರಗಳ ಗೀತೆಗಳನ್ನು ಹಾಡಿದ್ದರಿಂದ ಅರ್ಜಿ ವಿಚಾರಣೆಗೆ ಮೂರು ಬಾರಿ ಅಡ್ಡಿಯುಂಟಾದ ಘಟನೆ ನಡೆಯಿತು.

ಅರ್ಜಿ ವಿಚಾರಣೆ ಆರಂಭಗೊಂಡ ನಂತರ, ನಟಿ ಜೂಹಿ ಚಾವ್ಲಾ ಅವರು ಆನ್‌ಲೈನ್ ಮೂಲಕ ಈ ವಿಚಾರಣೆಗೆ ಸೇರ್ಪಡೆಗೊಂಡರು. ಇದರ ಬೆನ್ನಲ್ಲೇ ಒಬ್ಬ ವ್ಯಕ್ತಿ, 1993ರಲ್ಲಿ ತೆರೆಕಂಡ 'ಹಮ್ ಹೈ ರಾಹಿ ಪ್ಯಾರ್ ಕೆ' ಚಿತ್ರದ 'ಘೂಂಘಟ್ ಕಿ ಆಡ್ ಸೆ ದಿಲ್‌ಬರ್ ಕಾ' ಎಂಬ ಗೀತೆಯನ್ನು ಹಾಡಲು ಆರಂಭಿಸಿದರು.

ತಕ್ಷಣ, ನ್ಯಾಯಮೂರ್ತಿ ಜೆ.ಆರ್.ಮಿಧಾ ಅವರು 'ದಯವಿಟ್ಟು ಮ್ಯೂಟ್ ಮಾಡಿ' ಎಂದು ಸೂಚಿಸಿದರು. ಜೂಹಿ ಚಾವ್ಲಾ ಪರ ವಕೀಲ ದೀಪಕ್ ಖೋಸ್ಲಾ ಅವರು, 'ಪ್ರತಿವಾದಿಗಳ ಪೈಕಿ ಯಾರಾದರೂ ಈ ಹಾಡನ್ನು ಹಾಕಿರಲಿಕ್ಕಿಲ್ಲ ಎಂದು ಭಾವಿಸುವೆ' ಎಂದು ಹೇಳಿದರು.

ವಿಚಾರಣೆ ಮುಂದುವರಿದಾಗ, ಎರಡನೇ ಬಾರಿ 'ಲಾಲ್ ಲಾಲ್ ಹೋಂಟೋ ಪೆ..' ಎಂಬ ಹಾಡು ಕೇಳಿಬಂದರೆ, ಮೂರನೇ ಸಲ 'ಮೇರಿ ಬನ್ನೋ ಕಿ ಆಯೇಗಿ ಕಿ ಬಾರಾತ್' ಎಂಬ ಹಾಡನ್ನು ಒಬ್ಬ ವ್ಯಕ್ತಿ ಹಾಡಿದ.

ಇದರಿಂದ ಅಸಮಾಧಾನಗೊಂಡ ನ್ಯಾಯಮೂರ್ತಿಗಳು, 'ಈ ವ್ಯಕ್ತಿಯನ್ನು ಪತ್ತೆ ಹಚ್ಚಿ, ಆತನ ವಿರುದ್ಧ ಸೂಕ್ತ ಕ್ರಮಕ್ಕಾಗಿ ದೆಹಲಿ ಪೊಲೀಸರಿಗೆ ಮಾಹಿತಿ ನೀಡಬೇಕು' ಎಂದು ನ್ಯಾಯಾಲಯದ ಐಟಿ ವಿಭಾಗಕ್ಕೆ ಸೂಚಿಸಿದರು.

ಸ್ವತಃ ಜೂಹಿ ಚಾವ್ಲಾ ಅವರೇ ಅರ್ಜಿ ವಿಚಾರಣೆಗೆ ಸಂಬಂಧಿಸಿದ ವೆಬ್‌ಲಿಂಕ್‌ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ಈ ವರ್ಚುವಲ್ ವಿಚಾರಣೆಗೆ ಹಾಜರಾಗುವಂತೆಯೂ ಅವರು ಜನರನ್ನು ಆಹ್ವಾನಿಸಿದ್ದರು.

ಮೂರನೆಯ ಅಲೆ: ಸಜ್ಜಾಗಲು ಸಚಿವ ಗೋಯಲ್ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19ರ ಮೂರನೆಯ ಅಲೆಯು ಎದುರಾದರೆ, ಪರಿಸ್ಥಿತಿಯನ್ನು ನಿಭಾಯಿಸಲು ಅಗತ್ಯವಿರುವ ಕ್ರಮಗಳ ಪಟ್ಟಿಯೊಂದನ್ನು ಸಿದ್ಧಪಡಿಸುವಂತೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಕೈಗಾರಿಕಾ ರಂಗದ ಪ್ರತಿನಿಧಿಗಳಿಗೆ ಸೂಚಿಸಿದ್ದಾರೆ.

ಸಾಂಕ್ರಾಮಿಕದಿಂದ ತೊಂದರೆಗೆ ಒಳಗಾಗಬಹುದಾದ ಮಕ್ಕಳಿಗೆ ಸಹಾಯ ಮಾಡುವಂತೆಯೂ ಗೋಯಲ್ ಅವರು ಸೂಚಿಸಿದ್ದಾರೆ. ಕೋವಿಡ್‌ನಿಂದಾಗಿ ಎದುರಾಗಿರುವ ಸವಾಲುಗಳನ್ನು ನಿಭಾಯಿಸಲು ಕೈಗಾರಿಕೆಗಳು ಎಷ್ಟರಮಟ್ಟಿಗೆ ಸನ್ನದ್ಧವಾಗಿವೆ ಎಂಬುದನ್ನು ಪರಿಶೀಲಿಸಲು ಗೋಯಲ್ ಅವರು ಮಂಗಳವಾರ ಸಭೆ ನಡೆಸಿದ್ದರು.

ಹಿಂದಿನ ಅನುಭವಗಳಿಂದ ಒಂದಿಷ್ಟು ಪಾಠ ಕಲಿತು ಈಗಿನ ಸಂದರ್ಭವನ್ನು ಹಾಗೂ ಮುಂದಿನ ಸವಾಲನ್ನು ಎದುರಿಸಬೇಕು ಎಂದು ಅವರು ಹೇಳಿದರು. ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಸೇರಿದಂತೆ ಉದ್ಯಮಗಳ ಹಲವು ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

2-6-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10500-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1420)
ಒಂದು ವಾರದ ಡೆಲಿವರಿ	1435 (1415)
ಸೋಯಾ ಕಚ್ಚಾ	1395(1370)
ಪಾಮ್ ವಾರದ ಡೆಲಿವರಿ	1253 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520(1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
49,100 (49,100)
ಬೆಳ್ಳಿ ಕೆ.ಜಿ
71,400(72,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಹಳತು	37000-42000
ಪುತ್ತೂರು	
ಹೊಸತು	28000-39500
ಹಳತು	39500-49000
ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	400
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	256-390
ದ್ವಿತಳಿ (ಬಿ.ವಿ)	392-486
ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,900	10,600	10700	161.05 ಸೆಂಟ್ಸ್
ಎಸಿ	4,675	4,300	4,125	
ಆರ್‌ಪಿ	5,175	5100	5200	
ಆರ್‌ಸಿ	3125	3,100	3075	1591 ಡಾಲರ್ಸ್

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ದಿವಿಜ್ ಶರಣ್ ಜೋಡಿಗೆ ಸೋಲು; ಸೆರೆನಾಗೆ ಗೆಲುವು

ಅಲೆಕ್ಸಾಂಡರ್ ಜ್ವೆರೆವ್ ಜಯದ ಓಟ

ಪ್ಯಾರಿಸ್ (ರಾಯಿಟರ್ಸ್): ತೀವ್ರ ಪೈಪೋಟಿಯ ಪಂದ್ಯದಲ್ಲಿ ಜಯಿಸಿದ ಅಲೆಕ್ಸಾಂಡರ್ ಜ್ವೆರೆವ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ರಷ್ಯಾದ ರೋಮನ್ ಸಫಿಯುಲ್ಲಿನ್ ಅವರನ್ನು 7-6, 6-3, 7-6ರಿಂದ ಪರಾಭವಗೊಳಿಸಿದರು.

ಆರನೇ ಶ್ರೇಯಾಂಕದ ಜ್ವೆರೆವ್ ಅವರಿಗೆ ವಿಶ್ವ ಕ್ರಮಾಂಕದಲ್ಲಿ 182ನೇ ಸ್ಥಾನದಲ್ಲಿರುವ ರೋಮನ್ ನೀಡಿದ ಪೈಪೋಟಿ ಗಮನಸೆಳೆಯಿತು.

ಮೊದಲ ಸೆಟ್‌ನಲ್ಲಿ ಬೇಸ್‌ಲೈನ್ ಹೊಡೆತಗಳಲ್ಲಿ ಇಬ್ಬರೂ ಆಟಗಾರರ ನಡುವೆ ಸಮಬಲದ ಪೈಪೋಟಿ ಕಂಡು ಬಂತು. 11ನೇ ಗೇಮ್‌ನಲ್ಲಿ ಜ್ವೆರೆವ್ ಬ್ರೇಕ್ ಪಾಯಿಂಟ್ ಗಳಿಸಿದರು. ಟೈಬ್ರೇಕ್‌ವರೆಗೆ ಸಾಗಿದ ಈ ಸೆಟ್‌ನಲ್ಲಿ ಸತತ ಏಸ್‌ಗಳನ್ನು ಸಿಡಿಸಿ ಜ್ವೆರೆವ್ ಗೆದ್ದರು.

ಎರಡನೇ ಸೆಟ್‌ನಲ್ಲಿ ಜ್ವೆರೆವ್ 'ಪ್ರಮಾದ'ಗಳನ್ನು ಮಾಡಿದರು. ಹತಾಶರಾಗಿ ರ್‍ಯಾಕೆಟ್ ನೆಲಕ್ಕೆ ಅಪ್ಪಳಿಸಿದರು. ಆದರೆ ಸತತ ಐದು ಗೇಮ್‌ಗಳನ್ನು ಗೆದ್ದು ಸೆಟ್ ವಶಪಡಿಸಿಕೊಂಡರು. ಟೈಬ್ರೇಕ್‌ಗೆ ಸಾಗಿದ ಮೂರನೇ ಸೆಟ್‌ನಲ್ಲಿ ಸಫಿಯುಲ್ಲಿನ್ ಜಿದ್ದಾಜಿದ್ದಿಯ ಹೋರಾಟ ನಡೆಸಿದರೂ ಜಯ ಗಳಿಸಲಾಗಲಿಲ್ಲ.

ಗ್ರೀಸ್ ಆಟಗಾರ, ಐದನೇ ಶ್ರೇಯಾಂಕದ ಸ್ಟೆಫನೊಸ್ ಸಿಸಿಪಸ್ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಅವರನ್ನು 6-3, 6-4, 6-3ರಲ್ಲಿ ಮಣಿಸಿ ಮೂರನೇ ಸುತ್ತು ಪ್ರವೇಶಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಜೆಕ್ ಗಣರಾಜ್ಯದ ಕ್ಯಾತರಿನಾ ಸಿನಿಯಾಕೊವಾ ಅವರು 7-6 , 5-7, 7-5ರಿಂದ ರಷ್ಯಾದ ವೆರೋನಿಕಾ ಕುದರ್ಮೆತೊವಾ ಅವರಿಗೆ ಸೋಲುಣಿಸಿದರು.

ದಾಖಲೆಯ 24ನೇ ಗ್ರ್ಯಾನ್‌ಸ್ಲಾಂನ ಪ್ರಶಸ್ತಿ ಕನಸಿನೊಂದಿಗೆ ಆಡುತ್ತಿರುವ ಅಮೆರಿಕದ ಸೆರೆನಾ ವಿಲಿಯಮ್ಸ ರುಮೇನಿಯಾದ ಮಿಹೆಲಾ ಬುಜರ್ನೆಸ್ಕು ಎದುರು 6-3, 5-7, 6-1ರಲ್ಲಿ ಗೆದ್ದರು.

ದಿವಿಜ್ ಜೋಡಿಗೆ ಸೋಲು: ಭಾರತದ ದಿವಿಜ್ ಶರಣ್ ಮತ್ತು ಅರ್ಜೆಂಟೀನಾದ ಫೆಡರಿಕೊ ಡೆಲ್ಬಿನಿಸ್ ಜೋಡಿ ಪುರುಷರ ಡಬಲ್ಸ್ ವಿಭಾಗದ ಪಂದ್ಯದಲ್ಲಿ 6-3, 6-7 (13), 4-6ರಲ್ಲಿ ಆಸ್ಟ್ರೇಲಿಯಾದ ಮ್ಯಾಟ್ ರೇಡ್ ಮತ್ತು ಅಲೆಕ್ಸ್ ಮಿನೌರ್ ಜೋಡಿ ಎದುರು ರೋಚಕವಾಗಿ ಹೋರಾಡಿ ಮಣಿದರು.


ಅಲೆಕ್ಸಾಂಡರ್ ಜ್ವೆರೆವ್ ಆಟದ ಶೈಲಿ –ಎಎಫ್‌ಪಿ ಚಿತ್ರ

ಒಸಾಕ ಎದುರು ಆ್ಯನಾಗೆ ವಾಕ್‌ಓವರ್

ಎರಡನೇ ಸುತ್ತು: ಮಹಿಳೆಯರು: ರಷ್ಯಾದ ಎಲೆನಾ ವೆಸ್ನಿನಾ ಅವರಿಗೆ ಜೆಕ್ ಗಣರಾಜ್ಯದ ಪೆಟ್ರಾ ಕ್ವಿಟೊವಾ ಎದುರು ವಾಕ್‌ಓವರ್; ಸ್ಲೊವೇನಿಯಾದ ತಮಾರ ಜಿಡಾನ್ಸೆಕ್ ಅವರಿಗೆ 6-4, 6-1ರಿಂದ ಅಮೆರಿಕದ ಮ್ಯಾಡಿಸನ್ ಬ್ರೆಂಗಲ್ ಎದುರು ಗೆಲುವು; ರಷ್ಯಾದ ದರಿಯಾ ಕಸತ್ಕಿನಾ ಅವರಿಗೆ 6-2, 6-2ರಿಂದ ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಸ್ ವಿರುದ್ಧ ಜಯ; ರುಮೇನಿಯಾದ ಆ್ಯನಾ ಬೊಗ್ಡನ್ ಅವರಿಗೆ ಜಪಾನ್‌ನ ನವೊಮಿ ಒಸಾಕ ಎದುರು ವಾಕ್‌ಓವರ್. **ಪುರುಷರು:** ನಾರ್ವೆಯ ಕಾಸ್ಪರ್ ರುಡ್‌ಗೆ 6-3, 6-2, 6-4ರಿಂದ ಪೋಲೆಂಡ್‌ನ ಕಾಮಿಲ್ ಮಾರ್ಜ್‌ಜಾರ್ಜಕ್ ಎದುರು ಜಯ; ಸರ್ಬಿಯಾದ ಲಾಸ್ಲೊ ಡಿಜೆರ್ ಅವರಿಗೆ 4-6, 4-6, 6-3, 6-2, 6-3ರಿಂದ ತಮ್ಮದೇ ದೇಶದ ಆಟಗಾರ ಮೈಮೊರ್ ಕೆಸ್ಮೊನೊವಿಚ್ ಎದುರು ಜಯ; ಅರ್ಜೆಂಟೀನಾದ ಫೆಡರಿಕೊ ಡೆಲ್ಬೊನಿಸ್‌ಗೆ 4-6, 6-1, 3-6, 6-3, 6-2ರಿಂದ ಸ್ಪೇನ್‌ನ ಪ್ಯಾಬ್ಲೊ ಅಂಡುಜಾರ್ ಎದುರು ಜಯ.

ಕಾನ್ವೆ ಶತಕ

ಲಾರ್ಡ್ಸ್: ಆರಂಭಿಕ ಬ್ಯಾಟ್ಸ್‌ಮನ್ ಡೇವನ್ ಕಾನ್ವೆ (ಬ್ಯಾಟಿಂಗ್ 136) ಅವರ ಶತಕದ ಬಲದಿಂದ ನ್ಯೂಜಿಲೆಂಡ್ ತಂಡ ಬುಧವಾರ ಇಲ್ಲಿ ಆರಂಭವಾದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಉತ್ತಮ ಮೊತ್ತ ಕಲೆಹಾಕುವತ್ತ ಹೆಜ್ಜೆ ಇಟ್ಟಿದೆ.


ಡೇವನ್ ಕಾನ್ವೆ

ಟಾಸ್ ಗೆದ್ದ ನ್ಯೂಜಿಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭದಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದರು. ನಂತರ ಕಾನ್ವೆ ಮತ್ತು ಹೆನ್ರಿ ನಿಕೋಲ್ಸ್ (ಬ್ಯಾಟಿಂಗ್ 46) ಆಟ ಕಳೆಗಟ್ಟಿತು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ತಂಡ 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 246 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 246 (ಟಾಮ್ ಲಥಾಮ್ 23, ಡೇವನ್ ಕಾನ್ವೆ ಬ್ಯಾಟಿಂಗ್ 136, ಕೇನ್ ವಿಲಿಯಮ್ಸನ್ 13, ಹೆನ್ರಿ ನಿಕೋಲ್ಸ್ ಬ್ಯಾಟಿಂಗ್ 46; ಜೇಮ್ಸ್ ಆ್ಯಂಡರ್ಸನ್ 55ಕ್ಕೆ1, ಒಲಿ ರಾಬಿನ್ಸನ್ 50ಕ್ಕೆ2) ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯ.

ಸುದ್ದಿ 2 ನಿಮಿಷ

'ಭಾರತ, ನ್ಯೂಜಿಲೆಂಡ್ ವಿರುದ್ಧ ಗೆದ್ದರೆ ಆ್ಯಷಸ್‌ಗೆ ಪೂರಕ: ರೂಟ್

ಲಂಡನ್ (ಪಿಟಿಐ): ವಿಶ್ವದ ಪ್ರಮುಖ ತಂಡಗಳಾದ ಭಾರತ ಮತ್ತು ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಗಳನ್ನು ಕ್ಲೀನ್‌ಸ್ವೀಪ್ ಮಾಡಿದರೆ, ಪ್ರತಿಷ್ಠಿತ ಆ್ಯಷಸ್ ಸರಣಿಗೆ ನಮಗೆ ಉತ್ತಮ ಅಭ್ಯಾಸ ಮಾಡಿದಂತಾಗುತ್ತದೆ ಎಂದು ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷಾಂತ್ಯದಲ್ಲಿ ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾ ಎದುರು ಆ್ಯಷಸ್ ಸರಣಿಯಲ್ಲಿ ಆಡಲಿದೆ.

ಆಸ್ಟ್ರೇಲಿಯಾಕ್ಕೆ ತೆರಳುವ ಮೊದಲು ರೂಟ್ ಪಡೆ ಭಾರತ ಹಾಗೂ ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ಒಟ್ಟು ಏಳು ಟೆಸ್ಟ್ ಪಂದ್ಯಗಳಲ್ಲಿ ಕಣಕ್ಕಿಳಿಯಲಿದೆ.

'ಈ ಇಡೀ ಬೇಸಿಗೆಯಲ್ಲಿ ಆ್ಯಷಸ್ ಸರಣಿಯ ಕುರಿತು ನಿರಂತರ ಚರ್ಚೆಗಳು ನಡೆದಿವೆ. ಆಸ್ಟ್ರೇಲಿಯಾ ವಿರುದ್ಧದ ಆ ಸರಣಿಗೆ ದೀರ್ಘಕಾಲದಿಂದ ಯೋಜನೆ ರೂಪಿಸುತ್ತಿದ್ದೇವೆ. ಒಬ್ಬ ಇಂಗ್ಲಿಷ್ ಆಟಗಾರ, ಅಭಿಮಾನಿಯಾಗಿ ನನಗೆ ಅದು ಪ್ರತಿಷ್ಠಿತ ಸರಣಿ' ಎಂದರು.

'ಆ್ಯಷಸ್ ಸರಣಿಗೆ ಉತ್ತಮವಾಗಿ ಸಜ್ಜುಗೊಳ್ಳಲು ವಿಶ್ವದ ಎರಡು ಪ್ರಮುಖ ತಂಡಗಳಾದ ಭಾರತ ಮತ್ತು ನ್ಯೂಜಿಲೆಂಡ್ ಎದುರಿನ ಎಲ್ಲ ಏಳೂ ಪಂದ್ಯಗಳನ್ನು ನಾವು ಗೆಲ್ಲಬೇಕು' ಎಂದು ಅವರು ನುಡಿದರು.

'ನಮಗೆ ಇಬ್ಬರು ಪ್ರಮುಖ ಎದುರಾಳಿಗಳು ಯಾರೆಂದು ನೀವು ಕೇಳುವಂತಿಲ್ಲ. ಪ್ರತಿ ಪಂದ್ಯಕ್ಕೂ ಬೆವರು ಹರಿಸಬೇಕಾಗುತ್ತದೆ. ಆ್ಯಷಸ್‌ಗೂ ಮೊದಲು ನಡೆಯುವ ಈ ಟೆಸ್ಟ್‌ಗಳ ಮೇಲೆ ನಮ್ಮ ಗಮನ ಕೇಂದ್ರೀಕೃತವಾಗಿರಲಿದೆ' ಎಂದು ರೂಟ್ ಹೇಳಿದರು.

ಕೋವಿಡ್‌-19: ಭಾರತಕ್ಕಾಗಿ ಆಸ್ಟ್ರೇಲಿಯಾ ಆಟಗಾರರ 'ಗೇಮ್'



ಸಿಡ್ನಿ (ಪಿಟಿಐ): ಭಾರತದಲ್ಲಿ ಕೋವಿಡ್–19ರಿಂದ ತೊಂದರೆಗೆ ಒಳಗಾಗಿರುವವರಿಗಾಗಿ ಯುನಿಸೆಫ್‌ನ ನಿಧಿ ಸಂಗ್ರಹ ಯೋಜನೆಗಾಗಿ ಆಸ್ಟ್ರೇಲಿಯಾ ಆಟಗಾರರು ಗುರುವಾರ 12 ತಾಸುಗಳ 'ಗೇಮ್' ಆಡಲಿದ್ದಾರೆ. ನೇರ ಪ್ರಸಾರದಲ್ಲಿ ನಡೆಯುವ ಗೇಮ್‌ನಲ್ಲಿ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಸೇರಿದಂತೆ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ಜೋಶುವಾ ಲಹೋರ್ ಅವರ ಕನಸಿನ ಕೂಸಾದ ಈ ಯೋಜನೆಯಲ್ಲಿ ಕಮಿನ್ಸ್, ಸ್ಪಿನ್ನರ್ ನೇಥನ್ ಲಯನ್, ವೇಗಿಗಳಾದ ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್, ಆಲ್‌ರೌಂಡರ್ ಮೊಯಿಸಸ್ ಹೆನ್ರಿಕ್ಸ್, ಮಹಿಳಾ ಕ್ರಿಕೆಟರ್‌ಗಳಾದ ಅಲಿಸಾ ಹೀಲಿ ಮತ್ತು ದಕ್ಷಿಣ ಆಫ್ರಿಕಾದ ರಿಲೀ ರೊಸ್ಸೊ ಮುಂತಾದವರು ಸಂವಾದ ನಡೆಸುವರು. ಜೊತೆಗೆ, ತಮ್ಮ ಆಟದ ಸಾಮರ್ಥ್ಯವನ್ನೂ ತೋರಿಸುವರು.

ಕಾರ್ಯಕ್ರಮ ಭಾರತೀಯ ಕಾಲಮಾನ ಮಧ್ಯಾಹ್ನ 1.30ಕ್ಕೆ ಆರಂಭಗೊಳ್ಳಲಿದೆ. ಕ್ರಿಕೆಟ್ ಆಸ್ಟ್ರೇಲಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಿಕ್ ಹಾಕ್ಲಿ ಮತ್ತು ಆಸ್ಟ್ರೇಲಿಯಾ ಕ್ರಿಕೆಟಿಗರ ಸಂಘದ ಮುಖ್ಯ ಕಾರ್ವಹಣಾಧಿಕಾರಿ ಡೊಡ್ ಗ್ರೀನ್‌ಬರ್ಗ್ ಸ್ವಲ್ಪ ಹೊತ್ತು ಕಾಣಿಸಿಕೊಳ್ಳಲಿದ್ದಾರೆ. ಲಹೋರ್ ಅವರ ಟ್ವಿಟರ್ ಖಾತೆಯಲ್ಲಿ ನೇರ ಪ್ರಸಾರ ಇರುತ್ತದೆ.


ಡೇವಿಡ್ ವಾರ್ನರ್ –ಪಿಟಿಐ ಚಿತ್ರ

ಐಪಿಎಲ್: ಆತಂಕದ ವಾತಾವರಣವಿತ್ತು–ಡೇವಿಡ್ ವಾರ್ನರ್

ಸಿಡ್ನಿ (ಪಿಟಿಐ): ಭಾರತದಲ್ಲಿ ಈಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ನಡೆದಿದ್ದ ಸಂದರ್ಭದಲ್ಲಿ ಕೋವಿಡ್ –19 ಕಾರಣದಿಂದ ಆತಂಕದ ವಾತಾವರಣ ನಿರ್ಮಾಣವಾಗಿತ್ತು ಎಂದು ಆಸ್ಟ್ರೇಲಿಯಾದ ಕ್ರಿಕೆಟಿಗ ಡೇವಿಡ್ ವಾರ್ನರ್ ಹೇಳಿದ್ದಾರೆ.

'ರೋಗಿಗಳು ಆಮ್ಲಜನಕ, ಚಿಕಿತ್ಸೆ ಸಿಗದೆ ಪರ ದಾಡಿದ ದೃಶ್ಯಗಳನ್ನು ಟಿ.ವಿ.ಗಳಲ್ಲಿ ನೋಡಿದ್ದ ನಮ್ಮ ಕುಟುಂಬದವರು ಸಹಜವಾಗಿಯೇ ಆತಂಕಕ್ಕೆ ಒಳಗಾಗಿದ್ದರು. ಜೊತೆಗೆ ನಾವು ಕೂಡ ಬೆದರಿದ್ದೆವು' ಎಂದು ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಆಡಿದ್ದ ವಾರ್ನರ್ ಅವರು ನೋವಾಸ್ ಫಿಫಿ ಆ್ಯಂಡ್ ವಿಪಾ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

'ಜನರು ಕೋವಿಡ್‌ನಿಂದ ಮೃತರಾದ ತಮ್ಮ ಸಂಬಂಧಿಕರ ಅಂತಿಮ ಸಂಸ್ಕಾರಕ್ಕಾಗಿ ಶವಾಗಾರಗಳ ಬಳಿ ಸಾಲುಗಟ್ಟಿದ್ದ ದೃಶ್ಯಗಳನ್ನು ಮೈದಾನದಿಂದ ಹೋಟೆಲ್‌ಗೆ ಹೋಗುವ ಮಾರ್ಗಗಳಲ್ಲಿ ನಾವೇ ನೋಡಿದ್ದೇವೆ. ಆ ದೃಶ್ಯಗಳು ಮನಕಲಕಿದ್ದವು' ಎಂದು ವಾರ್ನರ್ ನೆನಪಿಸಿಕೊಂಡಿದ್ದಾರೆ.

'ಮಾನವೀಯ ದೃಷ್ಟಿಕೋನದಿಂದ ನೋಡಿದಾಗ, ಐಪಿಎಲ್ ಟೂರ್ನಿಯನ್ನು ಅರ್ಧಕ್ಕೆ ನಿಲ್ಲಿಸಿದ್ದು ಉತ್ತಮ ನಿರ್ಧಾರ. ಅಲ್ಲಿಂದ ಹೊರಟು ಸ್ವದೇಶಕ್ಕೆ ಸೇರುವುದು ನಮಗೂ ಕಠಿಣ ಸವಾಲಾಗಿತ್ತು. ಭಾರತದಿಂದ ಆಸ್ಟ್ರೇಲಿಯಾಕ್ಕೆ ವಿಮಾನಯಾನ ನಿರ್ಬಂಧಿಸಲಾಗಿತ್ತು. ಆದರೂ ಲಭ್ಯವಿರುವ ಮಾರ್ಗಗಳ ಮೂಲಕ ನಮ್ಮನ್ನು ಸುರಕ್ಷಿತವಾಗಿ ತವರಿಗೆ ಕಳಿಸುವಲ್ಲಿ ಆಯೋಜಕರು ತುಂಬ ಶ್ರಮಿಸಿ ದ್ದಾರೆ. ಭಾರತವು ಕ್ರಿಕೆಟ್ ಆಟವನ್ನು ಅಪಾರವಾಗಿ ಪ್ರೀತಿಸುವ ದೇಶ' ಎಂದು ವಾರ್ನರ್ ಹೇಳಿದ್ದಾರೆ.

ಒಲಿಂಪಿಕ್ಸ್: ಕುದುರೆ ಇನ್ನೂ ನಿರ್ಣಯಿಸದ ಫವಾದ್ ಮಿರ್ಜಾ

ಕೋಲ್ಕತ್ತ: ಭಾರತದ ಇಕ್ವೆಸ್ಟ್ರಿಯನ್ ಫವಾದ್ ಮಿರ್ಜಾ ಅವರು ಯಾವ ಕುದುರೆಯೊಂದಿಗೆ ಒಲಿಂಪಿಕ್ಸ್‌ಗೆ ತೆರಳಬೇಕು ಎಂದು ಇನ್ನೂ ನಿರ್ಧರಿಸಿಲ್ಲ. ಈ ತಿಂಗಳಾಂತ್ಯದಲ್ಲಿ ಪ್ರವೇಶ ಪತ್ರವನ್ನು ಸಲ್ಲಿಸುವಾಗ ಕುದುರೆಯ ಹೆಸರನ್ನು ಅಂತಿಮಗೊಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.


ಫವಾದ್ ಮಿರ್ಜಾ

ಪೋಲೆಂಡ್‌ನಲ್ಲಿ ಈಚೆಗೆ ನಡೆದ ಒಲಿಂಪಿಕ್ಸ್ ಅರ್ಹತೆಯ ಸ್ಪರ್ಧೆಯಲ್ಲಿ ಫವಾದ್ ಅನುಭವಿ ಸೀಗ್ನರ್ ಮೆಡಿಕೋಟ್ ಮತ್ತು ಉತ್ಸಾಹಿ ದಜಾರಾ 4 ಕುದುರೆಗಳೊಂದಿಗೆ ಕಣಕ್ಕೆ ಇಳಿದು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ್ದರು. ಇದರೊಂದಿಗೆ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿಕೊಂಡಿದ್ದರು.

ಹಿಂದಿನ ಅನುಭವ ಕೈ ಹಿಡಿಯಲಿದೆ: ಇಂಗ್ಲೆಂಡ್ ಪ್ರವಾಸಕ್ಕೆ ಮುನ್ನ ನಾಯಕನ ಹೇಳಿಕೆ

ಅಭ್ಯಾಸದ ಕೊರತೆ ಕಾಡದು: ಕೊಹ್ಲಿ

ಮುಂಬೈ (ಪಿಟಿಐ): ನ್ಯೂಜಿಲೆಂಡ್ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯಕ್ಕೆ ಸಿದ್ಧತೆ ನಡೆಸಲು ಸಮಯಾವಕಾಶ ಸಿಗಲಿಲ್ಲ ನಿಜ. ಆದರೆ ಇದರಿಂದ ತಂಡದ ಸಾಮರ್ಥ್ಯದ ಮೇಲೆ ಪರಿಣಾಮ ಉಂಟಾಗದು ಎಂದು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅಭಿಪ್ರಾಯಪಟ್ಟಿದ್ದಾರೆ.

ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗಾಗಿ ಪ್ರವಾಸ ಹೊರಡುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇಂಗ್ಲೆಂಡ್‌ನಲ್ಲಿ ಈ ಹಿಂದೆ ಆಡಿರುವ ಅನುಭವ ತಂಡದ ಕೈಹಿಡಿಯಲಿದೆ ಎಂದರು.

ಸೌತಾಂಪ್ಟನ್‌ನಲ್ಲಿ ಜೂನ್ 18ರಂದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಆರಂಭವಾಗಲಿದೆ. ಅದಕ್ಕೂ ಮುನ್ನ ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ವಿರುದ್ಧ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಭಾರತ ತಂಡ ಅಲ್ಲಿಗೆ ತಲುಪಿದ ಕೂಡಲೇ ಕ್ವಾರಂಟೈನ್‌ಗೆ ಒಳಗಾಗಲಿದೆ. ಈ ಪೈಕಿ ಮೊದಲ ಮೂರು ದಿನ ಆಟಗಾರರು ಹೋಟೆಲ್ ಕೊಠಡಿಯಲ್ಲೇ ಇರುವರು.


'ಈ ಹಿಂದೆ ಪರಿಸ್ಥಿತಿ ಚೆನ್ನಾಗಿರುವಾಗ ಕೂಡ ಕೇವಲ ಮೂರು ದಿನಗಳ ಹಿಂದೆ ಅಲ್ಲಿಗೆ ತಲುಪಿದ್ದೇವೆ. ಆದರೂ ಉತ್ತಮ ಸಾಧನೆ ಮಾಡಿ ಸರಣಿ ಗೆದ್ದಿದ್ದೇವೆ. ಭಾರತ ತಂಡ ಇಂಗ್ಲೆಂಡ್‌ನಲ್ಲಿ ಹಿಂದೆಯೂ ಸಾಕಷ್ಟು ಕ್ರಿಕೆಟ್ ಆಡಿದೆ. ಆದ್ದರಿಂದ ಅಲ್ಲಿನ ಪರಿಸ್ಥಿತಿಗೆ ಆಟಗಾರರು ಬೇಗ ಒಗ್ಗಿಕೊಳ್ಳಲಿದ್ದಾರೆ. ಮನಸ್ಥಿತಿ ಚೆನ್ನಾಗಿದ್ದರೆ ಎಲ್ಲವೂ ಸರಿಹೋಗುತ್ತದೆ' ಎಂದು ಅವರು ನುಡಿದರು.

'ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೂ ಮೊದಲು ನಾಲ್ಕು ದಿನ ಅಭ್ಯಾಸ ನಡೆಯಲಿದೆ. ತಂಡದ ಸಾಮರ್ಥ್ಯ ಹೆಚ್ಚಿಸಲು ಅಷ್ಟು ಸಮಯ ಸಾಕಾಗಲಿದೆ. ಈ ಅವಧಿಯಲ್ಲಿ ಯುವ ಆಟಗಾರರನ್ನು ಕೂಡ ಸಜ್ಜುಗೊಳಿಸಲು ಸಾಧ್ಯ' ಎಂದು ಅವರು ಹೇಳಿದರು.


ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

'ಟೆಸ್ಟ್ ಚಾಂಪಿಯನ್‌ಷಿಪ್: ಮೂರು ಫೈನಲ್ ಸೂಕ್ತ'

ಮುಂಬೈ (ಪಿಟಿಐ): ಭವಿಷ್ಯದಲ್ಲಿ ನಡೆಯುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗಳಲ್ಲಿ 'ಬೆಸ್ಟ್ ಆಫ್ ತ್ರೀ' ಫೈನಲ್ ಮಾದರಿಯನ್ನು ಅನುಸರಿಸಬೇಕು ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ಸಲಹೆ ನೀಡಿದ್ದಾರೆ.


ರವಿಶಾಸ್ತ್ರಿ

ಜೂನ್ 18ರಿಂದ ಸೌತಾಂಪ್ಟನ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಫೈನಲ್‌ನಲ್ಲಿ ಭಾರತ ತಂಡವು ನ್ಯೂಜಿಲೆಂಡ್ ಬಳಗವನ್ನು ಎದುರಿಸಲಿದೆ. ಬುಧವಾರ ಇಂಗ್ಲೆಂಡ್‌ಗೆ ಪ್ರಯಾಣ ಆರಂಭಿಸುವ ಮುನ್ನ ರವಿಶಾಸ್ತ್ರಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಟೆಸ್ಟ್ ಚಾಂಪಿಯನ್‌ಷಿಪ್ ಮಾದರಿಯು ದೀರ್ಘ ಕಾಲ ತನ್ನ ವರ್ಚಸ್ಸು ಬೆಳೆಸಿಕೊಳ್ಳಲು ಪ್ರಯೋಗಗಳು ಅಗತ್ಯ. ಅದರಲ್ಲಿ ಪ್ರಮುಖವಾಗಿ ಫೈನಲ್ ಗೆ ಮೂರು ಪಂದ್ಯಗಳು ನಡೆಯಬೇಕು. ಅದರಲ್ಲಿ ಹೆಚ್ಚು ಜಯ ಸಾಧಿಸುವವರು ವಿಜೇತರಾಗಬೇಕು. ಇದರೊಂದಿಗೆ ಒಂದು ಟೂರ್ನಿಯನ್ನು ಎರಡೂವರೆ ವರ್ಷಗಳ ಅವಧಿಗೆ ವಿಸ್ತರಿಸಬಹುದು' ಎಂದು ಹೇಳಿದರು.

'ಆದರೆ ಈ ರೀತಿಯ ಪ್ರಯೋಗ ಮಾಡಬೇಕಾದರೆ, ಈಗಾಗಲೇ ಸಿದ್ಧವಾಗಿರುವ ವೇಳಾಪಟ್ಟಿಯ ಚಟುವಟಿಕೆಗಳು ಮುಗಿಯಬೇಕು. ಅದಾದ ನಂತರ ಬೆಸ್ಟ್ ಆಫ್ ತ್ರಿ ಯೋಚಿಸಬಹುದು' ಎಂದೂ ಹೇಳಿದರು.

'ಇದೇ ಮೊದಲ ಬಾರಿ ಡಬ್ಲ್ಯುಟಿಸಿ ಫೈನಲ್ ನಡೆಯುತ್ತಿದೆ. ಇದೊಂದು ಅಭೂತಪೂರ್ವ ಮತ್ತು ದೊಡ್ಡ ಪಂದ್ಯ. ಟೆಸ್ಟ್ ಕ್ರಿಕೆಟ್‌ನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಇದರಲ್ಲಿ ಆಡುತ್ತಿರುವ ಎರಡೂ ತಂಡಗಳಿಗೆ ಹೊಸ ಅನುಭವ' ಎಂದರು.

ನ್ಯಾಯಾಂಗ ಬಂಧನಕ್ಕೆ ಸುಶೀಲ್

ನವದೆಹಲಿ(ಪಿಟಿಐ): ಕುಸ್ತಿಪಟುವೊಬ್ಬರ ಹತ್ಯೆಯ ಆರೋಪದಲ್ಲಿ ಬಂಧನವಾಗಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಅವರಿಗೆ ಬುಧವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಲ್ಲಿನ ಛತ್ರಸಾಲ ಕ್ರೀಡಾಂಗಣದಲ್ಲಿ ಈಚೆಗೆ ಸುಶೀಲ್ ಮತ್ತು ಸಂಗಡಿಗರು ಯುವಕುಸ್ತಿಪಟುವಿನ ಮೇಲೆ ಹಲ್ಲೆ ಮಾಡಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಕುಸ್ತಿಪಟು ಆಸ್ಪತ್ರೆಯಲ್ಲಿ ಮೃತರಾಗಿದ್ದರು.

ಸುಮಾರು 20 ದಿನಗಳ ಕಾಲ ತಲೆಮರೆಸಿಕೊಂಡಿದ್ದ ಸುಶೀಲ್ ಅವರನ್ನೂ ಈಚೆಗೆ ದೆಹಲಿ ಪೊಲೀಸರು ಬಂಧಿಸಿದ್ದರು. ಸುಶೀಲ್ ಕುಮಾರ್ ಅವರನ್ನು ಇನ್ನೂ ಮೂರು ದಿನಗಳವರೆಗೆ ತಮ್ಮ ವಶಕ್ಕೆ ವಿಚಾರಣೆಗಾಗಿ ನೀಡಬೇಕೆಂದು ದೆಹಲಿ ಪೊಲೀಸರು ಮಾಡಿದ್ದ ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿತು. ನಾಲ್ಕು ದಿನಗಳ ಪೊಲೀಸ್ ಕಸ್ಟಡಿಯ ಕೊನೆಯಾಗಿದ್ದರಿಂದಾಗಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ರಶ್ಮಿ ಗುಪ್ತಾ ಅವರ ಮುಂದೆ ಹಾಜರುಪಡಿಸಲಾಯಿತು. ಸುಶೀಲ್ ಕುಮಾರ್ ಅವರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.


ಸುಶೀಲ್ ಅವರನ್ನು ಪೊಲೀಸರು ನ್ಯಾಯಾಲಯಕ್ಕೆ ಕರೆತಂದರು –ಪಿಟಿಐ ಚಿತ್ರ

'ಅನ್ಯಾಯ'ದ ಫೈನಲ್ ಸೋಲಿಗೆ ಅಮಿತ್ ಬೇಸರ

ನವದೆಹಲಿ (ಪಿಟಿಐ): ಈ ಬಾರಿಯ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ತಾನು ಅತ್ಯುತ್ತಮ ಸಾಮರ್ಥ್ಯ ತೋರಿದ್ದರೂ ಫೈನಲ್ ಬೌಟ್‌ನಲ್ಲಿ ಅನುಭವಿಸಿದ 'ಅನ್ಯಾಯ'ದ ಸೋಲಿನ ಕುರಿತು ಅಸಮಾಧಾನವಿದೆ ಎಂದು ಭಾರತದ ಬಾಕ್ಸರ್ ಅಮಿತ್ ಪಂಘಾಲ್ ಹೇಳಿದ್ದಾರೆ.

ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ 25 ವರ್ಷದ ಪಂಘಾಲ್, ಇತ್ತೀಚೆಗೆ ದುಬೈನಲ್ಲಿ ಕೊನೆಗೊಂಡ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. 52 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಒಲಿಂಪಿಕ್ಸ್ ಹಾಗೂ ವಿಶ್ವ ಚಾಂಪಿಯನ್ ಶಕೊಬಿದಿನ್ ಜೈರೊವ್ ಎದುರು 2–3ರಿಂದ ಸೋತಿದ್ದರು. ಈ ತೀರ್ಪಿನ ಮರುಪರಿಶೀಲನೆಗೆ ಭಾರತ ತಂಡ ಮನವಿ ಸಲ್ಲಿಸಿತ್ತು. ಆದರೆ ಜ್ಯೂರಿ ಮನವಿಯನ್ನು ತಳ್ಳಿಹಾಕಿದ್ದರು.

'52 ಕೆಜಿ ವಿಭಾಗದಲ್ಲಿ ಅದು ನನ್ನ ಅತ್ಯುತ್ತಮ ಪ್ರದರ್ಶನವಾಗಿತ್ತು. ನಾನು ಫೈನಲ್ ಜಯಿಸಬೇಕಿತ್ತು. ಅದು ಸಾಧ್ಯವಾಗದಿದ್ದಾಗ ಕೋಪಗೊಂಡಿದ್ದೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಪಂಘಾಲ್ ನುಡಿದರು.

'ನನಗೆ ಸಾಧ್ಯವಾದಷ್ಟು ಉತ್ತಮ ಸಾಮರ್ಥ್ಯ ತೋರಿದ್ದೆ. ಗೆಲುವಿಗೆ ನಾನು ಅರ್ಹನಾಗಿದ್ದೆ. ಒಮ್ಮೊಮ್ಮೆ ಹೀಗಾಗುತ್ತದೆ. ಜೈರೊವ್ ಎದುರು ಕಳೆದ ಬಾರಿ 0–5ರಿಂದ ಸೋತಿದ್ದೆ. ಈಗ ಆ ಸಾಮರ್ಥ್ಯ ಸುಧಾರಿಸಿದೆ' ಎಂದು ಪಂಘಾಲ್ ಹೇಳಿದರು.

'ತೀರ್ಪಿನ ವಿರುದ್ಧ ನಮ್ಮ ಪ್ರತಿಭಟನೆ ಇನ್ನಷ್ಟು ತೀವ್ರವಾಗಿರಬೇಕಿತ್ತು. ಆದರೂ ಕನಿಷ್ಠ ನಾವು ಪ್ರಯತ್ನಿಸಿದ್ದೇವೆ' ಎಂದರು.

ನೀರಜ್ ಚೋಪ್ರಾ ತರಬೇತಿ ವಿಳಂಬ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಪಟು ನೀರಜ್ ಚೋಪ್ರಾ ಅವರು ಯೂರೋಪ್‌ನಲ್ಲಿ ತರಬೇತಿಗೆ ತೆರಳುವುದು ವಿಳಂಬವಾಗಲಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರ ಹೇಳಿದೆ. ಒಂದು ವರ್ಷದ ಬಳಿಕ ಅಂತರರಾಷ್ಟ್ರೀಯ ಸ್ಪರ್ಧೆ ಮತ್ತು ತರಬೇತಿಯಲ್ಲಿ ಭಾಗವಹಿಸಲು ಅವರು ಸಜ್ಜಾಗಿದ್ದರು. ಆದರೆ ಫ್ರಾನ್ಸ್‌ನಿಂದ ದೃಢೀಕರಣ ಪತ್ರ ಬರುವವರೆಗೆ ಅವರು ಕಾಯಬೇಕಿದೆ.

ಅವರು ಕಳೆದ ವರ್ಷ ಮಾರ್ಚ್‌ನಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು. ಆ ಬಳಿಕ ಅವರು ಯಾವುದೇ ಟೂರ್ನಿಯಲ್ಲಿ ಭಾಗವಹಿಸಿಲ್ಲ. ಟೋಕಿಯೊ ಕೂಟಕ್ಕೆ ಸಿದ್ಧತೆಗಾಗಿ ಅವರು ಸೋಮವಾರ ಫ್ರಾನ್ಸ್‌ಗೆ ತೆರಳಬೇಕಿತ್ತು.

'ಭಾರತದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗಿರುವುದರಿಂದ, ಪ್ರಯಾಣ ನಿರ್ಬಂಧಗಳ ಹಿನ್ನೆಲೆಯಲ್ಲಿ ಫ್ರಾನ್ಸ್‌ಗೆ ತೆರಳುವವರಿಗೆ ಅಲ್ಲಿಯ ಸರ್ಕಾರದ ದೃಢೀಕರಣ ಪತ್ರ ಅಗತ್ಯವಿದೆ. ಹೀಗಾಗಿ ನೀರಜ್ ಅವರು ತರಬೇತಿಗೆ ತೆರಳುವುದಕ್ಕೆ ಕೆಲವು ದಿನ ಕಾಯಬೇಕಾಗುವುದು' ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಪ್ರಕಟಣೆಯಲ್ಲಿ ತಿಳಿಸಿದೆ.

'ನೀರಜ್ ಹಾಗೂ ಅವರ ತಂಡ ಶುಕ್ರವಾರ ವೀಸಾ ಪಡೆದಿದೆ. ಆದರೂ ದೃಢೀಕರಣ ಪತ್ರ ಬೇಕು' ಎಂದು ಸಾಯ್ ಹೇಳಿದೆ.

ಹಿಂದೆ ಸರಿದ ಮರಿನ್: ಸಿಂಧು ಬೇಸರ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಿಂದ ಸ್ಪೇನ್‌ನ ಬ್ಯಾಡ್ಮಿಂಟನ್ ತಾರೆ ಕರೊಲಿನಾ ಮರಿನ್ ಹಿಂದೆ ಸರಿದಿರುವುದಕ್ಕೆ ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಬೇಸರ ವ್ಯಕ್ತಪಡಿಸಿದ್ದಾರೆ.

ಮರಿನ್ ಮೊಣಕಾಲಿಗೆ ಗಾಯವಾಗಿರುವುದರಿಂದ ಒಲಿಂಪಿಕ್ಸ್ ಕೂಟದಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದ್ದಾರೆ.

ಗೆಳತಿ ಮರಿನ್‌ಗೆ ಟ್ವೀಟ್ ಮಾಡಿರುವ ಸಿಂಧು, 'ನೀವು ಗಾಯಗೊಂಡಿರುವ ವಿಷಯ ತಿಳಿದು ಬೇಸರವಾಯಿತು. ಶೀಘ್ರ ಗುಣಮುಖರಾಗಿ, ಮತ್ತಷ್ಟು ಬಲಶಾಲಿಯಾಗಿ ಕಣಕ್ಕೆ ಮರಳಲು ನಾನು ಹಾರೈಸುತ್ತೇನೆ' ಎಂದು ಹಾರೈಸಿದ್ದಾರೆ.

ರಿಯೊ ಒಲಿಂಪಿಕ್ಸ್‌ನ ಮಹಿಳೆಯರ ಸಿಂಗಲ್ಸ್ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ತಾವು ಮತ್ತು ಮರಿನ್ ಮುಖಾಮುಖಿಯಾಗಿದ್ದನ್ನೂ ಸಿಂಧು ಈ ಸಂದರ್ಭದಲ್ಲಿ ನೆನಪಿಸಿಕೊಂಡಿದ್ದಾರೆ.

ಶನಿವಾರ ಅಭ್ಯಾಸ ನಡೆಸುವ ಸಂದರ್ಭದಲ್ಲಿ 27 ವರ್ಷದ ಮರಿನ್ ಬಲಮೊಣಕಾಲಿನ ನೋವಿನಿಂದ ಬಳಲಿದ್ದರು.


ಕೆರೊಲಿನಾ ಮರಿನ್ ಮತ್ತು ಪಿ.ವಿ. ಸಿಂಧು

ಸೌರಾಷ್ಟ್ರದ ಜಯದೇವ ಉನದ್ಕತ್, ಶೆಲ್ಡನ್ ಜಾಕ್ಸನ್, ಛತ್ತೀಸ್‌ಘಡದ ಹರಪ್ರೀತ್ ಹೇಳಿಕೆ

ದೇಶಿ ಆಟಗಾರರ ಗುತ್ತಿಗೆ ಪದ್ಧತಿಗೆ ಹೆಚ್ಚಿದ ಆಗ್ರಹ

ನವದೆಹಲಿ (ಪಿಟಿಐ): ರದ್ದಾಗಿರುವ ಟೂರ್ನಿಗಳಿಗೆ ಸಂಬಂಧಿಸಿ ಪರಿಹಾರ ವಿತರಣೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯಯೋಜನೆ ರೂಪಿಸುತ್ತಿದ್ದಂತೆಯೇ ದೇಶಿ ಕ್ರಿಕೆಟಿಗರನ್ನು ಕೇಂದ್ರೀಯ ಗುತ್ತಿಗೆ ಪದ್ಧತಿಯಡಿಗೆ ತರಬೇಕು ಎಂಬ ಕೂಗು ಜೋರಾಗಿದೆ.

ಕೋವಿಡ್–19ರಿಂದಾಗಿ ಕಳೆದ ಬಾರಿ ರಣಜಿ ಟೂರ್ನಿ ಒಳಗೊಂಡಂತೆ ವಿವಿಧ ಟೂರ್ನಿಗಳು ರದ್ದಾಗಿವೆ. ಅದರಲ್ಲಿ ಪಾಲ್ಗೊಳ್ಳಬೇಕಾದ ಆಟಗಾರರಿಗೆ ಪರಿಹಾರ ಕೊಡಲು ಬಿಸಿಸಿಐ ಮುಂದಾಗಿದೆ. ಕೇಂದ್ರೀಯ ಗುತ್ತಿಗೆಗೆ ಒತ್ತಾಯಿಸುತ್ತಿರುವವರ ಸಾಲಿಗೆ ಈಗ ಜಯದೇವ ಉನದ್ಕತ್, ಶೆಲ್ಡನ್ ಜಾಕ್ಸನ್ ಮತ್ತು ಹರಪ್ರೀತ್ ಸಿಂಗ್ ಸೇರಿದ್ದಾರೆ.

ರಾಷ್ಟ್ರೀಯ ತಂಡಗಳಿಗೆ ನೀಡುವಂತೆ ಆಯಾ ರಾಜ್ಯದ ಆಟಗಾರರಿಗೆ ಅಲ್ಲಿನ ಕ್ರಿಕೆಟ್ ಸಂಸ್ಥೆಗಳು ಗುತ್ತಿಗೆ ಪದ್ಧತಿ ಜಾರಿಗೆ ತರಬೇಕು ಎಂದು ಮಾಜಿ ಆಟಗಾರ ರೋಹನ್ ಗಾವಸ್ಕರ್ ಕಳೆದ ತಿಂಗಳು ಸಲಹೆ ನೀಡಿದ್ದರು. ದೇಶಿ ಕ್ರಿಕೆಟರ್‌ಗಳ ಪೈಕಿ ಅನೇಕರಿಗೆ ಐಪಿಎಲ್‌ನಲ್ಲಿ ಆಡಲು ಅವಕಾಶ ಸಿಗುವುದಿಲ್ಲ. ಬಹುತೇಕರಿಗೆ ಉದ್ಯೋಗ ಭದ್ರತೆಯೂ ಇಲ್ಲ. ಆದ್ದರಿಂದ ಅವರು ಕ್ರಿಕೆಟ್ ಪಂದ್ಯಗಳನ್ನೇ ನಂಬಿಕೊಂಡಿರುತ್ತಾರೆ. ರಾಜ್ಯದ ಪ್ರಮುಖ 30 ಆಟಗಾರರನ್ನಾದರೂ ಗುತ್ತಿಗೆ ಪದ್ಧತಿಯಲ್ಲಿ ಸೇರಿಸಬೇಕು ಎಂದು ಸೌರಾಷ್ಟ್ರ ತಂಡದ ನಾಯಕ ಜಯದೇವ ಉನದ್ಕತ್ ಕೋರಿದ್ದಾರೆ.

ಛತ್ತೀಸ್‌ಘಡ ತಂಡದ ನಾಯಕ ಹರಪ್ರೀತ್ ಸಿಂಗ್ ಅವರು ಕೋವಿಡ್ ನಡುವೆಯೇ ಇಂಗ್ಲೆಂಡ್‌ನಲ್ಲಿ ಕ್ಲಬ್ ಕ್ರಿಕೆಟ್ ಆಡಲು ತೆರಳಿದ್ದಾರೆ. ಮೂರು ವರ್ಷಗಳಿಂದ ಬಾರ್ನ್ಸ್‌ಲಿ ವೂಲಿ ಮೈನರ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಉದ್ಯೋಗವೂ ಇಲ್ಲದೆ, ಪಂದ್ಯಗಳೂ ಇಲ್ಲದ್ದರಿಂದ ಇಂಗ್ಲೆಂಡ್‌ನಲ್ಲಿ ಕ್ಲಬ್ ಕ್ರಿಕೆಟ್ ಆಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಹೇಳಿದ್ದಾರೆ.

ದೇಶಿ ಆಟಗಾರರಿಗೆ ಪ್ಯಾಕೇಜ್ ಘೋಷಣೆಗೆ ಸಂಬಂಧಿಸಿ ರಾಜ್ಯ ಸಂಸ್ಥೆಗಳ ಜೊತೆ ಮಾತುಕತೆ ನಡೆದಿದೆ. ಮೇ 29ರಂದು ನಡೆದ ವಿಶೇಷ ಸಭೆಯಲ್ಲಿ ಈ ಕುರಿತು ಚರ್ಚೆಯೂ ನಡೆದಿದೆ ಎಂದು ಬಿಸಿಸಿಐ ಖಜಾಂಚಿ ಅರುಣ್ ಧುಮಾಲ್ ತಿಳಿಸಿದ್ದಾರೆ.


ಜಯದೇವ ಉನದ್ಕತ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಗುತ್ತಿಗೆ ಪದ್ಧತಿ ಜಾರಿಗೆ ತರಲು ಮಾಜಿ ಆಟಗಾರ ರೋಹನ್ ಗಾವಸ್ಕರ್ ಒತ್ತಾಯಿಸಿದ್ದರು
- ಅನೇಕರಿಗೆ ಐಪಿಎಲ್‌ನಲ್ಲಿ ಆಡಲು ಅವಕಾಶ ಇಲ್ಲ
- ರಾಜ್ಯ ಸಂಸ್ಥೆಗಳ ಜೊತೆ ಮಾತುಕತೆ ಆಗಿದೆ: ಅರುಣ್